

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 18 ಶನಿವಾರ 2022

ಸಂಪುಟ: 43 | ಸಂಚಿಕೆ: 63 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ವರ್ಷವಾದರೂ ಟೇಕ್‌ಆಫ್ ಆಗದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ: ಕೆಲ ಸಚಿವರಿಗೆ

ಆರ್‌ಎಸ್‌ಎಸ್ ಕ್ಲಾಸ್!

ಬೆಂಗಳೂರು, ಜೂ.17(ಕೆಎಂಶಿ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರಕ್ಕೆ ಒಂದು ವರ್ಷವಾಗುತ್ತಿದ್ದರೂ ಆಡಳಿತ ಇನ್ನೂ ಟೇಕ್ ಆಫ್ ಆಗದಿರುವ ಬಗ್ಗೆ ಅಸಮಾಧಾನಗೊಂಡಿರುವ ಆರ್‌ಎಸ್‌ಎಸ್, ಎರಡು ದಿನಗಳ ಕಾಲ ಬೈಠಕ್ ನಡೆಸಿ, ಕೆಲ ಸಚಿವರಿಗೆ ಕ್ಲಾಸ್ ತೆಗೆದುಕೊಳ್ಳಲು ನಿರ್ಧರಿಸಿದೆ.

ಬಸವರಾಜ ಬೊಮ್ಮಾಯಿ ಅವರ ಸಂಪುಟದ ಆಯ್ದ ಕೆಲವು ಸಚಿವರಿಗೆ ಜೂನ್ 23 ಹಾಗೂ 24 ರಂದು ಎರಡು ದಿನಗಳ ಕಾಲ ಕೇಶವಶಿಲ್ಪದಿಂದ ಸೂಚನೆ ಬಂದ ತಕ್ಷಣ ಬರುವಂತೆ ತಿಳಿಸಲಾಗಿದೆ. ಅಲ್ಲದೆ ಈ ಎರಡು ದಿನ ಸರ್ಕಾರದ ಕಾರ್ಯವೈಖರಿ ಹಾಗೂ ಹಿಂದುತ್ವ ಪ್ರತಿಪಾದನಾ ವಿಷಯಗಳಿಗೆ ಸಂಬಂಧಿಸಿದಂತೆ ಬೈಠಕ್ ನಡೆಸುತ್ತಿದೆ.

ಬೈಠಕ್ ಸಂದರ್ಭದಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಸಂಘ ಪರಿವಾರದ ಮುಕುಂದ್, ತಿಪ್ಪೇಸ್ವಾಮಿ, ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಸೇರಿದಂತೆ ಪರಿವಾರದ ಇತರ ಸದಸ್ಯರು ಮುಖ್ಯಮಂತ್ರಿ ಹಾಗೂ ಸಚಿವರ ಜೊತೆ ಆಡಳಿತ ಮತ್ತು ಹಿಂದುತ್ವ ಪ್ರತಿಪಾದನೆ ಬಗ್ಗೆ ಚಿಂತನ–ಮಂಥನ ನಡೆಸಲಿದ್ದಾರೆ.

ರಾಜ್ಯ ವಿಧಾನಸಭಾ ಚುನಾವಣೆಗೆ ಇನ್ನು 9 ತಿಂಗಳು ಬಾಕಿ ಉಳಿದಿದೆ, ಸರ್ಕಾರ ತನ್ನ ವರ್ಚಸ್ಸು ಉಳಿಸಿಕೊಳ್ಳಲು ಯಾವುದೇ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿಲ್ಲ. ಸರ್ಕಾರದ ವರ್ಚಸ್ಸು ಹೆಚ್ಚಾದರೆ ಪಕ್ಷದ ವರ್ಚಸ್ಸು ತಾನಾಗಿಯೇ ವೃದ್ಧಿಸುತ್ತದೆ. ಆದರೆ, ಇತ್ತ ಆಡಳಿತ ನಡೆಸುವವರು ಗಮನ ಕೊಡುತ್ತಿಲ್ಲ ಎಂಬುದು ಆರ್‌ಎಸ್‌ಎಸ್ ಅಸಮಾಧಾನ. ಕೆಲವು ಸಚಿವರು ಒಳ್ಳೆ ಆಡಳಿತ ನೀಡಿದರೂ ಅದನ್ನು ತಮ್ಮ ವೈಯಕ್ತಿಕ ವರ್ಚಸ್ಸು ವೃದ್ಧಿಗೆ ಬಳಕೆ ಮಾಡಿಕೊಳ್ಳುತ್ತಿದ್ದಾರೆಯೇ ಹೊರತು ಪಕ್ಷದ ಸಂಘಟನೆಗೆ ಗಮನ ಕೊಡುತ್ತಿಲ್ಲ. ಸರ್ಕಾರದ ವಿರುದ್ಧ ಭ್ರಷ್ಟಾಚಾರ ಮತ್ತು ಹಗರಣಗಳ ಆರೋಪ ಬಂದರೂ ಅದನ್ನು ಬಲವಾಗಿ ನಿರಾಕರಣೆ ಮಾಡುವ ಕೆಲಸವನ್ನೂ ಮಾಡಿಲ್ಲ, ವಿರೋಧಿಗಳಿಗೆ ಸೂಕ್ತ ಉತ್ತರವನ್ನೂ ನೀಡಿಲ್ಲ.

ಇನ್ನು ಪಠ್ಯ ಪುಸ್ತಕ ವಿಚಾರದಲ್ಲಿ ಬುದ್ಧ, ಅಂಬೇಡ್ಕರ್, ಬಸವಣ್ಣ, ಕುವೆಂಪು ವಿಷಯದಲ್ಲಿ ಸರ್ಕಾರ ಸಂಪೂರ್ಣವಾಗಿ ಎಡವಿದೆ. ಪ್ರತಿಪಕ್ಷದ ಸದಸ್ಯರು ಮತ್ತು ಬುದ್ಧಿ ಜೀವಿಗಳು ಟೀಕಾಪ್ರಹಾರ ಮಾಡಿದ ಸಂದರ್ಭದಲ್ಲಿ ಸಚಿವರು ಸಮಜಾಯಿಷಿ ನೀಡುವ ಕಾರ್ಯವನ್ನೂ ಮಾಡಿಲ್ಲ. ಈ ವಿಚಾರದಲ್ಲಿ ಪೂರ್ಣವಾಗಿ ಎಡವಿದ್ದಾರೆ.

ಇನ್ನು ಪ್ರಜ್ಞಾವಂತ ಮತದಾರರ ಕ್ಷೇತ್ರದಿಂದ ಪರಿಷತ್ ಚುನಾವಣೆಯಲ್ಲಿ ಹಿನ್ನಡೆಯಾಗಿದೆ. ಉತ್ತರ ಕರ್ನಾಟಕ ಭಾಗದವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಿದರೂ ಪಕ್ಷ ಅಲ್ಲೇ ಸೋಲನನುಭವಿಸುತ್ತಿದೆ.

ಈ ಎಲ್ಲಾ ವಿಚಾರಗಳನ್ನು ಮುಂದಿಟ್ಟುಕೊಂಡು ಎರಡು ದಿನಗಳ ಕಾಲ ಬೈಠಕ್ ನಡೆಸುವ ಸಂಘ ಪರಿವಾರ, ಇನ್ನುಳಿದ ಅವಧಿಯಲ್ಲಿ ಸರ್ಕಾರ ಹೇಗೆ ಆಡಳಿತ ನಡೆಸಬೇಕು ಹಾಗೂ ಹಿಂದುತ್ವ ಸಂಘಟನೆಗೆ ಯಾವ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು ಎಂಬ ಬಗ್ಗೆ ಪಾಠ ಮಾಡಲಿದೆ.

ಸೇನೆ ನೇಮಕಾತಿ ವಯೋಮಿತಿ ಏರಿಕೆಗೆ ಸಿಎಂ ಬೊಮ್ಮಾಯಿ ಸ್ವಾಗತ

ಬೆಂಗಳೂರು, ಜೂ.17(ಕೆಎಂಶಿ)– ಅಗ್ನಿಪಥ್ ಯೋಜನೆಯಡಿ ನೇಮಕಾತಿ ವಯೋಮಿತಿಯನ್ನು 21 ರಿಂದ 23 ವರ್ಷಕ್ಕೆ ಏರಿಸುವ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಜನರ ಅಗತ್ಯಗಳಿಗೆ ಸ್ಪಂದಿಸಿದೆ ಎಂಬುದನ್ನು ನಿರೂಪಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.



ಕಳೆದ ಎರಡು ವರ್ಷಗಳಿಂದ ರಕ್ಷಣಾ ಪಡೆಗಳಿಗೆ ನೇಮಕಾತಿ ನಡೆದಿರಲಿಲ್ಲ, ಮೊದಲ ವರ್ಷದ ನೇಮಕಾತಿಯಲ್ಲಿ ವಯೋಮಿತಿಯನ್ನು ಹೆಚ್ಚಿಸಲಾಗಿದೆ, ಈ ನಿರ್ಧಾರದಿಂದ ದೊಡ್ಡ ಸಂಖ್ಯೆಯಲ್ಲಿ ಯುವಜನರಿಗೆ ಪ್ರಯೋಜನವಾಗಲಿದೆ. ತಾಯ್ನಾಡಿನ ಸೇವೆಯ ಪಥದಲ್ಲಿ ಯಶಸ್ವಿಯಾಗಿ ನಡೆದು ತಮ್ಮ ಉಜ್ವಲ ಭವಿಷ್ಯವನ್ನು ಯುವ ಜನತೆ ರೂಪಿಸಿಕೊಳ್ಳಲಿದ್ದಾರೆ. ದೇಶದ ಯುವಜನರ ಪರವಾಗಿ ಪ್ರಧಾನಮಂತ್ರಿಗಳಿಗೆ ಟ್ವೀಟ್ ಮೂಲಕ ಸಿಎಂ ಧನ್ಯವಾದ ತಿಳಿಸಿದ್ದಾರೆ.

ಇಂದು ದ್ವಿತೀಯ ಪಿಯು ಫಲಿತಾಂಶ

ಬೆಂಗಳೂರು, ಜೂ.17(ಕೆಎಂಶಿ)– ಮಕ್ಕಳ ಭವಿಷ್ಯದ ಮಹತ್ವದ ತಿರುವು ಎಂದೇ ಪರಿಗಣಿಸಲ್ಪಡುವ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ನಾಳೆ ಬೆಳಗ್ಗೆ 11 ಗಂಟೆಗೆ ಪ್ರಕಟವಾಗಲಿದೆ.

ಕಳೆದ ಏ.22ರಿಂದ ಮೇ 18ರವರೆಗೆ ನಡೆದ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶವನ್ನು ಶನಿವಾರ ಬೆಳಗ್ಗೆ 11 ಗಂಟೆಗೆ ಪ್ರಕಟಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಮ್ಮ ಅಧಿಕೃತ ಟ್ವಿಟರ್‌ನಲ್ಲಿ ಪ್ರಕಟಿಸಿದ್ದಾರೆ. ▶ 6ನೇ ಪುಟಕ್ಕೆ

ರಾಜ್ಯದಲ್ಲಿ 81 ಉದ್ಯಮಗಳಿಗೆ ಅನುಮೋದನೆ; 6825ಕ್ಕೂ ಅಧಿಕ ಉದ್ಯೋಗ ಸೃಷ್ಟಿ

ಬೆಂಗಳೂರು, ಜೂ.17(ಕೆಎಂಶಿ)– ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಗೆ ಮತ್ತಷ್ಟು ಉತ್ತೇಜನ ನೀಡಿ ಉದ್ಯೋಗಗಳ ಸೃಷ್ಟಿಗೆ ಒತ್ತು ನೀಡಿರುವ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಸುಮಾರು 6,825ಕ್ಕೂ ಹೆಚ್ಚು ಜನರಿಗೆ ಉದ್ಯೋಗವನ್ನು ಸೃಷ್ಟಿಸುವ 2,689.51 ಕೋಟಿ ರೂ. ಮೌಲ್ಯದ 81 ಕೈಗಾರಿಕಾ ಯೋಜನೆಗಳಿಗೆ ಇಂದಿಲ್ಲಿ ಅನುಮೋದನೆ ನೀಡಿದೆ.



ಡಾ.ಮುರುಗೇಶ್ ನಿರಾಣಿ

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಡಾ.ಮುರುಗೇಶ್ ಆರ್. ನಿರಾಣಿ ನೇತೃತ್ವದಲ್ಲಿ ನಡೆದ 132ನೇ ರಾಜ್ಯ ಮಟ್ಟದ ಏಕಗವಾಕ್ಷಿ ತೆರವು ಸಮಿತಿ (ಎಸ್‌ಎಲ್ ಎಸ್‌ಡಬ್ಲ್ಯುಸಿಸಿ) ಸಭೆ ಈ ಯೋಜನೆಗಳಿಗೆ ಅನುಮೋದನೆ ನೀಡಿತು.

ಸಮಿತಿಯು 50 ಕೋಟಿ ರೂ.ಗಿಂತ ಹೆಚ್ಚಿನ ಹೂಡಿಕೆಯ 7 ಪ್ರಮುಖ ಬೃಹತ್ ಮತ್ತು ಮಧ್ಯಮ ಗಾತ್ರದ ಕೈಗಾರಿಕಾ ಯೋಜನೆಗಳನ್ನು ಪರಿಗಣಿಸಿ ಅನುಮೋದನೆ ನೀಡಿದೆ. 1,229.43 ರೂ. ಮೌಲ್ಯದ ಈ ಯೋಜನೆಗಳು ರಾಜ್ಯದಲ್ಲಿ 1,734 ಜನರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ ಎಂದು ನಿರಾಣಿ ತಿಳಿಸಿದ್ದಾರೆ.

ಎಸ್‌ಎಲ್‌ಎಸ್‌ಡಬ್ಲ್ಯುಸಿಸಿ ಸಭೆಯಲ್ಲಿ 15 ಕೋಟಿ ರೂ.ಗಿಂತ ಹೆಚ್ಚು ಹಾಗೂ 50 ಕೋಟಿ ರೂ. ಗಿಂತ ಕಡಿಮೆ ಹೂಡಿಕೆಯ 71 ಹೊಸ ಯೋಜನೆಗಳಿಗೆ ಅನುಮತಿ ನೀಡಲಾಗಿದೆ ಹಾಗೂ 1,308.06 ಕೋಟಿ ರೂ. ಮೌಲ್ಯದ ಈ ಯೋಜನೆಗಳು ರಾಜ್ಯದಲ್ಲಿ 5,091 ಜನರಿಗೆ ಉದ್ಯೋಗಗಳನ್ನು ಸೃಷ್ಟಿಸಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ. 151.42 ಕೋಟಿ ರೂ. ಹೂಡಿಕೆಯ ಮೂರು ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

ಹಾಡಹಗಲೇ ಮಹಿಳೆ ಹತ್ಯೆ: 48 ಗಂಟೆಯೊಳಗೆ ಆರೋಪಿ ಬಂಧನ

ನಂಬಿಕಸ್ಥ ಕೆಲಸಗಾರನೇ ಕತ್ತು ಕೊಯ್ದ !

ಕಿಕ್ಕೇರಿ, ಜೂ.17– ಹಾಡಹಗಲೇ ಮೆಡಿಕಲ್ ಶಾಪ್ ಮಾಲೀಕರಾದ ಪುಷ್ಪಲತಾ ಅಲಿಯಾಸ್ ನಳಿನ(45) ಅವರನ್ನು ಕತ್ತು ಕುಯ್ದು ಹತ್ಯೆ ಮಾಡಿದ್ದ ಆರೋಪಿಯನ್ನು ಘಟನೆ ನಡೆದ 48 ಗಂಟೆಯೊಳಗಾಗಿ ಬಂಧಿಸುವಲ್ಲಿ ಕಿಕ್ಕೇರಿ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.



ಹತ್ಯೆಗೀಡಾದ ಪುಷ್ಪಲತಾ ಅವರ ನಂಬಿಕೆ ಗಿಟ್ಟಿಸಿಕೊಂಡಿದ್ದು, ಅವರೊಂದಿಗೆ ಹಣಕಾಸಿನ ವ್ಯವಹಾರವನ್ನೂ ಹೊಂದಿದ್ದ ಉದ್ದಿನಮಲ್ಲನಹೊಸೂರು ನಿವಾಸಿ ರವಿಕುಮಾರ್(29) ಬಂಧಿತ ಆರೋಪಿಯಾಗಿದ್ದು, ಹಣಕಾಸು ವ್ಯವಹಾರದ ವೈಮನಸ್ಸಿನಿಂದಾಗಿ ಹತ್ಯೆ ನಡೆದಿದೆ ಎಂದು ಪೊಲೀಸರ ವಿಚಾರಣೆ ವೇಳೆ ತಿಳಿದು ಬಂದಿದೆ.

ಕಿಕ್ಕೇರಿಯ ಶ್ರೀಕಾಂತ್ ಮೆಡಿಕಲ್ ಸ್ಟೋರ್ ಮಾಲೀಕರಾಗಿದ್ದ ಪುಷ್ಪಲತಾ ಕಿಕ್ಕೇರಿ ಟೌನ್‌ನ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಮೆಡಿಕಲ್ ಶಾಪ್‌ಗೆ ಹೊಂದಿಕೊಂಡಂತಿರುವ ಡಾ.ಯಶವಂತ್ ಅವರ ಕ್ಲಿನಿಕ್‌ಗೆ ಬರುವ ರೋಗಿಗಳಿಗೆ ಪುಷ್ಪಲತಾ ಟೋಕನ್ ಕೊಡುವ ಕೆಲಸವನ್ನೂ ನಿರ್ವಹಿಸುತ್ತಿದ್ದರು. ತನ್ನ ಕೃಷಿ ಚಟುವಟಿಕೆಗೆ ಸಹಕಾರಿಯಾಗಿರುವಂತೆ ರವಿಕುಮಾರ್‌ನನ್ನು ಟ್ರ್ಯಾಕ್ಟರ್ ಚಾಲಕನನ್ನಾಗಿ ನೇಮಕ ಮಾಡಿಕೊಂಡಿದ್ದರು. ತನ್ನ ನಂಬಿಕಸ್ಥನಾಗಿದ್ದರಿಂದ ಆತನೊಂದಿಗೆ ಹಣಕಾಸಿನ ವ್ಯವಹಾರವನ್ನೂ ಕೂಡ ಹೊಂದಿದ್ದರು. ಆತನೂ ಕೂಡ ಪುಷ್ಪಲತಾ ಅವರಿಗೆ ಕೃಷಿ ಚಟುವಟಿಕೆಯಲ್ಲಿ ಸಹಕರಿಸುವುದರ ಜೊತೆಗೆ ಮೆಡಿಕಲ್ ಶಾಪ್‌ಗೂ ಬಂದು ಸಹಾಯ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಪುಷ್ಪಲತಾ ಮತ್ತು ರವಿಕುಮಾರ್ ನಡುವೆ ಹಣಕಾಸು ವಿಚಾರದಲ್ಲಿ ಇತ್ತೀಚೆಗೆ ವೈಮನಸ್ಸು ಇತ್ತಾದರೂ ಪುಷ್ಪಲತಾ, ಬಹಳ ನಂಬಿಕಸ್ಥನಾದ ಆತನ ನೆರವು ಆಗಾಗ ಪಡೆಯುತ್ತಲೇ ಇದ್ದರು. ಆದರೆ ಅವರನ್ನು ಹತ್ಯೆ ಮಾಡಿಬಿಟ್ಟರೆ ತನ್ನ ಹಣಕಾಸು ಸಮಸ್ಯೆ ನಿವಾರಣೆಯಾಗುತ್ತದೆ ▶ 6ನೇ ಪುಟಕ್ಕೆ

ಹಾಸನ, ಕೊಡಗಿನ ಇಂಜಿನಿಯರ್ಸ್ ಸೇರಿ ರಾಜ್ಯಾದ್ಯಂತ

21 ಅಧಿಕಾರಿಗಳ 80 ಸ್ಥಳಗಳಲ್ಲಿ ಎಸಿಬಿ ದಾಳಿ

- ಅಪಾರ ಪ್ರಮಾಣದ ಆಸ್ತಿಪಾಸ್ತಿ ದಾಖಲೆ ವಶ
- ಬಿಡಿಎ ಮಾಲಿ ಬೆಂಗಳೂರಲ್ಲಿ ಮೂರು ಭವ್ಯ ಬಂಗಲೆ ಮಾಲೀಕ

ಬೆಂಗಳೂರು, ಜೂ.17(ಕೆಎಂಶಿ)– ರಾಜ್ಯ ಸರ್ಕಾರದ 21 ಅಧಿಕಾರಿಗಳಿಗೆ ಸೇರಿದ 80 ಸ್ಥಳಗಳ ಮೇಲೆ ಏಕಕಾಲಕ್ಕೆ ಬೆಳ್ಳಂ ಬೆಳಗ್ಗೆ ಎಸಿಬಿ ಅಧಿಕಾರಿಗಳು ಮೆಗಾ ರೇಡ್ ನಡೆಸಿದ್ದು, 300ಕ್ಕೂ ಹೆಚ್ಚು ಪೊಲೀಸರು ದಾಳಿಯಲ್ಲಿ ಪಾಲ್ಗೊಂಡು ಭಾರೀ ಪ್ರಮಾಣದ ಅಕ್ರಮ ಸಂಪತ್ತು ಪತ್ತೆ ಹಚ್ಚಿದ್ದಾರೆ.

ಕಳೆದ ಕೆಲ ದಿನಗಳಿಂದ ಖಾಲಿ ಇದ್ದ ಲೋಕಾಯುಕ್ತರ ನೇಮಕ ಬೆನ್ನಲ್ಲೇ ಎಸಿಬಿ ಅಧಿಕಾರಿಗಳು ಭಾರೀ ಪ್ರಮಾಣದ ದಾಳಿ ನಡೆಸಿ ಸಂಚಲನ ಸೃಷ್ಟಿಸಿದ್ದಾರೆ. ಭ್ರಷ್ಟ ಅಧಿಕಾರಿಗಳೊಂದಿಗೆ ಇಬ್ಬರು ನಿವೃತ್ತ ಸರ್ಕಾರಿ ನೌಕರರಿಗೂ ದಾಳಿ ಬಿಸಿ ಮುಟ್ಟಿಸಿರುವುದು ವಿಶೇಷವಾಗಿದೆ.

ಬೆಳಗಾವಿಯ ಸೂಪರಿಂಟೆಂಡೆಂಟ್ ಎಂಜಿನಿಯರ್ ಭೀಮಾರಾವ್ ವೈ. ಪವಾರ್, ಉಡುಪಿ ಸಣ್ಣ ನೀರಾವರಿ ಇಲಾಖೆಯ ಸಹಾಯಕ ಅಭಿಯಂತರ ಹರೀಶ್, ಹಾಸನ ಸಣ್ಣ ನೀರಾವರಿ ಇಲಾಖೆಯ ಎಇಇ ರಾಮಕೃಷ್ಣ ಎಚ್.ವಿ., ಕಾರವಾರ ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ರಾಜೀವ್ ಪುರುಷಯ್ಯ ನಾಯಕ್, ಪೊನ್ನಂಪೇಟೆ ಜಿಲ್ಲಾ ಪಂಚಾಯತ್ ಜೂನಿಯರ್ ಎಂಜಿನಿಯರ್ ಬಿ.ಆರ್.ಬೋಪಯ್ಯ, ಬೆಳಗಾಂ ಐಜಿಆರ್ ಕಚೇರಿಯ ಜಿಲ್ಲಾ ರಿಜಿಸ್ಟ್ರಾರ್ ಮಧುಸೂದನ್, ಹೂವಿನ ಹಡಗಲಿ ಸಣ್ಣ ನೀರಾವರಿ ಇಲಾಖೆಯ ಸಹಾಯಕ ಎಂಜಿನಿಯರ್ ಪರಮೇಶ್ವರಪ್ಪ, ಬಾಗಲಕೋಟೆ ಆರ್‌ಟಿಒ ಯಲ್ಲಪ್ಪ ಎನ್.ಪಡಸಾಲಿ, ಬಾಗಲಕೋಟೆ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಶಂಕರಪ್ಪ ನಾಗಪ್ಪ ಗೋಗಿ, ಗದಗ ಆರ್‌ಡಿಪಿಆರ್ ಪಂಚಾಯತ್ ಗ್ರೇಡ್ ಕಾರ್ಯದರ್ಶಿ ಪ್ರದೀಪ್ ಎಸ್. ಹಾಲೂರ್, ಬೆಂಗಳೂರಿನ ಉಪ ಮುಖ್ಯ ವಿದ್ಯುತ್ ಇನ್ಸ್‌ಪೆಕ್ಟರ್ ಸಿದ್ದಪ್ಪ ಟಿ., ▶ 6ನೇ ಪುಟಕ್ಕೆ





ಉಡುಪಿ ಸಣ್ಣ ನೀರಾವರಿ ಇಲಾಖೆಯ ಸಹಾಯಕ ಅಭಿಯಂತರ ಹರೀಶ್ ಅವರ ಮನೆಯಲ್ಲಿ ಎಸಿಬಿ ತಪಾಸಣೆ ನಡೆಸುತ್ತಿರುವುದು. ಮತ್ತೊಂದು ಚಿತ್ರದಲ್ಲಿ ಹರೀಶ್ ಭವ್ಯ ಬಂಗಲೆಯನ್ನು ಕಾಣಬಹುದು.



SDJ GOLD
ಒಂದು ಗ್ರಾಂ ಚಿನ್ನಕ್ಕೆ 5300
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಹಣವನ್ನು ಕೊಡುತ್ತೇವೆ.
8884304444

ನ್ಯಾಷನಲ್ ಹೆರಾಲ್ಡ್ ಪ್ರಕರಣ: ತನಿಖೆ ನೆಪದಲ್ಲಿ ರಾಹುಲ್ ಗಾಂಧಿಗೆ ಕಿರುಕುಳ ಖಂಡಿಸಿ

ಮೈಸೂರಲ್ಲಿ ಕಾಂಗ್ರೆಸ್ ಆಕ್ರೋಶ

ಮೆರವಣಿಗೆ ವಿಷಯದಲ್ಲಿ ಪೊಲೀಸರೊಂದಿಗೆ ಜಟಾಪಟಿ



ಪ್ರತಿಭಟನಾಕಾರರ ವಶಕ್ಕೆ ಪಡೆಯಲು ಪೊಲೀಸರ ಹರಸಾಹಸ.

ಮೂವರಿಗೆ ಗಾಯ

ಪೊಲೀಸರು ಪ್ರತಿಭಟನಾನಿರತರನ್ನು ಬಂಧಿಸುವುದಕ್ಕೆ ಮುಂದಾದಾಗ ಪರಸ್ಪರ ತಳ್ಳಾಟ ನೂಕಾಟ ನಡೆಯಿತು. ಈ ವೇಳೆ 5–6 ಮಂದಿ ನೆಲಕ್ಕೆ ಬಿದ್ದರು. ಅದರಲ್ಲಿ ಓರ್ವ ಮಹಿಳೆ ಸೇರಿದಂತೆ ಮೂವರಿಗೆ ತಲೆಗೆ ಗಾಯವಾಯಿತು. ಬಳಿಕ ಅವರು ಸ್ಥಳೀಯ ಕ್ಲಿನಿಕ್‌ಗೆ ತೆರಳಿ ಚಿಕಿತ್ಸೆ ಪಡೆದರು.

ಮೈಸೂರು,ಜೂ.17(ಎಂಟಿವೈ)– ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಪದೇ ಪದೆ ಜಾರಿ ನಿರ್ದೇಶನಾಲಯ (ಇಡಿ) ವಿಚಾರಣೆ ನೆಪದಲ್ಲಿ ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿ, ಕಾಂಗ್ರೆಸ್ ಕಾರ್ಯಕರ್ತರು ಇಂದು ಪ್ರತಿಭಟನಾ ಮೆರವಣಿಗೆ ನಡೆಸಲು ಮುಂದಾದಾಗ ಪೊಲೀಸರು ಹಾಗೂ ಪ್ರತಿಭಟನಾನಿರತ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ಉಂಟಾದ ಹಿನ್ನೆಲೆಯಲ್ಲಿ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಪೊಲೀಸರ ತಡೆಗೋಡೆ ಭೇದಿಸಿ ಮೆರವಣಿಗೆ ನಡೆಸಲು ಮುಂದಾದ ಹಿನ್ನೆಲೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ, ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ವಾಸು, ಕಳಲೆ ಕೇಶವಮೂರ್ತಿ, ಆರ್.ಧರ್ಮಸೇನಾ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಕಾಂಗ್ರೆಸ್ ನಗರಾಧ್ಯಕ್ಷ ಆರ್. ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್ ಸೇರಿದಂತೆ 100ಕ್ಕೂ ಹೆಚ್ಚು ಕಾಂಗ್ರೆಸ್ ಕಾರ್ಯಕರ್ತರನ್ನು ಬಂಧಿಸಿ, ಚಾಮುಂಡಿ ಬೆಟ್ಟದ ತಪ್ಪಲಿನ ಸಿಎಆರ್ ಮೈದಾನಕ್ಕೆ ಕರೆದೊಯ್ದರು. ನಂತರ ಪರಿಸ್ಥಿತಿ ತಿಳಿಯಾಗಿ, ಉಳಿದವರು ವಾಪಸ್ಸಾದರು.

ಪುರಭವನದ ಆವರಣದಲ್ಲಿ ಧರಣಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಮೂರು ದಿನಗಳ ಕಾಲ ಇಡಿ ವಿಚಾರಣೆ ನಡೆಸುತ್ತಿರುವುದನ್ನು ಖಂಡಿಸಿ, ಮೈಸೂರು ನಗರ ಹಾಗೂ ಗ್ರಾಮಾಂತರ ಕಾಂಗ್ರೆಸ್ ಸಮಿತಿ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ನ್ಯಾಷನಲ್ ಹೆರಾಲ್ಡ್ ಪತ್ರಿಕೆಯನ್ನು ಸ್ವಾತಂತ್ರ್ಯ ಸಂಗ್ರಾಮದ ಜನಜಾಗೃತಿಗೆ 1937ರಲ್ಲಿ ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್ ಸೇರಿದಂತೆ ಹಲವರು ಸೇರಿ ಪ್ರಾರಂಭಿಸಿದರು. ಬ್ರಿಟಿಷರು 1945ರವರೆಗೆ ಪತ್ರಿಕೆಯನ್ನು ಬ್ಯಾನ್ ಮಾಡಿದ್ದರು. ಬಳಿಕ ಪತ್ರಿಕೆ ನಷ್ಟದ ಸುಳಿಗೆ ಸಿಲುಕಿತು. ಪತ್ರಿಕೆಯನ್ನು ನಡೆಸುವ ಸಲುವಾಗಿ ಅಖಿಲ ಭಾರತ ಕಾಂಗ್ರೆಸ್ 90 ಕೋಟಿ ನೆರವು ನೀಡಿತು. ಇದರ ಲೆಕ್ಕವನ್ನು ಚುನಾವಣಾ ಆಯೋಗಕ್ಕೆ ನೀಡಿ ಕ್ಲೀನ್‌ಚಿಟ್ ಪಡೆಯಲಾಗಿದೆ. ಇಲ್ಲಿ ಯಾವುದೇ ಆಸ್ತಿಪಾಸ್ತಿ, ಹಣಕಾಸಿನ ಪರಭಾರೆ ಆಗಿಲ್ಲ. ಆದರೂ ಕೇಂದ್ರ ಸರ್ಕಾರ ದ್ವೇಷದ ರಾಜಕಾರಣದ ಮೂಲಕ ಕಿರುಕುಳ ನೀಡುತ್ತಿದೆ ಎಂದು ಕಿಡಿ ಕಾರಿದರು.

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವಿರೋಧಪಕ್ಷಗಳನ್ನು ದಮನ ಮಾಡುವ ಕೆಲಸ ಮಾಡುತ್ತಿದೆ. ಅಧಿಕಾರ ದುರ್ಬಳಕೆ ಮಾಡಿಕೊಂಡು, ಸರ್ಕಾರಿ ಸ್ವಾಯತ್ತ ಸಂಸ್ಥೆಗಳ ಮೂಲಕ ವಿರೋಧಿಗಳನ್ನು ಸದೆಬಡಿಯಲು ಯತ್ನಿಸುತ್ತಿದೆ. ಸರ್ಕಾರದ ಕೈಗೊಂಬೆ ಯಾಗಿರುವ ಇಡಿ ವಿಚಾರಣೆ ನೆಪದಲ್ಲಿ ರಾಹುಲ್ ಗಾಂಧಿಯವರಿಗೆ ಕಿರುಕುಳ ನೀಡುತ್ತಿದೆ. ಇದನ್ನು ರಾಷ್ಟ್ರಪತಿಗಳ ಗಮನಕ್ಕೆ ತರಲಾಗುವುದು. ಇದೇ ರೀತಿ ಕಿರುಕುಳ ಮುಂದುವರಿಸಿದರೆ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಮಾತನಾಡಿ, ದೇಶದಲ್ಲಿ ಕಂಡರಿಯದ ರೀತಿಯಲ್ಲಿ ಸಂವಿಧಾನ ವಿರೋಧಿ ಚಟುವಟಿಕೆಗಳು ನಡೆಯುತ್ತಿವೆ. ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ರಾಜಕೀಯ ದಾಳ ಮಾಡಿಕೊಂಡು ಎದುರಾಳಿಗಳ ಧ್ವನಿ ಅಡಗಿಸುವ ಕೆಲಸ ಮಾಡುತ್ತಿದೆ. ತನಿಖಾ ಸಂಸ್ಥೆಗಳು ನಿಷ್ಪಕ್ಷಪಾತವಾಗಿ, ಸ್ವತಂತ್ರವಾಗಿ ಕೆಲಸ ▶ 6ನೇ ಪುಟಕ್ಕೆ



ಪ್ರತಿಭಟನಾಕಾರರನ್ನು ವಶಕ್ಕೆ ಪಡೆದ ಪೊಲೀಸರು.

ಪ್ರಧಾನಿ ಮೋದಿ ಮೈಸೂರು ಭೇಟಿ ಹಿನ್ನೆಲೆ

ಎಸ್‌ಪಿಜಿ ಅಧಿಕಾರಿಗಳಿಂದ ಭದ್ರತಾ ವ್ಯವಸ್ಥೆ ಪರಿಶೀಲನೆ



ಮೈಸೂರು, ಜೂ.17(ಆರ್‌ಕೆ)–ಜೂನ್ 20 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೈಸೂರಿಗೆ ಆಗಮಿಸುತ್ತಿರುವುದರಿಂದ ವಿಶೇಷ ಭದ್ರತಾ ತಂಡ (SPG)ದ ಹಿರಿಯ ಅಧಿಕಾರಿಗಳು ಇಂದಿಲ್ಲಿ ಭದ್ರತಾ ವ್ಯವಸ್ಥೆಗಳನ್ನು ಪರಿಶೀಲಿಸಿದರು.

ಇಂದು ಬೆಳಗ್ಗೆ 10 ಗಂಟೆಗೆ ಮೈಸೂರಿಗೆ ಆಗಮಿಸಿದ ಎಸ್‌ಪಿಜಿಯ 7 ಅಧಿಕಾರಿಗಳ ತಂಡವು, ಅರಮನೆ ಆವರಣಕ್ಕೆ ತೆರಳಿ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ನಗರ ಪೊಲೀಸ್ ಕಮೀಷ್ನರ್ ಡಾ. ಚಂದ್ರಗುಪ್ತ, ಎಸ್ಪಿ ಆರ್.ಚೇತನ್, ಡಿಸಿಪಿಗಳು, ರಾಜ್ಯ ಗುಪ್ತ ದಳದ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಿದರು.


ಜೂನ್ 21ರಂದು ಬೆಳಗ್ಗೆ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಪ್ರಧಾನಿಗಳು ಆಗಮಿಸುವ ಪ್ರವೇಶ ದ್ವಾರ, ನಿರ್ಗಮನ, ವೇದಿಕೆ, ಯೋಗಾಸನಕ್ಕೆ ಸಿದ್ಧತೆ, ಯೋಗ ಪಟುಗಳ ಆಗಮನ–ನಿರ್ಗಮನ ದ್ವಾರಗಳು, ಜನರಿಗೆ ಉಪಹಾರ ವ್ಯವಸ್ಥೆಗೆ ನಿಗದಿಪಡಿಸಿರುವ ಸ್ಥಳಗಳನ್ನು ಎಸ್‌ಪಿಜಿ ಅಧಿಕಾರಿಗಳು ವೀಕ್ಷಿಸಿದರು.

ಪ್ರಧಾನಿಗಳು ಪಾಲ್ಗೊಳ್ಳುವ ಕಾರ್ಯಕ್ರಮದ ವೇದಿಕೆಯ ▶ 6ನೇ ಪುಟಕ್ಕೆ

ಡಿ ನೋಟಿಫಿಕೇಷನ್ ಪ್ರಕರಣ

ಕೋರ್ಟ್‌ಗೆ ಹಾಜರಾದ ಬಿಎಸ್‌ವೈ

ಜಾಮೀನು ಕೋರಿ ಅರ್ಜಿ



ಬೆಂಗಳೂರು, ಜೂ.17– ಡಿ ನೋಟಿಫಿಕೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರು ಶುಕ್ರವಾರ ಜನಪ್ರತಿನಿಧಿಗಳ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಹಾಜರಾಗಿದ್ದಾರೆ.

ಹಿರಿಯ ವಕೀಲ ಸಿ.ವಿ. ನಾಗೇಶ್ ಅವರೊಂದಿಗೆ ಆಗಮಿಸಿದ ಕರ್ನಾಟಕ ಬಿಜೆಪಿಯ ಪ್ರಬಲ ನಾಯಕ ಯಡಿಯೂರಪ್ಪ ಅವರು, ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯ ವಿಚಾರಣೆ ನಡೆಸಿದ ಸೆಷನ್ಸ್ ನ್ಯಾಯಾಧೀಶ ಬಿ.ಜಯಂತಕುಮಾರ್ ಅವರು, ಈ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ದೂರುದಾರರ ಪರ ವಕೀಲರಿಗೆ ಸೂಚಿಸಿದ್ದಾರೆ.

ಜಾಮೀನು ಅರ್ಜಿಯನ್ನು ಪರಿಶೀಲಿಸಿದ ನಂತರ ಪ್ರತಿಕ್ರಿಯೆ ಸಲ್ಲಿಸಲಾಗುವುದು ಎಂದು ದೂರುದಾರರ ಪರ ವಕೀಲ ಕೆ.ವಿ.ಧನಂಜಯ್ ಕೋರ್ಟ್‌ಗೆ ತಿಳಿಸಿದ್ದಾರೆ.





ಮೈ.ವಿ.ರವಿಶಂಕರ್ ಸೋಲು ನನಗೆ ವೈಯಕ್ತಿಕ ನೋವು

ಸಂಸದ ಪ್ರಸಾದ್ ಸಿಂಹ ಬೇಸರದ ನುಡಿ

ಮೈಸೂರು, ಜೂ.17(ಆರ್‌ಕೆಬಿ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಜನರು ಬಿಜೆಪಿಯ ಕೈಹಿಡಿಯುತ್ತಾರೆಂಬ ಭಾವನೆ ಇತ್ತು. ಚುನಾವಣೆ ಎಂದ ಮೇಲೆ ಸ್ವಲ್ಪ ಹೆಚ್ಚು ಕಡಿಮೆ ಆಗುವುದು ಸಹಜ. ಆದರೆ ಮೈ.ವಿ.ರವಿಶಂಕರ್ ಸೋಲು ವೈಯಕ್ತಿಕವಾಗಿ ನನಗೆ ನೋವಾಗಿದೆ. ರವಿ ಅಣ್ಣನವರನ್ನು ಗೆಲ್ಲಿಸಲು ಸಾಧ್ಯವಾಗಲಿಲ್ಲ. ಈ ಸೋಲಿನ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳುತ್ತಿದ್ದೇವೆ ಎಂದು ಸಂಸದ ಪ್ರತಾಪ್‌ಸಿಂಹ ಬೇಸರ ವ್ಯಕ್ತಪಡಿಸಿದರು.



ವಕೀಲರ ಬಗ್ಗೆ ನೀಡಿದ ಹೇಳಿಕೆ ಈ ಚುನಾವಣೆ ಮೇಲೆ ಪರಿಣಾಮ ಬೀರಿದೆ ಎಂಬ ಆರೋಪಗಳು ಕೇಳಿ ಬರುತ್ತಿವೆಯಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಇಂತಹ ಜಂಭದ, ಸೊಕ್ಕಿನ ಮಾತು ಬೇಡ. ಈ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಗೆಲುವು ಎಂದು ಭಾವಿಸುವುದಾದರೆ, ಹಿಂದೆ 2016ರಲ್ಲಿ ಸಿದ್ದರಾಮಯ್ಯರ ಅಭ್ಯರ್ಥಿ ಡಾ.ಹೆಚ್.ಎನ್.ರವೀಂದ್ರ ಕೇವಲ 6 ಸಾವಿರ ಮತಗಳನ್ನಷ್ಟೇ ತೆಗೆದುಕೊಂಡು, ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಾಗದ ಮುಖಭಂಗ ಆಗಲಿಲ್ಲವೇ? ಅದಕ್ಕೇನು ಹೇಳುತ್ತಾರೆ? ಈಗ ಗೆದ್ದಿದ್ದೀರಿ, ಅಭಿನಂದಿಸುತ್ತೇನೆ. ಜನರ ಆದೇಶಕ್ಕೆ ನಾವು ತಲೆ ಬಾಗುತ್ತೇವೆ ಎಂದು ಹೇಳಿದರು.

ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರು ವೈಯಕ್ತಿಕ ವರ್ಚಸ್ಸು, ಅವರ ಪ್ರಯತ್ನದಿಂದ ಮೈಸೂರಿನಲ್ಲಿ ಗೆಲುವು ಸಾಧ್ಯವಾಗಿದೆಯೇ ಹೊರತು ಅವರ ಗೆಲುವಿನಲ್ಲಿ ಕಾಂಗ್ರೆಸ್‌ನ ಶ್ರಮ ಇಲ್ಲ ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ನಾನು ಸಂಸದನಾಗಿ ಆಯ್ಕೆಯಾದಾಗ 2014ರಲ್ಲಿ ಮೈಸೂರು ಭಾಗದಲ್ಲಿ ಯಾರೊಬ್ಬರೂ ಬಿಜೆಪಿ ಶಾಸಕ, ಸಂಸದ ಇರಲಿಲ್ಲ. 4–5 ಜಿಲ್ಲೆಗಳಲ್ಲಿ ಬಿಜೆಪಿ ಖಾತೆ ತೆರೆದಿರಲಿಲ್ಲ. ಇಂದು ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರಗಳಲ್ಲಿ ಶಾಸಕರಿದ್ದಾರೆ. 2014ರಲ್ಲಿ ಶೂನ್ಯ ಇದ್ದದ್ದು ಇಂದು ಇಷ್ಟೊಂದು ಶಾಸಕರು, ಸಂಸದರು ಇದ್ದಾರೆ. ಜನರು ನಮ್ಮಿಂದ ಇನ್ನೂ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಆ ನಿಟ್ಟಿನಲ್ಲಿ ಪ್ರಯತ್ನಿಸುತ್ತೇವೆ ಎಂದು ತಿಳಿಸಿದರು.

ತಪ್ಪು ಮಾಡಿಲ್ಲವೆಂದಾದರೆ ತಾಯಿ–ಮಗನಿಗೆ ಭಯ ಏಕೆ?: ದೇಶಾದ್ಯಂತ ಭ್ರಷ್ಟಾಚಾರದ ವಿಚಾರದಲ್ಲಿ ಇಡಿ ವಿಚಾರಣೆ ನಡೆಸುತ್ತಿದೆ. ನ್ಯಾಷನಲ್ ಹೆರಾಲ್ಡ್ ಪ್ರಕರಣ ಸಂಬಂಧ ವಿಚಾರಣೆ ನಡೆಯುತ್ತಿದೆ. ತಾಯಿ–ಮಗ ಆಸ್ತಿ ಲಪಟಾಯಿಸಲು ಪ್ರಯತ್ನ ಮಾಡಿಲ್ಲ ಎಂದ ಮೇಲೆ ಭಯ ಏಕೆ? ಕಾನೂನಿಗೆ ಎಲ್ಲರೂ ತಲೆ ಬಾಗಲೇಬೇಕಾಗುತ್ತದೆ. ಹಿಂದೆ ಗುಜರಾತ್‌ನಲ್ಲಿ ಎಸ್‌ಐಟಿ ಎದುರು ಮೋದಿ ತಲೆ ಬಾಗಿರಲಿಲ್ಲವೇ? ಅಮಿತ್ ಷಾ ವಿಚಾರಣೆ ಎದುರಿಸಿರಲಿಲ್ಲವೇ? ಹಾಗಿದ್ದ ಮೇಲೆ ಇವರಿಗೇಕೆ ಹೆದರಿಕೆ ಎಂದು ಪ್ರಶ್ನಿಸಿದರು.

ಪಠ್ಯ ಪರಿಷ್ಕರಣಾ ಸಮಿತಿ ಅಧ್ಯಕ್ಷನ ಬಂಧನಕ್ಕೆ ಆಗ್ರಹಿಸಿ ಕನ್ನಡ ಚಳವಳಿಗಾರರ ಪ್ರತಿಭಟನೆ



ಮೈಸೂರು, ಜೂ.17(ಎಂಟಿವೈ)– ಪಠ್ಯ ಪರಿಷ್ಕರಣೆಯಲ್ಲಿ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್, ರಾಷ್ಟ್ರಕವಿ ಕುವೆಂಪು, ಬಸವಣ್ಣ ಸೇರಿದಂತೆ ಮಹನೀಯರಿಗೆ ಅಪಮಾನ ಮಾಡಿರುವ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥನನ್ನು ಬಂಧಿಸುವಂತೆ ಒತ್ತಾಯಿಸಿ ಮೈಸೂರು ಜಿಲ್ಲಾ ಕನ್ನಡ ಚಳವಳಿಗಾರರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಪೊರಕೆ ಹಿಡಿದು ರೋಹಿತ್ ಚಕ್ರತೀರ್ಥ ಭಾವಚಿತ್ರಕ್ಕೆ ಬಾರಿಸಿ, ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಪರಿಷ್ಕರಣೆಗೊಂಡಿರುವ ಪಠ್ಯಕ್ರಮವನ್ನು ರದ್ದು ಮಾಡಬೇಕು. ಚಕ್ರತೀರ್ಥ ಉದ್ದೇಶಪೂರ್ವಕವಾಗಿ ಮಾಡಿರುವ ಪ್ರಮಾದದಿಂದ ಇಂದು ರಾಜ್ಯದಲ್ಲಿ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ಆತನನನ್ನು ಸಮಿತಿಗೆ ನೇಮಿಸುವ ಮೂಲಕ ರಾಜ್ಯ ಸರ್ಕಾರ ಭಾರೀ ಯಡವಟ್ಟು ಮಾಡಿದೆ. ಜನರಲ್ಲಿ ಗೊಂದಲ ಮೂಡಿಸಿ ಕರ್ನಾಟಕದ ಜನತೆಗೆ ಅಪಮಾನ ಮಾಡಲಾಗಿದೆ. ಹಳೆಯ ಪಠ್ಯವನ್ನೇ ಮುಂವರಿಸಬೇಕೆಂದು ಒತ್ತಾಯಿಸಿದರೂ ರಾಜ್ಯ ಸರ್ಕಾರ ಕಣ್ಣು, ಕಿವಿ, ಮೂಗು ಏನೂ ಇಲ್ಲದಂತೆ ವರ್ತಿಸುತ್ತಿದೆ. ನೂರಾರು ಕಡೆ ಮೊಕದ್ದಮೆ ದಾಖಲಾದರೂ ಕಾನೂನು ಕ್ರಮ ಕೈಗೊಂಡಿಲ್ಲ. ಸರ್ಕಾರ ಕೂಡಲೇ ಚಕ್ರತೀರ್ಥನನ್ನು ಬಂಧಿಸಬೇಕು. ನೂತನ ಪಠ್ಯಕ್ರಮವನ್ನು ಕೈಬಿಟ್ಟು ಹಳೆಯ ಪಠ್ಯಕ್ರಮವನ್ನೇ ಮುಂದುವರಿಸಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಬಿ.ಎ.ಶಿವಶಂಕರ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಹೊಸ ಎಲ್‌ಪಿಜಿ ಸಂಪರ್ಕ ಮತ್ತಷ್ಟು ದುಬಾರಿ


ಚೆನ್ನೈ,ಜೂ.17– ಈಗಾಗಲೇ ಎಲ್‌ಪಿಜಿ ಬೆಲೆ ಏರಿಕೆಯಿಂದ ಕಂಗೆಟ್ಟಿರುವ ಜನತೆಗೆ ಮತ್ತೊಂದು ಶಾಕ್ ನೀಡಲಾಗಿದ್ದು, ತೈಲ ಮಾರುಕಟ್ಟೆ ಕಂಪನಿಗಳು ಹೊಸ ಎಲ್‌ಪಿಜಿ ಸಂಪರ್ಕಗಳಿಗೆ ನೀಡುವ ಒಂದು ಬಾರಿಯ ಭದ್ರತಾ ಠೇವಣಿಯ ಮೊತ್ತ ಹೆಚ್ಚಿಸಿದೆ. ಗ್ರಾಹಕರು ಜೂ.16 ರಿಂದ ಹೆಚ್ಚುವರಿ 750 ರೂ. ನೀಡಬೇಕು. ಠೇವಣಿ ಮೊತ್ತವು ಪ್ರತಿ ಸಿಲಿಂಡರ್‌ಗೆ 1,450 ರೂ. ನಿಂದ 2,200 ರೂ.ಗೆ ಏರಿಕೆಯಾಗಿದೆ ಮತ್ತು ರೆಗುಲೇಟರ್ ಬೆಲೆಯನ್ನು ಈಗಿರುವ 150 ರೂ.ನಿಂದ 250 ರೂ.ಗೆ ಏರಿಸಲಾಗಿದೆ. ಈಶಾನ್ಯ ರಾಜ್ಯಗಳ ಗ್ರಾಹಕರಿಗೆ ಪ್ರತಿ ಸಿಲಿಂಡರ್‌ಗೆ ರೂ.2,000 ಮತ್ತು ರೂ. ರೆಗುಲೇಟರ್‌ಗೆ 200 ರೂ. ನಿಗದಿಪಡಿಸಲಾಗಿದೆ. ಈ ಹಿಂದೆ ಹೊಸ ಗ್ಯಾಸ್ ಸಂಪರ್ಕ ಪಡೆಯಲು ಬೆಲೆ 1450 ರೂ. ನೀಡಬೇಕಾಗಿತ್ತು. ಈಗ ಹೊಸ ಎಲ್ ಪಿಜಿ ಸಂಪರ್ಕ ಪಡೆಯಲು ಎರಡು ಸಿಲಿಂಡರ್‌ಗಳಿಗೆ ಭದ್ರತಾ ಠೇವಣಿಯಾಗಿ 4,400 ರೂ. ನೀಡಬೇಕು. 5 ಕೆಜಿ ಸಿಲಿಂಡರ್‌ಗೆ ಭದ್ರತಾ ಹಣ 800 ರೂ.ನಿಂದ 1150 ರೂ.ಗೆ ಏರಿಕೆಯಾಗಿದ್ದು, ಪೈಪ್ ಮತ್ತು ಪಾಸ್‌ಬುಕ್‌ಗೆ ಕ್ರಮವಾಗಿ 150 ಮತ್ತು 25 ರೂ. ನಿಗದಿಸಿದೆ.

ಕೆ.ಎಂ.ಶ್ರೀಧರನ್ ನಿಧನ

ಮೈಸೂರು, ಜೂ. 17– ಮೈಸೂರಿನ ಎನ್. ಆರ್. ಮೊಹಲ್ಲಾ ಸಂಗೀತ ಸಭಾದ ಅಧ್ಯಕ್ಷರಾಗಿದ್ದ ಕೆ.ಎಂ. ಶ್ರೀಧರನ್ (80) ಬುಧವಾರ ನಿಧನರಾದರು. ಚಾಮರಾಜಪುರಂನಲ್ಲಿ ವಾಸಿಸುತ್ತಿದ್ದ ಅವರು ತಮ್ಮ ಆಸುಪಾಸಿನ ಅಪಾರ್ಟ್‌ಮೆಂಟ್‌ಗಳ ನಿವಾಸಿಗಳ ಸಂಘ 'ನೇಬರ್ ಹುಡ್' (ನೆರೆಹೊರೆ) ಸಂಸ್ಥೆಯ ಅಧ್ಯಕ್ಷರಾಗಿದ್ದರು. ಮೆಕ್ಯಾನಿಕಲ್ ಎಂಜಿನಿಯರ್ ಆಗಿದ್ದ ಅವರು, ತಮ್ಮದೇ ಆದ ಕಾರ್ಖಾನೆಯನ್ನೂ ಬಹಳ ವರ್ಷಗಳವರೆಗೆ ನಡೆಸಿ ವಿಶ್ರಾಂತ ಜೀವನ ನಡೆಸುತ್ತಿದ್ದರು. ದಿವಂಗತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿ ಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಗುರುವಾರ ಅಂತ್ಯಕ್ರಿಯೆ ಗುರುವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮನೆಯಪಂಡ ನಾಚಯ್ಯ



ಮೈಸೂರು, ಜೂ.17–ಮೈಸೂರಿನ ಅರವಿಂದ ನಗರ ನಿವಾಸಿ ಮನೆಯಪಂಡ ನಾಚಯ್ಯ (ಜೀವನ್, 60 ವರ್ಷ) ಅವರು ಶುಕ್ರವಾರ ನಿಧನರಾದರು. ಮೃತರು ಜೆ.ಪಿ.ನಗರ ಜೆಎಸ್‌ಎಸ್ ಶಾಲೆಯ ಪ್ರಾಂಶುಪಾಲರಾಗಿರುವ ಪತ್ನಿ ಸುನೀತಾ, ಇಬ್ಬರು ಪುತ್ರಿಯರು, ಅಪಾರ ಬಂಧು–ಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಶನಿವಾರ) ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಳ್ಳಿಯಂಡ ಪಿ.ಬೋಪಯ್ಯ



ಮೈಸೂರು, ಜೂ.17–ಮೈಸೂರಿನ ಲಲಿತ ಮಹಲ್ ರಸ್ತೆಯಲ್ಲಿರುವ ಪೃಥ್ವಿ ಪ್ಯಾಲೇಸ್‌ನಲ್ಲಿ ವಾಸವಿದ್ದ ಬಳ್ಳಿಯಂಡ ಪಿ.ಬೋಪಯ್ಯ(88) ಅವರು ಇಂದು ಸಂಜೆ ನಿಧನರಾದರು. ಮೃತರು ಪತ್ನಿ, ಪುತ್ರ ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಅವರ ಸ್ವಗ್ರಾಮವಾದ ವಿರಾಜಪೇಟೆ ತಾಲೂಕು ಕಡಂಗ ಸಮೀಪದ ಕಲ್ಲುಮೊಟ್ಟೆ ಗ್ರಾಮದಲ್ಲಿ ನಾಳೆ (ಜೂ.18)ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಿ.ವಿ.ವೆಂಕಟಕೃಷ್ಣ



ಮೈಸೂರು, ಜೂ.17– ಮೈಸೂರಿನ ಶಕ್ತಿನಗರ ನಿವಾಸಿ, ಅಬಕಾರಿ ಇಲಾಖೆ ನಿವೃತ್ತ ಉದ್ಯೋಗಿ ಪಿ.ವಿ.ವೆಂಕಟಕೃಷ್ಣ(70) ಅವರು ಶುಕ್ರವಾರ ನಿಧನರಾದರು.

ಮೃತರು ಪತ್ನಿ ಶಾಮಲಾಂಬ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ವೆಂಕಟಕೃಷ್ಣ ಅವರು ನಗರ ಪಾಲಿಕೆ ಸದಸ್ಯ ಮ.ವಿ.ರಾಂಪ್ರಸಾದ್ ಅವರ ಭಾವ. ಶನಿವಾರ ಬೆಳಿಗ್ಗೆ 10 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಗ್ನಿಪಥ ಯೋಜನೆ ವಿರುದ್ಧ ಹಲವು ರಾಜ್ಯಗಳಲ್ಲಿ ತೀವ್ರ ಪ್ರತಿಭಟನೆ

ರೈಲುಗಳಿಗೆ ಬೆಂಕಿ, ಪೊಲೀಸ್ ಗುಂಡಿಗೆ ಸಿಕಂದರಾಬಾದ್‌ನಲ್ಲಿ ಓರ್ವ ಬಲಿ



ನವದೆಹಲಿ, ಜೂ.17– ಸೇನಾ ನೇಮಕಾತಿ ಅಗ್ನಿಪಥ ಹೊಸ ಮಾದರಿ ಯೋಜನೆಯ(Agnipath scheme) ವಿರುದ್ಧ ದೇಶಾದ್ಯಂತ ಪ್ರತಿಭಟನೆ ತೀವ್ರವಾಗಿದೆ. ಕೇಂದ್ರ ಸರ್ಕಾರದ ಹೊಸ ನೇಮಕಾತಿ ಯೋಜನೆಯ ವಿರುದ್ಧ ಪ್ರತಿಭಟನೆ ಹೈದರಾಬಾದ್‌ಗೆ ವ್ಯಾಪಿಸಿದೆ, ಪ್ರತಿಭಟನಾಕಾರರು ಶುಕ್ರವಾರ ಬೆಳಿಗ್ಗೆ ಸಿಕಂದರಾಬಾದ್ ರೈಲು ನಿಲ್ದಾಣದಲ್ಲಿ ಕನಿಷ್ಠ ಏಳು ರೈಲುಗಳಿಗೆ ಬೆಂಕಿ ಹಚ್ಚಿ ಇಡೀ ರೈಲ್ವೆ ನಿಲ್ದಾಣದ ಆವರಣವನ್ನು ದೋಚಿದ್ದಾರೆ.

ಸಿಕಂದರಾಬಾದ್ ರೈಲ್ವೇ ನಿಲ್ದಾಣದಲ್ಲಿ ಅಗ್ನಿಪಥ್ ಪ್ರತಿಭಟನಾಕಾರರ ಮೇಲೆ ರೈಲ್ವೆ ಪೊಲೀಸರು ಗುಂಡಿನ ದಾಳಿ ನಡೆಸಿದ್ದು, ಒಬ್ಬ ವ್ಯಕ್ತಿ ಮೃತಪಟ್ಟು, ಮೂವರು ಗಾಯಗೊಂಡಿದ್ದಾರೆ. ಮೃತರನ್ನು ವಾರಂಗಲ್ ಜಿಲ್ಲೆಯ ದಾಮೋದರ್ ಎಂದು ಗುರುತಿಸಲಾಗಿದೆ. ರೈಲ್ವೇ ಸಂರಕ್ಷಣಾ ಪಡೆ ಮತ್ತು ತೆಲಂಗಾಣ ಪೊಲೀಸರಿಂದ ಹೆಚ್ಚುವರಿ ಪಡೆಗಳನ್ನು ರೈಲ್ವೇ ನಿಲ್ದಾಣಕ್ಕೆ ಕಳುಹಿಸಲಾಗಿದ್ದು, ಆದಾಗ್ಯೂ ಅಷ್ಟು ಹೊತ್ತಿಗಾಗಲೇ ಸಾಕಷ್ಟು ಹಾನಿ, ದುರಂತ ಸಂಭವಿಸಿದೆ. ಸಿಕಂದರಾಬಾದ್‌ನಲ್ಲಿ ಸದ್ಯ ಪರಿಸ್ಥಿತಿ ಕೈಮೀರುತ್ತಿದೆ. ರೈಲು ಬೋಗಿಗಳು ಹೊತ್ತಿ ಉರಿದಿವೆ. ರೈಲು ಬೋಗಿಗಳು ಸುಟ್ಟು ಕರಕಲಾಗಿವೆ.

ಮತ್ತೊಂದೆಡೆ, ಬಿಹಾರದಲ್ಲಿ ಎರಡನೇ ದಿನವೂ ಪ್ರತಿಭಟನೆ ಮುಂದುವರಿದಿದ್ದು, ಬೇಗುಸರಾಯ್ ಜಿಲ್ಲೆಯಲ್ಲಿ ಉದ್ರಿಕ್ತ ಯುವಕರು ರಾಜಬಾರಾ ಗುಮ್ಟಿ ರಸ್ತೆಯನ್ನು ತಡೆದಿದ್ದಾರೆ. ಪ್ರತಿಭಟನಾಕಾರರು ರೈಲ್ವೆ ಹಳಿಗಳ ಮೇಲೆ ಕುಳಿತು ಪ್ರತಿಭಟಿಸುತ್ತಿದ್ದು ರೈಲುಗಳ ಸಂಚಾರದ ಮೇಲೆ ಪರಿಣಾಮ ಬೀರಿದೆ. ಹಲವೆಡೆ ರಸ್ತೆ ಸಂಚಾರವನ್ನೂ ನಿರ್ಬಂಧಿಸಲಾಗಿತ್ತು ಪ್ರತಿಭಟನೆ ವೇಳೆ ರೈಲ್ವೇ ಹಳಿ ಮೇಲೆ ಟೈರ್ ಸುಟ್ಟು ಹಾಕಲಾಯಿತು. ಜಿಲ್ಲೆಯ ಸಾಹೇಬ್‌ಪುರ್‌ಕಮಲ್ ರೈಲು ನಿಲ್ದಾಣದಲ್ಲಿ ವಿದ್ಯಾರ್ಥಿಗಳು ಬೆಂಕಿ ಹಚ್ಚಿ ಕಲ್ಲು ತೂರಾಟ ನಡೆಸಿ ಭಾರೀ ಗಲಾಟೆ ಸೃಷ್ಟಿಸಿದ್ದಾರೆ.

ಲಖಿಸರಾಯ್ ಜಿಲ್ಲೆಯು ಇದೇ ರೀತಿಯ ಕೋಲಾಹಲಕ್ಕೆ ಸಾಕ್ಷಿಯಾಯಿತು. ಕೇಂದ್ರ ಸರ್ಕಾರದ ಯೋಜನೆ ವಿರೋಧಿಸಿ ಜಿಲ್ಲೆಯಲ್ಲಿ ಪ್ರತಿಭಟನಾಕಾರರು ಜಂಟಿಯಾಗಿ ಮೆರವಣಿಗೆ ನಡೆಸಿದರು. ಪ್ರತಿಭಟನೆ ವೇಳೆ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳು ಮೊಳಗಿದವು.

ಬಿಹಾರದ ಪಶ್ಚಿಮ ಚಂಪಾರಣ್ ಜಿಲ್ಲೆಯ ಬೆಟ್ಟಿಯಾದಲ್ಲಿ ಪ್ರಸ್ತುತ ಪಾಟ್ನಾದಲ್ಲಿರುವ ಉಪಮುಖ್ಯಮಂತ್ರಿ ರೇಣು ದೇವಿ ಅವರ ಮನೆ ಮೇಲೆ ದಾಳಿ ನಡೆದಿದೆ. ಲಖಿಸರಾಯ್ ಜಿಲ್ಲೆಯಲ್ಲಿಯೂ ಬಿಜೆಪಿ ಕಚೇರಿ ಮೇಲೆ ದಾಳಿ ನಡೆದಿದೆ.

ಉತ್ತರ ಪ್ರದೇಶದ ಬಲಿಯಾದಲ್ಲಿ ಇದೇ ರೀತಿಯ ಪ್ರತಿಭಟನೆ ನಡೆಯಿತು. ಅಗ್ನಿಪಥ್ ಯೋಜನೆ ವಿರೋಧಿಸಿ ಬಲ್ಲಿಯಾ ರೈಲು ನಿಲ್ದಾಣದಲ್ಲಿ ಭಾರೀ ಸಂಖ್ಯೆಯಲ್ಲಿ ಜನ ಸೇರಿದ್ದರು. ಬೆಳಿಗ್ಗೆಯಿಂದಲೇ ನಿಲ್ದಾಣದಲ್ಲಿ ಪಡೆಗಳನ್ನು ನಿಯೋಜಿಸಲಾಗಿದೆ. ಕೆಲವು ಗೂಂಡಾಗಳು ಅಲ್ಲಿಗೆ ತಲುಪಿದ್ದರು. ಸಾರ್ವಜನಿಕ ಆಸ್ತಿಗೆ ಹೆಚ್ಚಿನ ಹಾನಿ ಮಾಡದಂತೆ ಅವನ್ನು ತಡೆಯಲಾಯಿತು. ಕಲ್ಲು ತೂರಾಟಕ್ಕೆ ಯತ್ನಿಸಿದರು. ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಬಲ್ಲಿಯಾ ಜಿಲ್ಲಾ ಮ್ಯಾಜಿಸ್ಟ್ರೇಟ್ ಸೌಮ್ಯ ಅಗರ್ವಾಲ್ ಹೇಳಿದ್ದಾರೆ.

ರೈತರ ಬಲಿ ಕೊಟ್ಟಾಯಿತು, ಈಗ ಸೈನಿಕರ ಸರದಿಯೇ?



ಬೆಂಗಳೂರು, ಜೂ.17– ದೇಶದ ಯುವಜನರನ್ನು ನಿರುದ್ಯೋಗದ ಕೂಪಕ್ಕೆ ತಳ್ಳುವ ಮತ್ತು ದೇಶದ ಭದ್ರತೆಗೆ ಅಪಾಯಕಾರಿಯಾಗಬಲ್ಲ ಅಗ್ನಿಪಥ ಎಂಬ ಯೋಜನೆಯನ್ನು ಕೇಂದ್ರದ ಬಿಜೆಪಿ ಸರ್ಕಾರ ತಕ್ಷಣ ರದ್ದುಪಡಿಸಿ ಈಗಿನ ಸೇನಾ ನೇಮಕಾತಿ ಯೋಜನೆಯಡಿಯಲ್ಲಿಯೇ ಸೈನಿಕರ ನೇಮಕಾತಿ ನಡೆಯಬೇಕು ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ. ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಸಿದ್ದರಾಮಯ್ಯ, ವರ್ಷಕ್ಕೆ ಎರಡು ಕೋಟಿ ಉದ್ಯೋಗದ ಭರವಸೆ ನೀಡಿ ಅಧಿಕಾರಕ್ಕೆ ಬಂದಿರುವ ಪ್ರಧಾನಿ ನರೇಂದ್ರ ಮೋದಿ, ಅವರೇ, ಉದ್ಯೋಗಾವಕಾಶದ ಬಾಗಿಲುಗಳನ್ನು ಒಂದೊಂದಾಗಿ ಮುಚ್ಚುತ್ತಾ ಇರುವ ನಿಮಗೆ ಪ್ರತಿವರ್ಷ ಎರಡು ಕೋಟಿ ನಿರುದ್ಯೋಗಿಗಳನ್ನು ಸೃಷ್ಟಿಸುವ ಗುಪ್ತ ಅಜೆಂಡಾ ಏನಾದರೂ ಇದೆಯೇ, ರೈತರನ್ನು ಬಲಿ ಕೊಟ್ಟಾಯಿತು, ಈಗ ಸೈನಿಕರ ಸರದಿಯೇ ಎಂದು ಪ್ರಶ್ನಿಸಿದ್ದಾರೆ.

ಉದ್ಯೋಗದ ಅಭದ್ರತೆ, ಭವಿಷ್ಯದ ಬಗೆಗಿನ ಭಯ ಮತ್ತು ವೃತ್ತಿ ಬಗೆಗಿನ ಅತೃಪ್ತಿಯನ್ನು ಹುಟ್ಟುಹಾಕಲಿರುವ ಅಗ್ನಿಪಥ್ ಯೋಜನೆಯಡಿ ನೇಮಕಗೊಂಡ ಸೈನಿಕರು ತಮ್ಮ ವೃತ್ತಿಯಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಲು ಸಾಧ್ಯವೇ, ಶತ್ರುಗಳ ಜೊತೆ ಕಾದಾಡಲಿರುವ ಸೈನಿಕರ ಈ ಮನಸ್ಥಿತಿ ಅಪಾಯಕಾರಿಯಲ್ಲವೇ.

ದೇಶಕ್ಕಾಗಿ ಪ್ರಾಣತ್ಯಾಗ ಮಾಡಲು ಸಿದ್ಧರಾಗುವ ಸೈನಿಕರಿಗೆ ಉದ್ಯೋಗದ ಭದ್ರತೆ, ನ್ಯಾಯಬದ್ಧ ಸಂಬಳ, ಪಿಂಚಣಿ ಮತ್ತಿತರ ಸೌಲಭ್ಯಗಳನ್ನು ಒದಗಿಸಲಾಗದಷ್ಟು ಕೇಂದ್ರದ ಬಿಜೆಪಿ ಸರ್ಕಾರ ದಿವಾಳಿಯಾಗಿದೆಯೇ, ನಿಮ್ಮ ದಿವಾಳಿತನ ಮುಚ್ಚಿಡಲು ದೇಶದ ಭದ್ರತೆಯ ಜೊತೆ ಚೆಲ್ಲಾಟವಾಡಲು ಹೋಗಬೇಡಿ, ಹೊಸ ಸೇನಾ ನೇಮಕಾತಿ ಅಗ್ನಿಪಥ್ ಕೇವಲ ಸೇನಾ ನೇಮಕಾತಿಗಷ್ಟೇ ಸೀಮಿತವಾಗಲಾರದು. ಸೈನಿಕರ ಅನ್ನ ಕಸಿಯಲು ಹೊರಟಿರುವ ಈ ದೇಶದ್ರೋಹಿ, ಜನವಿರೋಧಿ ಬಿಜೆಪಿ ಸರ್ಕಾರ ಮುಂದಿನ ದಿನಗಳಲ್ಲಿ ಇತರ ಸರ್ಕಾರಿ ಉದ್ಯೋಗಗಳ ಮೇಲೆಯೂ ಸವಾರಿ ಮಾಡಲು ಹೊರಡುವುದು ಖಚಿತ ಎಚ್ಚೆತ್ತುಕೊಳ್ಳಲು ಇದು ಸಕಾಲ ಎಂದು ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.

ಎರಡು ದಿನಗಳ ಹೈ ಲೈಫ್ ಪ್ರದರ್ಶನಕ್ಕೆ ಚಾಲನೆ



ಮೈಸೂರು, ಜೂ.17(ಆರ್‌ಕೆಬಿ)– ಹೈ ಲೈಫ್ ಎಗ್ಸಿಬಿಷನ್ ಕಂಪನಿ ವತಿಯಿಂದ ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಶುಕ್ರವಾರ ಎರಡು ದಿನಗಳ ಹೈ ಲೈಫ್ ಪ್ರದರ್ಶನಕ್ಕೆ ಚಾಲನೆ ದೊರೆಯಿತು.

'ಹೈ ಲೈಫ್ ಎಕ್ಸಿಬಿಷನ್ಸ್' ಸಿಗ್ನೇಚರ್ ಫ್ಯಾಷನ್, ಲೈಫ್ ಸ್ಟೈಲ್ ಮತ್ತು ಐಷಾರಾಮಿ ಪ್ರದರ್ಶನದ ಭಾರತದ ಅತೀ ದೊಡ್ಡ ಕಂಪನಿಯಾಗಿದೆ. ಒಂದೇ ಸೂರಿನಡಿ ಗ್ರಾಹಕರಿಗೆ ವಿಭಿನ್ನ ಬ್ರಾಂಡೆಡ್ ಉಡುಪುಗಳು, ನವೀನ ಮಾದರಿಯ ಆಕರ್ಷಕ ಆಭರಣಗಳು, ಮದುವೆಯ ಉಡುಪುಗಳು, ಗೃಹಾಲಂಕಾರ ವಸ್ತುಗಳು, ಗೃಹ ಬಳಕೆ ಸಾಮಗ್ರಿಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಲಘು ಉದ್ಯೋಗ ಭಾರತಿ ಕರ್ನಾಟಕ ಘಟಕದ ಉಪಾಧ್ಯಕ್ಷೆ ಛಾಯಾ ನಂಜಪ್ಪ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಈ ಪ್ರದರ್ಶನ ದೇಶದ ಕುಶಲಕರ್ಮಿಗಳಿಗೆ ಸೂಕ್ತ ಮಾನ್ಯತೆ ನೀಡಿದೆ. ಸೂಕ್ತ ಮಾನ್ಯತೆ ಇಲ್ಲದೆ ಗ್ರಾಮೀಣ ಪ್ರದೇಶದಿಂದ ಬಂದವರು ಇಂತಹ ವೇದಿಕೆಯಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಲು ಅವಕಾಶವಾಗಿದೆ ಎಂದರು. ಶೇ.90ರಷ್ಟು ಮಳಿಗೆಗಳು ಮಹಿಳಾ ಉದ್ಯಮಿಗಳದ್ದೇ ಇದೆ. ಕೆಲವು ಪುರುಷರ ಒಡೆತನದಲ್ಲಿದ್ದರೂ ಉತ್ಪನ್ನವು ಮಹಿಳೆಯರದ್ದಾಗಿದೆ. ಮಹಿಳೆಯರು ತಮ್ಮ ಅಗಾಧ ಪ್ರತಿಭೆಗೆ ಸರಿಯಾದ ವೇದಿಕೆ ಇದಾಗಿದೆ ಎಂದು ಹೇಳಿದರು.

ಬೆಳಗ್ಗೆ 9.30ರಿಂದ ರಾತ್ರಿ 8.30ರವರೆಗೆ ತೆರೆದಿರುವ ಎರಡು ದಿನಗಳ ಹೈ ಲೈಫ್ ಪ್ರದರ್ಶನಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದ್ದು, ಶನಿವಾರ ಮುಕ್ತಾಯಗೊಳ್ಳಲಿದೆ.

ಕಾರ್ಯಕ್ರಮದಲ್ಲಿ ಡಿಆರ್‌ಸಿ ಚಿತ್ರಮಂದಿರದ ವ್ಯವಸ್ಥಾಪಕ ಪಾಲುದಾರರಾದ ವೈಶಾಲಿ, ಸಂಯೋಜಕಿ ಶೋಮಿಕಾ, ಸಂಘಟಕ ಡೊಮಿನಿಕ್ ಇನ್ನಿತರರು ಉಪಸ್ಥಿತರಿದ್ದರು.

ಯೂತ್ ಹಾಸ್ಟೆಲ್‌ನಲ್ಲಿ ಯೋಗ ತರಬೇತಿ

ಮೈಸೂರು. ಜೂ.17– ಸರ್ಕಾರಿ ಯೂತ್ ಹಾಸ್ಟೆಲ್ ಮೈಸೂರು ವತಿಯಿಂದ ಪತಂಜಲಿ ಯೋಗ ಶಿಕ್ಷಣ ಸಮಿತಿ ವಿಜಯ ವಿಠಲ ಶಾಖೆ ಸಹಯೋಗದೊಂದಿಗೆ ಯೂತ್ ಹಾಸ್ಟೆಲ್‌ನಲ್ಲಿ ಯೋಗ ದಿನಾಚರಣೆ ಅಂಗವಾಗಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಎಸ್.ಪಿ.ವೈ.ಎಸ್.ಎಸ್‌ನ ಮೈಸೂರು ಜಿಲ್ಲಾ ಸಂಚಾಲಕರಾದ ನಾಗಭೂಷಣ್ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಯೂತ್ ಹಾಸ್ಟೆಲ್‌ನ ವ್ಯವಸ್ಥಾಪಕರಾದ ಡಾ.ಪ್ರಸಾದ್, ವಿಜಯ ವಿಠಲ ಮುಖ್ಯ ಶಿಕ್ಷಕರಾದ ಇ.ರವೀಂದ್ರ ಕುಮಾರ್, ಹೆಚ್.ಇ. ಬಸವರಾಜು ಹಾಗೂ ಇತರು ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದಲ್ಲಿ ಭೂ ಕುಸಿತ

ದುರಸ್ತಿಗೆ ಸರ್ಕಾರದ ಅನುಮೋದನೆಗಾಗಿ ಕಾಯುತ್ತಿರುವ ಲೋಕೋಪಯೋಗಿ ಇಲಾಖೆ

ಮಳೆಯಿಂದ ಸದರಿ ರಸ್ತೆಯಲ್ಲಿ ಉಂಟಾಗಿರುವ ಹೊಸ ಬಿರುಕು



ಸಂಗ್ರಹ ಚಿತ್ರ

ಮೈಸೂರು, ಜೂ. 17(ಆರ್‌ಕೆ)– ಚಾಮುಂಡಿ ಬೆಟ್ಟದ ನಂದಿ ಮಾರ್ಗದಲ್ಲಿ ಭೂ ಕುಸಿತವಾಗಿದ್ದು, ಇದರ ದುರಸ್ತಿ ಮತ್ತು ತಡೆಗೋಡೆ ನಿರ್ಮಿಸಲು ಅನುದಾನದೊಂದಿಗೆ ಸರ್ಕಾರದ ಅನುಮೋದನೆಗಾಗಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಕಾಯುತ್ತಿದ್ದಾರೆ.

ಭೂ ಕುಸಿತ ಉಂಟಾಗಿ 8 ತಿಂಗಳು ಕಳೆದಿದೆಯಾದರೂ, ಅದನ್ನು ಸರಿಪಡಿಸಿ ರೀಟೇನಿಂಗ್ ವಾಲ್ ನಿರ್ಮಿಸಲು ಅಗತ್ಯವಿರುವ 9.75 ಕೋಟಿ ರೂ. ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ ಹಣಕಾಸು ಬಿಡ್‌ಗೆ ಸರ್ಕಾರ ಅನುಮೋದನೆ ನೀಡದಿರುವುದು ಕಾಮಗಾರಿ ವಿಳಂಬವಾಗಲು ಪ್ರಮುಖ ಕಾರಣ ಎಂದು ಹೇಳಲಾಗುತ್ತಿದೆ.

ಈಗಾಗಲೇ ಭಾರತೀಯ ವಿಜ್ಞಾನ ಸಂಸ್ಥೆ (Indian Institute of Science)ಯ ತಜ್ಞರ ಸಲಹೆ, ಮಾರ್ಗದರ್ಶನದಂತೆ ಅಂದಾಜು ತಯಾರಿಸಿ ವರದಿಯೊಂದಿಗೆ ಪ್ರಸ್ತಾವನೆ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಸರ್ಕಾರ ಯೋಜನೆಗೆ ಗ್ರೀನ್ ಸಿಗ್ನಲ್ ನೀಡಿದೆಯಾದರೂ, ಹಣಕಾಸು ಇಲಾಖೆಯಿಂದ ಹಣಕಾಸು ಬಿಡ್‌ಗೆ ಅನುಮೋದನೆ ಸಿಕ್ಕಿಲ್ಲ ಎಂದು ಮೂಲಗಳು ತಿಳಿಸಿವೆ.

2021ರ ಅಕ್ಟೋಬರ್ 20ರ ರಾತ್ರಿ ಭಾರೀ ಮಳೆ ಸುರಿದ ಕಾರಣ, ಚಾಮುಂಡಿಬೆಟ್ಟದ ನಂದಿಗೆ ಹೋಗುವ ರಸ್ತೆಯ ಬಲಬದಿಯಲ್ಲಿ ಮೊದಲ ಬಾರಿ ಭೂ ಕುಸಿತ ಉಂಟಾಗಿತ್ತು. ನಂತರ 2022ರ ನವೆಂಬರ್‌ನಲ್ಲಿ ಅದೇ ರಸ್ತೆಯಲ್ಲಿ ಮತ್ತೆ ಭೂಮಿ ಕುಸಿತವಾಗಿತ್ತು. ಮೊದಲು ಕುಸಿದಿದ್ದ ಸ್ಥಳವನ್ನು ರಿಪೇರಿ ಮಾಡಿ ರಸ್ತೆ ಸಂಚಾರಕ್ಕೆ ಮುಕ್ತಗೊಳಿಸಿದ್ದ ಲೋಕೋಪಯೋಗಿ ಇಲಾಖೆಗೆ ಎರಡನೇ ಬಾರಿ ಉಂಟಾದ ಭೂ ಕುಸಿತ ದುರಸ್ತಿ ಮಾಡಲು ಸಾಧ್ಯವಾಗಿಲ್ಲ.

ಈಗ ಮತ್ತೆ ಮಳೆಗಾಲ ಆರಂಭವಾಗಿದೆ. ಕಳೆದ 20 ದಿನಗಳಿಂದ ಸುರಿದ ಮಳೆಗೆ ಚಾಮುಂಡಿಬೆಟ್ಟದ ನಂದಿ ರಸ್ತೆಯಲ್ಲಿ ಹೊಸ ಬಿರುಕುಗಳು ಉಂಟಾಗಿವೆ. ಅದನ್ನು ಹಾಗೆಯೇ ಬಿಟ್ಟಲ್ಲಿ ಮತ್ತೆ ಭೂ ಕುಸಿತವಾಗಿ ಅಪಾಯ ಸಂಭವಿಸುವ ಸಾಧ್ಯತೆ ಇದೆ. ಒಮ್ಮೆ ಭೂ ಕುಸಿತವಾದಲ್ಲಿ ಅದನ್ನು ತಕ್ಷಣ ಸರಿಪಡಿಸಿ, ಸಂಭವಿಸಬಹುದಾದ ಹೆಚ್ಚಿನ ಅಪಾಯವನ್ನು ತಡೆಯದಿದ್ದಲ್ಲಿ, ಅದೇ ಸ್ಥಳ, ಸುತ್ತಮುತ್ತಲಿನ ಇಂತಹ ಬಿರುಕುಗಳು ಕಾಣಿಸಿಕೊಳ್ಳುವುದು ಸರ್ವೇ ಸಾಮಾನ್ಯ. ಆದರೆ ಮಳೆ ಸುರಿಯುವಾಗ ರಿಪೇರಿ ಕೆಲಸ ಮಾಡಲು ಸಾಧ್ಯವಿಲ್ಲ. ಮಳೆ ನಿಂತ ಮೇಲೆ ಕಾಮಗಾರಿ ಕೈಗೆತ್ತಿ ಕೊಳ್ಳಬೇಕಿದೆ ಎಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಕುಸಿದಿರುವ ಈ ರಸ್ತೆಯನ್ನು ಬಂದ್ ಮಾಡಿ ವಾಹನ ಸಂಚಾರ ನಿಷೇಧಿಸಲಾಗಿದೆ. ಆದರೂ ರಿಪೇರಿ ಕಾಮಗಾರಿಯನ್ನು ಆದಷ್ಟು ಬೇಗ ಆರಂಭಿಸಬೇಕಾಗಿರುವುದರಿಂದ ಸರ್ಕಾರದಿಂದ ಹಣಕಾಸು ಅನುಮೋದನೆ ಪಡೆದು 15 ದಿನದೊಳಗೆ ಕೆಲಸ ಆರಂಭಿಸಲು ಪ್ರಯತ್ನಿಸುತ್ತಿರುವುದಾಗಿಯೂ ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.06.2022 ಶನಿವಾರ, ಮಳೆ ನಕ್ಷತ್ರ : ಮೃಗಶಿರ 08.06.2022 ರಿಂದ 21.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ
ತಿಥಿ: ಚತುರ್ಥೀ, ನಕ್ಷತ್ರ : ಶ್ರವಣ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

- **ಡಾನ್ ಬಾಸ್ಕೋ ಮಕ್ಕಳಾಲಯ ಸಂಸ್ಥೆ :** ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ಮಕ್ಕಳಿಂದ ಜಾಥಾ, ಜಾಗೃತಿ ಸಭೆ, ಸ್ಥಳ: ಸರ್ಕಾರಿ ಪ್ರೌಢಶಾಲೆ, ಎನ್.ಆರ್. ಮೊಹಲ್ಲಾ, ಬೆಳಗ್ಗೆ 9.30ಕ್ಕೆ.
- **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಬೇಸಿಗೆ ಮೇಳ–2022, ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆಯವರೆಗೆ.
- **ಎಸ್‌ಸಿ, ಎಸ್‌ಟಿ ಬುದ್ಧಿಸ್ಟ್ ಎಲ್‌ಐಸಿ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್, ಮೈಸೂರು ವಿಭಾಗ :** ಡಾ. ಬಿ.ಆರ್. ಅಂಬೇಡ್ಕರ್‌ರವರ 131ನೇ ಜನ್ಮ ದಿನ ಆಚರಣೆ, ಉದ್ಘಾಟನೆ : ಎಲ್‌ಐಸಿ ಹಿರಿಯ ವಿಭಾಗೀಯ ವ್ಯವಸ್ಥಾಪಕ ಜಿ. ಸತ್ಯನಾರಾಯಣ ಶಾಸ್ತ್ರಿ, ಅಧ್ಯಕ್ಷತೆ : ಅಸೋಸಿಯೇಷನ್ ಅಧ್ಯಕ್ಷ ಸಿ. ರಾಮಚಂದ್ರ, ಭಾಷಣಕಾರರು : ಮೈಕ್ರೋ ವಿಭಾಗದ ವ್ಯವಸ್ಥಾಪಕ ಪಿ.ಎಸ್. ಮಾಳಗಿ, ಕವಿ ಸೋಸಲೆ ಗಂಗಾಧರ್, ಮುಖ್ಯ ಅತಿಥಿಗಳು : ಸಿ.ಹೆಚ್. ದೀಪ್ಲಾ ನಾಯಕ್, ಡಾ. ಆರ್.ಜಿ. ವಾಗ್, ಸಿ. ಸಿದ್ದಾರ್ಥನ್, ಎಂ. ಕೃಷ್ಣಕುಮಾರ್, ಸ್ಥಳ: ಬುದ್ಧ ವಿಹಾರ, ಅಶೋಕ ವೃತ್ತ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.
- **ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ, ಜೋ ಅಲ್ಯುಕಾಸ್ ಜ್ಯುವೆಲ್ಲರಿ :** ರಕ್ತದಾನ ಶಿಬಿರ, ಉದ್ಘಾಟನೆ : ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಅಧ್ಯಕ್ಷ ಡಾ. ಎಂ.ಎಸ್. ಜಯಂತ್, ಗೌರವ ಅತಿಥಿಗಳು : ಪೊಲೀಸ್ ಇನ್ಸ್‌ಪೆಕ್ಟರ್ ಎ. ಮಲ್ಲೇಶ್, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಕಾರ್ಯದರ್ಶಿ ಎಸ್.ಎಸ್. ವೈದ್ಯನಾಥ, ಸ್ಥಳ: ಜೋ ಅಲ್ಯುಕಾಸ್, ಬಿ.ಎನ್. ರಸ್ತೆ, ಬೆಳಗ್ಗೆ 11ಕ್ಕೆ.
- **ಪವರ್ ಟಾಕ್ :** ಟಾಕ್ ಶೋ ವೇದಿಕೆ, ಉಪಸ್ಥಿತರು : ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಮಾಲತಿ ಕೃಷ್ಣಮೂರ್ತಿ ಹೊಳ್ಳ, ಪ್ರಜ್ಞಾ ಕುಟೀರ ಆಯುರ್ವೇದ ಕೇಂದ್ರದ ನಿರ್ದೇಶಕ ಡಾ. ಪೂರ್ಣಿಮಾ ಕೆ. ಮೂರ್ತಿ, ಪತ್ರಕರ್ತ ಗೌರೀಶ್ ಅಕ್ಕಿ, ಬಿ.ಎನ್. ಚಂದ್ರಕಾಶ್, ಸ್ಥಳ: ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸಭಾಂಗಣ, ಜೆ.ಪಿ.ನಗರ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ–ಮಾಲಿಕೆ, ಲೇಖನ ಪ್ರಸ್ತುತಿ– ಡಾ. ಎ.ಎಸ್.ಚಂದ್ರಶೇಖರ್, 6.35ಭವದ ಬಯಲಿಗರು–ವಚನಕಾರರ ಪರಿಚಯಾತ್ಮಕ ಕಾರ್ಯಕ್ರಮ, ಲೇಖನ ಮತ್ತು ಪ್ರಸ್ತುತಿ– ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ ವರ್ಷದ ಸಂಭ್ರಮ–ವಿಶೇಷ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ಎಸ್.ಪಿ. ರಾಮ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.15 ಯೋಗದತ್ತ ಜಗತ್ತು–ವಿಶೇಷ ಸರಣಿ

ಮಧ್ಯಾಹ್ನ: 12.45 ಜನಪದಗೀತೆ–ನಾಗಬಸಮ್ಮ ಮತ್ತು ತಂಡ, 1.20 ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, 3.35 ಮಕ್ಕಳ ಮಂಟಪ– ಮುಖಾಮುಖಿ–ವಿದ್ಯಾರ್ಥಿಗಳಿಗ ಪೂರಕವಾದ ಶಾಲಾ ವಾತಾವರಣ ಕುರಿತ ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುವವರು ವೈ.ಎನ್.ರಾಜೇಶ್, 4.30 ನೆನಪಿನಂಗಳ–ಹಿರಿಯ ಕಾನೂನು ತಜ್ಞರಾದ ಡಾ.ಸಿ.ಕೆ.ಎನ್.ರಾಜಾ ಅವರೊಂದಿಗೆ ನಿ.ಗಿರಿಗೌಡ ಹಾಗೂ ಶಿವಾನಂದ ಭಾರತಿ ನಡೆಸಿದ್ದ ಸಂವಾದ ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 6.50 ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00ಲಾಕ್‌ಡೌನ್– ಕಥಾನಾಟಕ. ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ– "ಯಾರನ್ನು ದೂರಲಿ". ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿದ್ವಾನ್ ತೊಪ್ಪೂರು ಬಿ. ಸಾಯಿ ರಾಮ್ – ಹಾಡುಗಾರಿಕೆ, 11.00 ಸವಿನೆನಪು

- **ನೃತ್ಯಗಿರಿ ಪ್ರದರ್ಶಕ ಕಲೆಗಳ ಮತ್ತು ಸಂಶೋಧನಾ ಕೇಂದ್ರ :** ಗುರು ವಿದುಷಿ ಡಾ. ಕೃಪಾ ಫಡ್ಕೆ ಮತ್ತು ವಿದುಷಿ ಆರ್. ವರ್ಷಿಣಿ ಅವರಿಂದ ಗುರುಶಿಷ್ಯ ನೃತ್ಯೋಲ್ಲಾಸ, ಅಧ್ಯಕ್ಷತೆ : ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ನೂಪುರ ಕಲಾವಿದರು ನಿರ್ದೇಶಕ ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿ ರಾವ್, ಸ್ಥಳ: ಕಲಾಮಂದಿರ, ಸಂಜೆ 6ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಿಪಾಲಾನಂದ ಅವರಿಂದ ಕನಸುಗಳ ಮೂಲಕ ಜೀವನದ ಒಳನೋಟ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಶ್ರೀ ಕೃಷ್ಣ ಗಾನಸಭಾ :** ಸಂಗೀತ ಕಾರ್ಯಕ್ರಮ, ವಿದುಷಿ ಐಶ್ವರ್ಯ ವಿದ್ಯಾ ರಘುನಾತ್ ಅವರಿಂದ ಗಾಯನ, ವಿದುಷಿ ಅದಿತಿ ಕೃಷ್ಣಪ್ರಕಾಶ್–ಪಿಟೀಲು, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ಸ್ಥಳ: ಆಳ್ವಾರ್ ಕಲಾ ಭವನ, ಶ್ರೀ ಕೃಷ್ಣ ದೇವಸ್ಥಾನ, ಗೋಕುಲಂ 3ನೇ ಹಂತ, ಸಂಜೆ 6ಕ್ಕೆ.
- **ರಂಗವಲ್ಲಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ರಂಗವಲ್ಲಿ ಕಲಾವಿದರಿಂದ ಗಿರೀಶ್ ಕಾರ್ನಾಡರ 'ತುಘಲಕ್' ನಾಟಕ ಪ್ರದರ್ಶನ, ನಿರ್ದೇಶನ : ರಂಗಾಯಣ ಹಿರಿಯ ಕಲಾವಿದ ಮಾಯಸಂದ್ರ ಕೃಷ್ಣಪ್ರಸಾದ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ.

ಆರ್‌ಎಸ್‌ಎಸ್ ಬಗ್ಗೆ ಸ್ವಯಂ ಪರಿಶೀಲಿಸಿ, ಸಂಶಯ ಪರಿಹರಿಸಿಕೊಳ್ಳಿ

● ಆರ್‌ಎಸ್‌ಎಸ್ ಹಿರಿಯ ಮುಖಂಡ ಮಾ.ವೆಂಕಟರಾಮು ಸಲಹೆ ● ನಮ್ಮನ್ನು ವಿರೋಧಿಸುವವರನ್ನು ಪ್ರೀತಿಯಿಂದ ಗೆಲ್ಲುವ ಪ್ರಯತ್ನ ನಮ್ಮದು ● ರಂಗಾಯಣದ 'ಚಿಂತನ-ಮಂಥನ'ದಲ್ಲಿ 'ನಾನೇಕೆ ಆರ್‌ಎಸ್‌ಎಸ್‌ನಲ್ಲಿದ್ದೇನೆ' ಸಮರ್ಥನೆ



ಮೈಸೂರು, ಜೂ.17(ಎಸ್‌ಬಿಡಿ)- ಸಮಾಜ ಸುಧಾರಣೆಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್) ಮೌನ ಕ್ರಾಂತಿ ನಡೆಸುತ್ತಿದೆ. ಯಾರದೋ ಟೀಕೆಯನ್ನೆ ನಿಜವೆಂದು ನಂಬದೆ ಸ್ವಯಂ ಪರಿಶೀಲಿಸಿ ಸಂಶಯ ಪರಿಹರಿಸಿಕೊಳ್ಳಿ. ನಮ್ಮನ್ನು ವಿರೋಧಿಸುವವರನ್ನೂ ಪ್ರೀತಿಯಿಂದ ಗೆಲ್ಲುವ ಪ್ರಯತ್ನ ಮಾಡುತ್ತೇವೆ ಎಂದು ಆರ್‌ಎಸ್‌ಎಸ್ ಹಿರಿಯ ಮುಖಂಡ ಮಾ.ವೆಂಕಟರಾಮು ತಿಳಿಸಿದರು.

ಮೈಸೂರು ರಂಗಾಯಣದಲ್ಲಿ ನಡೆಯುತ್ತಿರುವ 'ಗ್ರೀಷ್ಮ ರಂಗಾಯಣೋತ್ಸವ'ದ ಭಾಗವಾಗಿ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಆಯೋಜಿಸಿರುವ 'ಚಿಂತನ-ಮಂಥನ' ಕಾರ್ಯಕ್ರಮದಲ್ಲಿ ಶುಕ್ರವಾರ 'ನಾನೇಕೆ ಆರ್‌ಎಸ್‌ಎಸ್‌ನಲ್ಲಿ ಇದ್ದೇನೆ' ಕುರಿತು ಮಾತನಾಡಿದ ಮಾ.ವೆಂಕಟರಾಮು ಅವರು ತಮ್ಮ ಬಾಲ್ಯ, ಆರ್‌ಎಸ್‌ಎಸ್ ಸಂಪರ್ಕ, ಒಡನಾಟಕ್ಕೆ ಕಾರಣ, ಸಂಘದ ಸಿದ್ಧಾಂತ, ಚಟುವಟಿಕೆಗಳ ಬಗ್ಗೆ ವಿಸ್ತೃತವಾಗಿ ಮಾತನಾಡಿದರು.

ಹಳೆಯ ಅರಮನೆಗೆ ಬೆಂಕಿ ಬಿದ್ದಾಗ ಹಾಗೂ ಹೊಸ ಅರಮನೆ ನಿರ್ಮಾಣದಲ್ಲಿ ಅಶೋಕಪುರಂ ಜನ ಸಾಕಷ್ಟು ಕೆಲಸ ಮಾಡಿದ್ದರು. ಇದನ್ನು ಮನಗಂಡ ಮಹಾರಾಜರು ಅಶೋಕಪುರಂ ಬಡಾವಣೆ ನಿರ್ಮಿಸಿಕೊಟ್ಟು ವೀಳ್ಯದ ಎಲೆ ತೋಟದಲ್ಲಿ ವ್ಯವಸಾಯ ಮಾಡಲು ಅವಕಾಶ ಕಲ್ಪಿಸಿ ಸ್ವಾಭಿಮಾನದ ಬದುಕಿನ ಹಾದಿ ತೋರಿದರು. ಬಡಾವಣೆ ಜನ ನಾಟಕ, ಕುಸ್ತಿ, ವಾದ್ಯ, ನೃತ್ಯ ಇತ್ಯಾದಿ ಕಲೆಯನ್ನು ಬೆಳೆಸಿದರು. ವಿ.ಶ್ರೀನಿವಾಸ ಪ್ರಸಾದ್ ಹಾಗೂ ನಾವೆಲ್ಲಾ ಒಟ್ಟಿಗೆ ಆಡಿ ಬೆಳೆದವರು. ಬ್ರಾಹ್ಮಣರಿರುವ ಕೃಷ್ಣಮೂರ್ತಿಪುರಂನಲ್ಲಿ ಆಟವಾಡುವುದರ ಜೊತೆಗೆ ಮಾವಿನ ಕಾಯಿ, ನೆಲ್ಲಿಕಾಯಿ ಕಿತ್ತು ತಿನ್ನುತ್ತಿದ್ದೆವು. ಗಣೇಶ ಪಾರ್ಕ್‌ನಲ್ಲಿ ಒಟ್ಟಾಗಿ ಆಡುತ್ತಿದ್ದವರು ನಮ್ಮನ್ನೂ ಆಟಕ್ಕೆ ಸೇರಿಸಿಕೊಂಡರು. ಆ ವೇಳೆ ನಮ್ಮ ಹೆಸರು ಹಾಗೂ ಮನೆ ಎಲ್ಲಿ ಎಂದು ಕೇಳಿದರೆ ಹೊರತು, ಜಾತಿ ಯಾವುದು ಎನ್ನಲಿಲ್ಲ. ಅಲ್ಲಿ ಶಿಕ್ಷಕ್ ಸತ್ಯ ಅವರು ರಾಷ್ಟ್ರಭಕ್ತಿಗೀತೆ, ಕತೆ ಹೇಳುತ್ತಿದ್ದರು. ಒಂದು ದಿನ ಹೋಗದಿದ್ದರೂ ಅವರು ಮನೆ ಬಳಿಯೇ ಬರುತ್ತಿದ್ದರು. ಎಲ್ಲರನ್ನೂ ಸಮಾನರಾಗಿ ಕಾಣುತ್ತಿದ್ದರು ಎಂದು ಮಾ.ವೆಂಕಟರಾಮು ಸ್ಮರಿಸಿಕೊಂಡರು.

ಹೀಗೆ ಸಂಘದ ಅನೇಕರ ಸಂಪರ್ಕವಾಯಿತು. 1958ರಲ್ಲಿ ಮುಖ್ಯಶಿಕ್ಷಕ್ ಆಗಿದ್ದ ಸು.ರಾಮಣ್ಣ ಅವರು ನಮ್ಮನ್ನೆಲ್ಲಾ ಚಾಮುಂಡಿಬೆಟ್ಟ, ಲಲಿತಮಹಲ್‌ಗೆ ಪಿಕ್‌ನಿಕ್‌ಗೆ ಕರೆದುಕೊಂಡು ಹೋಗುತ್ತಿದ್ದರು. ಆಗ ಎಲ್ಲರನ್ನೂ ವೃತ್ತಾಕಾರದಲ್ಲಿ ಕೂರಿಸಿ ಎಲ್ಲರ ಊಟದ ಡಬ್ಬಿಗಳನ್ನು ಮಧ್ಯದಲ್ಲಿಟ್ಟು ಪ್ರತಿಯೊಬ್ಬರಿಗೂ ಹಂಚುತ್ತಿದ್ದರು. ನಾವು ತಂದ ಊಟವನ್ನೂ ಎಲ್ಲರೂ ತಿನ್ನುತ್ತಾರೆಂದು ಆಗ ತುಂಬಾ ಸಂತೋಷವಾಯಿತು. 1967ರಲ್ಲಿ ಬೆಂಗಳೂರಿನಲ್ಲಿ ದೊಡ್ಡ ಶಿಬಿರ ನಡೆದಾಗ ಮಳೆಯಿಂದ ತೊಂದರೆಯಾಗಿ ಸಾರ್ವಜನಿಕರ ಮನೆಯಲ್ಲಿ ವಾಸ್ತವ್ಯ ಇರಬೇಕಾಯಿತು. ನಾವಿದ್ದ ಮನೆಯವರೂ ಜಾತಿಯನ್ನು ಪ್ರಶ್ನಿಸಲಿಲ್ಲ. ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂನ ಅನೇಕರ ಮನೆಗೆ ಹೋಗಿದ್ದೇನೆ. ಯಾರೂ ಬೇದ ತೋರಲಿಲ್ಲ. ಹೀಗೆ ಆರ್‌ಎಸ್‌ಎಸ್‌ನಲ್ಲಿ ಜೀವನ ಶಿಸ್ತು, ಸಮಯ ಪಾಲನೆ, ಸಹಬಾಳ್ವೆಯ ಪಾಠ ಕಲಿತೆವು. ಇದೆಲ್ಲಾ ನನ್ನ ಮನಸ್ಸಿನ ಮೇಲೆ ಪರಿಣಾಮ ಬೀರಿ, ಸಂಘದಲ್ಲಿ ಮುಂದುವರೆಯಲು ಕಾರಣವಾಯಿತು. ಘಟನಾಯಕ್‌ನಿಂದ ಆರಂಭವಾಗಿ ಶಿಕ್ಷಕ್, ಮುಖ್ಯಶಿಕ್ಷಕ್, ಕಾರ್ಯವಾಹ ಹೀಗೆ ಹಲವು ಜವಾಬ್ದಾರಿಗಳನ್ನು ನಿರ್ವಹಿಸಿದೆ. ಪ್ರಾಂತ ಸಂಘ ಚಾಲಕ್ ಆದಾಗ ಅನೇಕ ಹಿರಿಯರು, ವಿದ್ವಾಂಸರು ನನಗೆ ನಮಸ್ಕರಿಸಿ, ಸಂತಸ ವ್ಯಕ್ತಪಡಿಸಿದ್ದರು ಎಂದರು.

ಸಮಾಜದಲ್ಲಿ ಸಮಾನತೆ ಸಾಧನೆ ದೃಷ್ಟಿಯಿಂದ ಸಾಮರಸ್ಯ ವೇದಿಕೆ ಸೃಷ್ಟಿಸಿ, ಹಲವು ಚಟುವಟಿಕೆ ನಡೆಸಿದ್ದೇವೆ. ಆ ವೇಳೆ ಪೇಜಾವರ ಶ್ರೀಗಳು ದಲಿತರ ಕಾಲೋನಿಯಲ್ಲಿ ಪಾದಯಾತ್ರೆ ನಡೆಸಿ, ತೀರ್ಥ ಪ್ರಸಾದ ನೀಡಿದ್ದರು. ಇದು ಚರ್ಚೆಯಾದ ಬಳಿಕ ಶ್ರೀ ಮಾದಾರಚೆನ್ನಯ್ಯ ಸ್ವಾಮೀಜಿ ಅವರಿಗೆ ಬ್ರಾಹ್ಮಣರ ಮನೆಯಲ್ಲಿ ಪಾದಪೂಜೆ ಕಾರ್ಯಕ್ರಮ ನಿಗದಿಯಾಯ್ತು. ವಿದ್ಯಾರಣ್ಯಪುರಂನ ನಾರಾಯಣ ಅವರ ಮನೆಯಲ್ಲಿ ತಂಗಿದ್ದ ಮಾದಾರ ಚೆನ್ನಯ್ಯ ಶ್ರೀಗಳಿಗೆ ಕೃಷ್ಣಮೂರ್ತಿಪುರಂನ ಹಲವು ಮನೆಗಳಲ್ಲಿ ಪಾದ ಪೂಜೆ ನೆರವೇರಿಸಲಾಯಿತು. ನಂತರ ಪೇಜಾವರ ಶ್ರೀಗಳಿದ್ದ ವೇದಿಕೆಯಲ್ಲಿ ಮಾದಾರ ಚೆನ್ನಯ್ಯ ಶ್ರೀಗಳು ನನ್ನ ಜಿಜ್ಞಾಸೆ ಪರಿಹಾರವಾಯಿತು ಎಂದರು. ಮುಂದುವರೆದು ಬ್ರಾಹ್ಮಣರು, ಲಿಂಗಾಯತರು, ಕುರುಬರು ಇನ್ನಿತರ ಸಮುದಾಯದವರ ಮನೆಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಆಚರಿಸಲಾಯಿತು. ಡಾ.ಸಿದ್ದಲಿಂಗಯ್ಯ ಅವರೂ ಕಾರ್ಯಕ್ರಮಕ್ಕೆ ಆಗಮಿಸಿ, ಬೆಂಬಲಿಸಿದ್ದರು. ಹೀಗೆ ಸಮಾನತೆ ಮೂಡಿಸಲು ಸಾಕಷ್ಟು ಪ್ರಯೋಗಗಳ ಮೂಲಕ ಆರ್‌ಎಸ್‌ಎಸ್ ಮೌನ ಕ್ರಾಂತಿ ನಡೆಸುತ್ತಿದೆ. ಆರ್‌ಎಸ್‌ಎಸ್ ವಿರುದ್ಧ ಯಾರೋ ಮಾಡುವ ಟೀಕೆಯನ್ನೇ ನಿಜವೆಂದು ನಂಬಬೇಡಿ. ಹತ್ತಿರ ಬಂದು, ಸಹವಾಸದಲ್ಲಿದ್ದರೆ ನಿಜ ತಿಳಿಯುತ್ತದೆ. ಪ್ರತ್ಯಕ್ಷವಾಗಿ ಕಂಡು ಪರಿಶೀಲನೆ ನಡೆಸಿ, ಸಂಶಯ ಪರಿಹರಿಸಿಕೊಳ್ಳಿ. ಏನಾದರೂ ತಪ್ಪು ಕಾಣಿಸಿದರೆ ಹೇಳಿ ನಾವು ಒಪ್ಪಿಕೊಳ್ಳುತ್ತೇವೆ ಎಂದು ತಿಳಿಸಿದರು.

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮಾತನಾಡಿ, ಆರ್‌ಎಸ್‌ಎಸ್ ಬ್ರಾಹ್ಮಣ ಸಂಘ, ಪ್ರಗತಿಯ ವಿರೋಧಿ ಎಂಬ ಆರೋಪವಿದೆ. ಆದ್ದರಿಂದ ಆರ್‌ಎಸ್‌ಎಸ್ ಬಗ್ಗೆ ಸ್ಪಷ್ಟತೆ ಸಿಗಲಿ ಎನ್ನುವ ಕಾರಣಕ್ಕೆ ಮಾದರಿ ಜೀವನ ನಡೆಸುತ್ತಿರುವ ಮಾ.ವೆಂಕಟರಾಮು ಅವರನ್ನು ಆಹ್ವಾನಿಸಲಾಗಿದೆ ಎಂದು ತಿಳಿಸಿದರು.

ದೇಶ ಮೊದಲು

ಸಂವಾದದಲ್ಲಿ ನೆರೆದಿದ್ದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮಾ.ವೆಂಕಟರಾಮು, ಭಾರತವನ್ನು ಪ್ರೀತಿಸುವ ಎಲ್ಲರೂ ಭಾರತೀಯರೇ. ವೈಚಾರಿಕ ವಿಭಿನ್ನತೆ ಏನೇ ಇರಲಿ, ದೇಶದ ಬಗ್ಗೆ ಗೌರವ, ಭಕ್ತಿ ಇರಬೇಕು. ಮೊದಲು ದೇಶ ಎನ್ನುವ ಭಾವನೆ ಎಲ್ಲರಲ್ಲೂ ಜಾಗೃತವಾಗಬೇಕು. ಸಮಾಜದಲ್ಲಿ ಎಲ್ಲರೂ ಒಂದೇ ಎಂಬ ಭಾವನೆ ಮೂಡಿಸುವ ನಿಟ್ಟಿನಲ್ಲಿ ಆರ್‌ಎಸ್‌ಎಸ್ ಕೆಲಸ ಮಾಡುತ್ತಿದೆ. ಆರ್‌ಎಸ್‌ಎಸ್ ಪ್ರಗತಿಪರ, ಸಮಾಜವಾದ, ಮುಸ್ಲಿಂ ವಿರೋಧಿ ಎನ್ನುವುದು ಸುಳ್ಳು, ಬರೀ ಶಬ್ಧಗಳಿಂದ ಹೀಗೆ ದೂಷಿಸುವವರು ಪೂರಕವಾದ ಕಾರಣ ನೀಡಬೇಕು. ಕೇಂದ್ರದ ಮಾಜಿ ಸಚಿವ ದಿವಂಗತ ಜಾಫರ್ ಷರೀಫ್ ಅವರು ಹಲವು ವರ್ಷ ಸಂಘದಲ್ಲಿದ್ದರು. ನಂತರದಲ್ಲಿ ವಿರೋಧ, ಟೀಕೆಗಳಿಂದಾಗಿ ಸಂಘದಿಂದ ಅಂತರ ಕಾಯ್ದುಕೊಂಡರು. ಹಾಸನದಲ್ಲಿ ಡ್ಯಾನಿ ಪೆರೇರಾ ಈಗಲೂ ಸಂಘಟನೆ ಮಾಡುತ್ತಿದ್ದಾರೆ. ಹೀಗೆ ಎಲ್ಲಾ ಸಮುದಾಯದವರೂ ಆರ್‌ಎಸ್‌ಎಸ್‌ನಲ್ಲಿ ಇದ್ದಾರೆ. ಸಂವಿಧಾನವನ್ನು ಎಲ್ಲರೂ ಗೌರವಿಸಬೇಕು. ಸಂಘ ಸಂವಿಧಾನದ ವಿರುದ್ಧವಾಗಿ ನಡೆದಿಲ್ಲ. ಮುಕ್ತ ಮನಸ್ಸಿನಿಂದ ಯಾರೇ ಬಂದರೂ ಸಂಘ ಸ್ವಾಗತಿಸುತ್ತದೆ. ಸಂಘದಲ್ಲಿ ಹೊಂದಾಣಿಕೆ, ಬದಲಾವಣೆಯೂ ಇದ್ದೇ ಇದೆ. ಸಮವಸ್ತ್ರವನ್ನೂ ಕಾಲಕ್ಕೆ ತಕ್ಕಂತೆ ಬದಲಿಸಿಕೊಳ್ಳಲಾಗಿದ್ದು, ಈಗ ಪ್ಯಾಂಟ್ ಧರಿಸಲಾಗುತ್ತಿದೆ. ನಮ್ಮನ್ನು ವಿರೋಧಿಸುವವರನ್ನು ಪ್ರೀತಿಯಿಂದಲೇ ಗೆಲ್ಲಲು ಪ್ರಯತ್ನಿಸುತ್ತೇವೆ ಎಂದರು.

ಮನೆ ಮಾದೇಗೌಡರಿಗೆ ಆತ್ಮೀಯ ಅಭಿನಂದನೆ



ವಿಧಾನಪರಿಷತ್ ಮಾಜಿ ಸದಸ್ಯರಾದ ಮಾದೇಗೌಡರನ್ನು ರಂಗಾಯಣದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಇದೇ ವೇಳೆ ವಿವಿಧ ಸಂಘ ಸಂಸ್ಥೆಗಳು, ಬೆಂಬಲಿಗರು, ಹಿತೈಷಿಗಳು ಮಾದೇಗೌಡರನ್ನು ಗೌರವಿಸಿದರು. ಈ ವೇಳೆ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಮಾದೇಗೌಡರ ಸಾಧನೆಯನ್ನು ಬಣ್ಣಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರೇರಣೆಯಿಂದ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಅಧ್ಯಕ್ಷರಾಗಿ, ವಿಧಾನಪರಿಷತ್ ಸದಸ್ಯರಾಗಿ ನಗರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. 50 ಸಾವಿರ ಸೂರಿಲ್ಲದ ಕುಟುಂಬಗಳಿಗೆ ಆಶಾಮಂದಿರ ಯೋಜನೆ ಮೂಲಕ ಮನೆ ಕಲ್ಪಿಸಿಕೊಟ್ಟು ಮನೆ ಮಾದೇಗೌಡರೆಂದೇ ಪ್ರಸಿದ್ಧರಾಗಿದ್ದಾರೆ. ಮಲೆ ಮಹದೇಶ್ವರ ಬೆಟ್ಟ ಹಾಗೂ ಜಾನಪದ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದ್ದಾರೆ. ಸ್ವಚ್ಛತೆಯಲ್ಲಿ ಕುಂಬಾರಕೊಪ್ಪಲು ಗ್ರಾಮವನ್ನು ಇಡೀ ದೇಶವೇ ತಿರುಗಿ ನೋಡುವಂತೆ ಮಾಡಿದ್ದಾರೆ ಎಂದು ಕೊಂಡಾಡಿದರು.

ಡಿಕೆ, ಆವೇಶ್ ಖಾನ್ ಅಬ್ಬರ: ಭಾರತಕ್ಕೆ 82 ರನ್ ಜಯ

ರಾಜ್‌ಕೋಟ್, ಜೂ.17- ದಿನೇಶ್ ಕಾರ್ತಿಕ್ ಅರ್ಧಶತಕ ಹಾಗೂ ಆವೇಶ್ ಖಾನ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಭಾರತ ದಕ್ಷಿಣ ಆಫ್ರಿಕಾ ವಿರುದ್ಧ 82 ರನ್‌ಗಳ ಜಯ ಸಾಧಿಸಿದೆ. ಈ ಮೂಲಕ 5 ಪಂದ್ಯಗಳ ಸರಣಿಯಲ್ಲಿ ಭಾರತ 2-2ರಿಂದ ಸಮಬಲ ಸಾಧಿಸಿದ್ದು, ಭಾನುವಾರ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಕೊನೆಯ ಪಂದ್ಯ ಜಯಿಸುವವರಿಗೆ ಸರಣಿ ಒಲಿಯಲಿದೆ.



ಇಲ್ಲಿನ ಸೌರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ ಮೈದಾನದಲ್ಲಿ ಶುಕ್ರವಾರ ನಡೆದ 4ನೇ ಟಿ20 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 169 ರನ್ ಗಳಿಸಿತು. ತಂಡದ ಮೊತ್ತ 40 ರನ್ ಆಗುವಷ್ಟರಲ್ಲಿ ಋತುರಾಜ್ ಗಾಯಕ್ವಾಡ್ 5, ಇಶಾನ್ ಕಿಶನ್ 27, ಶ್ರೇಯಸ್ ಅಯ್ಯರ್ 4ರನ್ ಗಳಿಸಿ ಬಹುಬೇಗ ಪೆವಿಲಿಯನ್ ಸೇರಿಕೊಂಡರು. ಈ ವೇಳೆ ಕ್ರೀಸ್‌ಗೆ ಆಗಮಿಸಿದ ಹಾರ್ದಿಕ್ ಪಾಂಡ್ಯ ತಲಾ 3 ಸಿಕ್ಸರ್, ಬೌಂಡರಿ ಒಳಗೊಂಡ 46 ರನ್ ಸಿಡಿಸಿ ನಿರ್ಗಮಿಸಿದರೇ, ನಾಯಕ ರಿಷಬ್ ಪಂತ್ 17 ರನ್ ಗಳಿಸಿದರು. ಈ ವೇಳೆ ಬಂದ ದಿನೇಶ್ ಕಾರ್ತಿಕ್ ಕೇವಲ 27 ಎಸೆತಗಳಲ್ಲಿ 9 ಬೌಂಡರಿ, 2 ಸಿಕ್ಸರ್ ಒಳಗೊಂಡ 55 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಉಳಿದಂತೆ ಅಕ್ಷರ್ ಪಟೇಲ್ 8 ರನ್ ಗಳಿಸಿದರು. ದಕ್ಷಿಣಾ ಆಫ್ರಿಕಾ ಪರ ಲುಂಗಿ ಎನ್‌ಗಿಡಿ 2, ಮಾರ್ಕೊ ಜಾನ್ಸೆನ್, ಪಿಟ್ರೋರಿಯಸ್, ಅನ್ರಿಚ್ ನಾರ್ಟ್ಜೆ ಹಾಗೂ ಕೇಶವ್ ಮಹಾರಾಜ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ನಂತರ 170 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ ಆವೇಶ್ ಖಾನ್ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿ 16.5 ಓವರ್‌ಗಳಲ್ಲಿ 87 ರನ್‌ಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿತು. ತಂಡದ ಪರ ಕ್ವಿಂಟನ್ ಡಿಕಾಕ್ 14, ರಾಸ್ಸಿ ವ್ಯಾನ್ ಡೆರ್ ಡಸ್ಸೆನ್ 20, ಮಾರ್ಕೊ ಜಾನ್ಸೆನ್ 12 ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗಲಿಲ್ಲ. ಭಾರತದ ಪರ ಆವೇಶ್ ಖಾನ್ 4 ವಿಕೆಟ್ ಉರುಳಿಸಿ ಯಶಸ್ವಿ ಬೌಲರ್ ಎನಿಸಿದರು. ಉಳಿದಂತೆ ಯಜುವೇಂದ್ರ ಚಹಲ್ 2, ಹರ್ಷಲ್ ಪಟೇಲ್, ಅಕ್ಷರ್ ಪಟೇಲ್ ತಲಾ ಒಂದೊಂದು ವಿಕೆಟ್ ಪಡೆದರು. ದಿನೇಶ್ ಕಾರ್ತಿಕ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಪ್ರೇಕ್ಷಕರ ಮನಸೂರೆಗೊಂಡ ನೃತ್ಯ ಪ್ರದರ್ಶನ



ಮೈಸೂರು, ಜೂ.17(ಎಸ್‌ಪಿಎನ್)- ಮೈಸೂರು ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ನಡೆದ ನೃತ್ಯ ಪ್ರದರ್ಶನ ಕಾರ್ಯಕ್ರಮದಲ್ಲಿ ಕಲಾ ಸ್ಪರ್ಶ ಸಂಸ್ಥೆ ವಿದ್ಯಾರ್ಥಿಗಳು ಅಮೋಘ ಪ್ರದರ್ಶನ ನೀಡಿ ಪ್ರೇಕ್ಷಕರ ಮನ ಸೆಳೆದರು.

ಇದಕ್ಕೂ ಮುನ್ನ ಕಾಮಾಕ್ಷಿ ಆಸ್ಪತ್ರೆಯ ಹಿರಿಯ ವೈದ್ಯ ಡಾ.ಉಮೇಶ್ ಕಾಮತ್ ಮಾತನಾಡಿ, ಜಾಗತಿಕ ಮಟ್ಟದಲ್ಲಿ ಒಂದು ದೇಶ ಬೌದ್ಧಿಕ ಸಾಮರ್ಥ್ಯವನ್ನು ಆಯಾಯ ದೇಶದ ಕಲೆ, ಸಾಹಿತ್ಯ ಹಾಗೂ ಕ್ರೀಡೆಗಳ ಮೂಲಕ ಗುರುತಿಸಲಾಗುತ್ತದೆ ಎಂದು ತಿಳಿಸಿದರು.

ಈ ನೆಲದ ಕಲೆಗಳು ದೇಶದ ಸ್ವಾಭಿಮಾನ ಸಂಕೇತವನ್ನು ಬಿಂಬಿಸುತ್ತವೆ. ಹಾಗಾಗಿ ಇಂದಿನ ವಿದ್ಯಾರ್ಥಿಗಳಿಗೆ ಓದಿನ ಜೊತೆಗೆ ಸಂಗೀತ, ಸಾಹಿತ್ಯ, ಚಿತ್ರಕಲೆ ಹಾಗೂ ನಾಟಕ ಸೇರಿದಂತೆ ಇತರೆ ಪ್ರದರ್ಶಕ ಕಲೆಗಳಲ್ಲಿ ತೊಡಗಿಸಿದರೆ ಭವಿಷ್ಯದಲ್ಲಿ ಉನ್ನತ ಪ್ರಜೆಗಳಾಗಿ ರೂಪಿಸಲು ಸಾಧ್ಯವಿದೆ ಎಂದು ತಿಳಿಸಿದರು.

ಈ ವೇಳೆ ಹಿರಿಯ ಕಲಾವಿದೆ ಎ.ಚಂದ್ರಮತಿ, ಶ್ರೀ ಬೃಹಸ್ಪತಿ ಆಚಾರ್ಯ ಸಂಸ್ಥೆಯ ಟ್ರಸ್ಟಿ ಕೆ.ಜಯಂತಿ ಬಾಯಿ, ರಾಜೇಂದ್ರ ಜಿ.ಶಣೈ, ಡಾ.ಯು.ಬಿ.ಶಣೈ, ಕಲಾಸ್ಪರ್ಶ ಸಂಸ್ಥೆಯ ಮುಖ್ಯಸ್ಥೆ ಸ್ಪರ್ಶ ಶಣೈ ಉಪಸ್ಥಿತರಿದ್ದರು.

ಉಚಿತ ಥೈರಾಯ್ಡ್ ಆರೋಗ್ಯ ತಪಾಸಣೆ

ಮೈಸೂರು, ಜೂನ್ 17- ಮೈಸೂರಿನ ದಟ್ಟಗಳ್ಳಿಯ ನಯನಕುಮಾರ್ಸ್ ಆಸ್ಪತ್ರೆ ವತಿಯಿಂದ ಜೂನ್ 20ರ ಸೋಮವಾರ ಬೆಳಗ್ಗೆ 9ರಿಂದ 1.30 ರವರೆಗೆ ಆಸ್ಪತ್ರೆಯ ಆವರಣದಲ್ಲಿ ಉಚಿತ ಥೈರಾಯ್ಡ್ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ರಕ್ತದಲ್ಲಿ ಕೊಬ್ಬಿನ ಅಂಶ ಹೆಚ್ಚಾಗುವಿಕೆ, ತೂಕ ಹೆಚ್ಚಾಗುವಿಕೆ, ಋತುಚಕ್ರದಲ್ಲಿ ಬದಲಾವಣೆ, ಸುಸ್ತು ಎದೆಬಡಿತ, ಮಾನಸಿಕ ಖಿನ್ನತೆ, ಮಲಬದ್ಧತೆ, ಧ್ವನಿ ಬದಲಾವಣೆ, ಮುಖ ಊದುವಿಕೆ, ಮಾಂಸಖಂಡಗಳಲ್ಲಿ ದುರ್ಬಲತೆ ಇತ್ಯಾದಿ ತೊಂದರೆಗಳಿದ್ದಲ್ಲಿ ಖ್ಯಾತ ತಜ್ಞರೊಂದಿಗೆ ಉಚಿತ ಸಮಾಲೋಚನೆ, ಸಲಹೆ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9513310100/8762850960.

ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನಿರ್ವಹಣೆ

ಗ್ಲೋಬಲ್ ಟೆಂಡರ್‌ಗೆ ಸಂಪುಟ ಉಪಸಮಿತಿ ಇರಾದೆ

ಅತೀ ಹೆಚ್ಚು ಬಿಡ್ಡುದಾರ, ಪಾರಂಪರಿಕ ಹೋಟೆಲ್ ನಿರ್ವಹಣೆಯಲ್ಲಿ ಅನುಭವವಿರುವ ಸಂಸ್ಥೆಗೆ ನೀಡಲು ಸಲಹೆ



ಮೈಸೂರು, ಜೂ. 17(ಆರ್‌ಕೆ)- ಅಧ್ಯಯನ ವರದಿ ಆಧರಿಸಿ ಗ್ಲೋಬಲ್ ಟೆಂಡರ್ ಮೂಲಕ ಪಾರಂಪರಿಕ ಹೋಟೆಲ್ ನಡೆಸಿ ಅನುಭವವಿರುವ ಅತೀ ಹೆಚ್ಚಿನ ಬಿಡ್ಡುದಾರ ಸಂಸ್ಥೆಗೆ ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನಿರ್ವಹಣೆ ವಹಿಸಲು ಸಚಿವ ಸಂಪುಟ ಉಪಸಮಿತಿಯು ನಿರ್ಧರಿಸಿದೆ.

ತಾಜ್ ಗ್ರೂಪ್‌ಗೆ ಪಾರಂಪರಿಕ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಒಪ್ಪಿಸುವ ಪ್ರಸ್ತಾವನೆಗೆ ನಿರಾಸಕ್ತಿ ತಾಳಿರುವ ಸಂಪುಟ ಉಪ ಸಮಿತಿಯು, ಟೆಂಡರ್ ಮೂಲಕ ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡುವ ಉನ್ನತ ಸಂಸ್ಥೆಗೆ ನೀಡುವ ಬಗ್ಗೆ ಆಸಕ್ತಿ ತೋರಿದ್ದು, ಅದಕ್ಕಾಗಿ ಸಮಗ್ರ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಪ್ರವಾಸೋದ್ಯಮ ಇಲಾಖೆ ಉನ್ನತ ಅಧಿಕಾರಿಗಳಿಗೆ ಸಲಹೆ ನೀಡಿದೆ.

ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್, ಕ್ರೀಡಾ ಸಚಿವ ನಾರಾಯಣಗೌಡರ ನೇತೃತ್ವದಲ್ಲಿ ಜೂನ್ 14ರಂದು ಬೆಂಗಳೂರಲ್ಲಿ ನಡೆದ ಸಭೆಯಲ್ಲಿ ಈ ಕುರಿತು ವಿಸ್ತೃತ ಚರ್ಚೆ ನಡೆಸಲಾಯಿತು. ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೆರಿಟೇಜ್ ಹೋಟೆಲ್ ಅನ್ನು ನಿರ್ವಹಿಸಲು ಅಪಾರ ಅನುಭವ ಬೇಕು. ಪಾರಂಪರಿಕ ಹೋಟೆಲ್ ನಡೆಸಿದ ಅನುಭವವುಳ್ಳ ಸಂಸ್ಥೆಗೆ ಒಪ್ಪಿಸಿದರೆ ಅತ್ಯುತ್ತಮವಾಗಿ ನಿರ್ವಹಣೆ ಮಾಡಲು ಸಾಧ್ಯ ಎಂದು ಸಭೆಯು ಅಭಿಪ್ರಾಯಪಟ್ಟಿತು.

ಷರತ್ತುಗಳೇನಿರಬೇಕು, ಪಾರಂಪರಿಕ ಮೌಲ್ಯ ಹೇಗೆ ಕಾಪಾಡಬೇಕು, ಬಾಡಿಗೆ ಎಷ್ಟು ನಿಗದಿಪಡಿಸಬೇಕೆಂಬಿತ್ಯಾದಿ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅಧ್ಯಯನ ವರದಿ ತಯಾರಿಸಿ, ಅದನ್ನು ಪರಿಶೀಲಿಸಿದ ಬಳಿಕ ಟೆಂಡರ್ ಕರೆದು ಅತೀ ಹೆಚ್ಚಿನ ಬಿಡ್ಡುದಾರರು, ಪಾರಂಪರಿಕ ಮೌಲ್ಯವನ್ನು ಉಳಿಸಿಕೊಂಡು ನಿರ್ವಹಣೆ ಮಾಡುವ ಸಂಸ್ಥೆಗೆ ಒಪ್ಪಿಸೋಣ ಎಂದು ಸಚಿವರು ಅಭಿಪ್ರಾಯಪಟ್ಟಿದ್ದಾರೆ.

ಯಾವುದೋ ಒಂದು ಹೋಟೆಲ್‌ಗೆ ಒಪ್ಪಿಸುವ ಬದಲು ಗ್ಲೋಬಲ್ ಟೆಂಡರ್ ಕರೆದರೆ, ಪ್ರತಿಷ್ಠಿತ ಹೋಟೆಲ್‌ಗಳು ಮುಂದೆ ಬರುತ್ತವೆ. ಉತ್ಕೃಷ್ಟ ರೀತಿಯಲ್ಲಿ ನಿರ್ವಹಣೆ ಅನುಭವವಿರುವ, ನಮ್ಮ ಷರತ್ತುಗಳಿಗೆ ಒಪ್ಪುವ ಹಾಗೂ ಅತೀ ಹೆಚ್ಚು ಬಾಡಿಗೆ ನೀಡುವ ಕಂಪನಿಗೆ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಅನ್ನು ವಹಿಸಬಹುದು ಎಂದು ಆನಂದ್ ಸಿಂಗ್ ತಿಳಿಸಿದ್ದಾರೆ.

ಈವರೆಗೆ ತಾಜ್ ಗ್ರೂಪ್‌ಗೆ ವಹಿಸುವ ಕುರಿತಂತೆ ಚರ್ಚೆಯಾಗುತ್ತಿತ್ತು. ಹಲವು ಸಭೆಗಳಲ್ಲಿ ತಾಜ್ ಗ್ರೂಪ್‌ನ ಅಧಿಕಾರಿಗಳು ಪವರ್ ಪಾಯಿಂಟ್ ಪ್ರಸೆಂಟೇಷನ್ ನೀಡಿ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನಿರ್ವಹಿಸಲು ಆಸಕ್ತಿ ತೋರಿದ್ದರು. ಆದರೆ ಆ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿರಲಿಲ್ಲ.

ಕೆಎಸ್‌ಟಿಡಿಸಿ ಅಧೀನದಲ್ಲಿರುವ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಸಂಸ್ಥೆ, ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಅನ್ನು ಈಗ ನಿರ್ವಹಿಸುತ್ತಿದ್ದು, ನಿರ್ವಹಣೆ ಕಷ್ಟವಾಗುತ್ತಿರುವುದರಿಂದ ಖಾಸಗಿ ಒಡೆತನದ ಸಂಸ್ಥೆಗೆ ಒಪ್ಪಿಸಲು ಸರ್ಕಾರ ಮುಂದಾಗಿದೆ. ಈ ಐಷಾರಾಮಿ ಹೋಟೆಲ್ ನಿರ್ವಹಿಸಲು ಅನುಭವವಿರುವ ಸಂಸ್ಥೆಗೇ ವಹಿಸಬೇಕೆಂಬ ಅಭಿಪ್ರಾಯಗಳು ವ್ಯಕ್ತವಾಗಿರುವುದರಿಂದ ಈಗ ಟೆಂಡರ್ ಕರೆಯಲು ಸಂಪುಟ ಉಪಸಮಿತಿ ಆಸಕ್ತಿ ತೋರಿದೆ.

ನಿಯಮಾನುಸಾರ ಸರ್ಕಾರಿ ಸ್ವಾಮ್ಯದ ಹೋಟೆಲ್ ಅನ್ನು ಖಾಸಗಿಯವರಿಗೆ ಒಪ್ಪಿಸಲು ಟೆಂಡರ್ ಕರೆಯಲೇಬೇಕು, ಅರ್ಹ ಯಶಸ್ವಿ ಬಿಡ್ಡುದಾರರಿಗೆ ಮಾತ್ರ ಷರತ್ತುಗಳನ್ವಯ ನೀಡಬೇಕಾಗುತ್ತದೆ. ಏಕಾಏಕಿ ಒಂದು ಹೋಟೆಲ್ ಗ್ರೂಪ್‌ಗೆ ವಹಿಸುವುದು ಸೂಕ್ತವಲ್ಲ ಎಂದು ಸಚಿವ ಆನಂದ್ ಸಿಂಗ್ ಅಧಿಕಾರಿಗಳಿಗೆ ಸಲಹೆ ನೀಡಿದರು.

ಸಭೆಯಲ್ಲಿ ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಎನ್.ವಿ. ಪ್ರಸಾದ್, ನಿರ್ದೇಶಕ ಟಿ. ವೆಂಕಟೇಶ್, ಹಣಕಾಸು ಇಲಾಖೆ ಅಧಿಕಾರಿಗಳು ಹಾಜರಿದ್ದರು.



ನಕ್ಕರೆ ಅದೇ ಸ್ವರ್ಗ

ಈತ : "ಯಾಕೆ ಹೀಗೆ ಬೆಳಿಗ್ಗೆಯೇ ಸಿಟ್ಟು ಮಾಡಿಕೊಂಡಿದ್ದೀರಾ ಸರ್?"
ಆತ : "ಮತ್ತೇನ್ರಿ? ಪೇಪರ್ ತಗೊಂಡು ಹೋಗಿ ಪುಕ್ಕಟೆಯಾಗಿ ಓದ್ತೀರಾ. ಇಂದು ಪೇಪರ್‌ನೊಡನೆ ಕೊಟ್ಟಿರುವ ಶಾಂಪು ಪ್ಯಾಕೆಟ್ ಕೂಡ ಕೊಡಿ ಅಂತಿದ್ದೀರಲ್ಲ?!"

ಮೈಸೂರು ಮಿತ್ರ
ಶನಿವಾರ, 18 ಜೂನ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ತಪ್ಪು ದಾರಿಗೆ ಹಲವಾರು ದಿಕ್ಕುಗಳು. ಆದರೆ ಸರಿದಾರಿಯಲ್ಲಿ ನಡೆಯಲು ಒಂದೇ ಒಂದು ದಿಕ್ಕು – ಅರಿಸ್ಟಾಟಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ದುಡೀಲಿಲ್ಲ, ದುಃಖಿಸಲಿಲ್ಲ ಇರೋದೆಲ್ಲಾ ನಂದೇ ಅಂದ

ನಿಮ್ಮ ಪತ್ರಗಳು

ರಾವಂದೂರಿನಲ್ಲಿ ಎಸ್‌ಬಿಐ ಶಾಖೆ ತೆರೆಯಲಿ

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಹೋಬಳಿ ರಾವಂದೂರು ಮುಂದುವರೆಯುತ್ತಿರುವ ಕೇಂದ್ರ ಸ್ಥಾನವಾಗಿದೆ. ಇಲ್ಲಿಗೆ ಬರುವ ಸುತ್ತಮುತ್ತಲಿನ ಹಳ್ಳಿಗಳ ಸಾಮಾನ್ಯ ಜನರ ನಿತ್ಯದ ಸಮಸ್ಯೆ ಎಂದರೆ ಅದು ಬ್ಯಾಂಕಿಗೆ ಅಲೆದಾಟ. ಈಗ ಸದ್ಯಕ್ಕೆ ಇರುವ ಕರ್ನಾಟಕ ಗ್ರಾಮೀಣ ಬ್ಯಾಂಕ್, ಮೈಸೂರು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್, ಇನ್ನೂ ಊರಿಗೊಬ್ಬಳೇ ಪದ್ಮಾವತಿ ಎಂಬಂತೆ ಇರುವ ಬ್ಯಾಂಕ್ ಆಫ್ ಬರೋಡ. ಈ ಮೂರು ಬ್ಯಾಂಕುಗಳಲ್ಲಿ ಜನರು ತಮ್ಮ ದೈನಂದಿನ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದಾರೆ. ಒಂದು ಸಾಮಾನ್ಯ ಸಂಗತಿ ಏನೆಂದರೆ ಇಲ್ಲಿಗೆ ಬರುವ ಮುಕ್ಕಾಲು ಪಾಲು ಜನರು ಅನಕ್ಷರಸ್ಥ ಪುರುಷರು ಮತ್ತು ಮಹಿಳೆಯರು. ಸಂಘ ಸಂಸ್ಥೆಗಳ ಮಹಿಳಾ ಸದಸ್ಯರು ಹಾಗೂ ಆಕಳು ಮತ್ತು ಎಮ್ಮೆಗಳ ಹಾಲು ಕರೆಯುವ ಗ್ರಾಮೀಣ ಪ್ರದೇಶದ ಜನರು. ಇವರಿಗೆ ಬರಹ ಅಷ್ಟಾಗಿ ತಿಳಿದಿರುವುದಿಲ್ಲ. ಇನ್ನೂ ಎಟಿಎಂ ಬಳಕೆ ಸಹ ತಿಳಿದೇ ಇಲ್ಲವೆನ್ನಿ. ಇಂತಹ ಮಂದಿ ಹಣ ಹಿಂಪಡೆಯಲು ಬಂದರೆ ಗದರಿಸುವುದು, ತುಂಬಾ ಸಮಯ ಕಾಯಿಸಿ ಸತಾಯಿಸುವುದು ನಿತ್ಯದ ರೋದನೆಯಾಗಿದೆ. ಇದರಿಂದ ಜನರಿಗೆ ಬ್ಯಾಂಕಿನ ವ್ಯವಹಾರವೇ ರೋಸಿ ಹೋಗಿದೆ. ಏಕೆಂದರೆ ಅಲ್ಲಿನ ಸಿಬ್ಬಂದಿ ಸ್ಥಳೀಯವಾಗಿ ಒಂದಷ್ಟು ಹಣವಿರುವ ಜನರ ಕೆಲಸವನ್ನು ಮಾಡಲು ಸಮಯ ಬೇಕಲ್ಲವೇ, ಹಣವುಳ್ಳ ಜನರು ಮನೆಯಲ್ಲೇ ಕುಳಿತು ತಮ್ಮ ಬ್ಯಾಂಕಿನ ವ್ಯವಹಾರಗಳನ್ನು ನಿರ್ವಹಣೆ ಮಾಡುತ್ತಾರೆ ಎಂದರೆ ಅವರ ಪ್ರಭಾವ ಎಷ್ಟಿರಬಹುದು ಯೋಚಿಸಿ ಮತ್ತು ಊಹಿಸಿ. ಹೀಗಾಗಿ ಈ ವಿಷಯದಲ್ಲಿ ಬ್ಯಾಂಕಿನ ಉದ್ಯೋಗಿಗಳ ವರ್ತನೆಯಂತೂ ಹೇಳತೀರದು. ಯಾರಾದರೂ ಕಾನೂನು ಕೇಳಲು ಹೋದರೆ ಜೋರು ದನಿಯಲ್ಲಿ ಗದರಿಸಿ ಹೊರಗೆ ಕಳಿಸುವುದು ಸಹಜವೆನಿಸಿದೆ.

ಇದಕ್ಕಾಗಿ ರಾವಂದೂರಿನಲ್ಲಿ ಎಸ್‌ಬಿಐ ಶಾಖೆಯೊಂದನ್ನು ಬೇಗ ತೆರೆಯಲಿ. ಜತೆಗೆ ಅದರ ಎಟಿಎಂ ಸಹ ದಿನದ 24 ಗಂಟೆಯೂ ಕಾರ್ಯ ನಿರ್ವಹಿಸಲಿ. ಇದರಿಂದ ಜನರಿಗೆ ಅನುಕೂಲವಾಗಲಿದೆ. ಈಗ ಇರುವ ಎಟಿಎಂಗಳ ಬಗ್ಗೆ ಜನರು ಅಷ್ಟಾಗಿ ನಂಬಿಕೆ ಇಟ್ಟಿಲ್ಲ. ಏಕೆಂದರೆ ಯಾವ ಸಮಯದಲ್ಲಿ ಅದರಲ್ಲಿ ಹಣ ಇರುತ್ತದೆಯೋ, ಇರುವುದಿಲ್ಲವೋ, ನೆಟ್ ವರ್ಕ್ ಸಮಸ್ಯೆಯಿಂದ ಚಾಲೂ ಇಲ್ಲವೋ ಆ ಬ್ಯಾಂಕಿನ ಮಹಾ ಅಧಿಕಾರಿಗಳಿಗಷ್ಟೇ ಗೊತ್ತು. ಹಾಗಾಗಿ ಇದಕ್ಕೆ ಸಂಬಂಧಿಸಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮೇಲಧಿಕಾರಿಗಳು ಇಲ್ಲಿಗೆ ಭೇಟಿ ನೀಡಿ ಪರಿಶೀಲಿಸಿ ಆದಷ್ಟು ಬೇಗ ಶಾಖೆಯನ್ನು ಆರಂಭಿಸಲಿ.

–ಎ.ಎಸ್. ಗೋವಿಂದೇಗೌಡ, ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ.

ನೋಟಿನಲ್ಲಿ ಮಹಾತ್ಮ ಗಾಂಧಿ ಚಿತ್ರವೇ ಇರಲಿ

ಮಾನ್ಯರೆ,

ಕೆಲವು ಮುಖಬೆಲೆಯ ನೋಟುಗಳ ಮೇಲೆ ರಾಷ್ಟ್ರಕವಿ ರವೀಂದ್ರನಾಥ ಟ್ಯಾಗೂರ್ ಮತ್ತು ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಫೋಟೋ ಮುದ್ರಿಸಲು ಕೇಂದ್ರ ಸರ್ಕಾರದ ಹಂತದಲ್ಲಿ ಚರ್ಚೆ ನಡೆಯುತ್ತಿದೆ ಎಂಬ ಮಾಹಿತಿ ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು. ರಾಷ್ಟ್ರಕ್ಕೆ ರಾಷ್ಟ್ರಧ್ವಜ ಇರುವಂತೆ ಭಾರತೀಯ ನೋಟುಗಳ ಮೇಲೆ ಗಾಂಧೀಜಿ ಫೋಟೋ ಇರುವುದು ಭಾರತದ ಪ್ರತೀಕ. ಆ ಕಾರಣಕ್ಕಾಗಿಯೇ ಹಿಂದಿನ ಸರ್ಕಾರಗಳು ಮಹಾತ್ಮನಿಗೆ ಆ ಮೂಲಕ ಗೌರವ ಸಲ್ಲಿಸಿವೆ ಮಹಾತ್ಮ ಗಾಂಧೀಜಿ ವಿಶ್ವಮಾನವ ಹಾಗೂ ಅದಮ್ಯ ಮಾನವತಾ ವಾದಿ, ಅಹಿಂಸೆಯನ್ನು ಜಗತ್ತಿಗೆ ಸಾರಿದ ಯುಗಪುರುಷ. ಆ ಕಾರಣಕ್ಕಾಗಿಯೇ ಗಾಂಧೀಜಿ ಜಗತ್ತಿಗೆ ಮಾರ್ಗದರ್ಶಕರಾದರು. ಜಗತ್ತಿನ ಮಹಾಪುರುಷರಾದಿಯಾಗಿ ಗಾಂಧೀಜಿಯವರ ತತ್ವಗಳನ್ನು ಪಾಲಿಸಿದರು. ಕ್ರಾಂತಿಯಿಂದ ಸಾದಿಸಲಾಗದ್ದನ್ನು ಶಾಂತಿ, ಅಹಿಂಸೆಯಿಂದ ಸಾದಿಸಬಹುದು ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟ ಮಹಾಪುರುಷ ಗಾಂಧೀಜಿ. ಇಂದಿಗೂ ಭಾರತ ಎಂದರೆ ಗಾಂಧೀಜಿ, ಗಾಂಧೀಜಿ ಎಂದರೆ ಭಾರತ ಅನ್ನುವಷ್ಟರ ಮಟ್ಟಿಗೆ ಗಾಂಧೀಜಿ ಜಗತ್ತಿಗೆ ಇಷ್ಟವಾಗುತ್ತಾರೆ. ಇಂದಿಗೂ ಭಾರತವನ್ನು ಜಗತ್ತು ಗುರುತಿಸುವುದು ಗಾಂಧೀಜಿ ಭಾರತವೆಂದು ಈ ಸತ್ಯವನ್ನು ಯಾರು ಅಲ್ಲಗಳೆಯುವಂತಿಲ್ಲ. ಎಲ್ಲಾ ಜಾತಿ ಮತ 'ಧರ್ಮವನ್ನು ಬಡವ–ಶ್ರೀಮಂತರನ್ನು ಒಗ್ಗೂಡಿಸಿದ ಕೀರ್ತಿ ಗಾಂಧೀಜಿಯವರಿಗೆ ಸಲ್ಲುತ್ತದೆ. ಗಾಂಧೀಜಿ ಜಗತ್ತಿನ ಮೇರುಪುರುಷ. ಸತ್ಯ ಹೀಗಿರುವಾಗ ನೋಟುಗಳಿಗೆ ರಾಷ್ಟ್ರಕವಿ ರವೀಂದ್ರನಾಥ ಟ್ಯಾಗೂರ್, ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಇನ್ನಾವುದೇ ಮಹಾಪುರುಷರ ಫೋಟೋ ಹಾಕುವುದು. ಭಾರತದ ಪ್ರತೀಕವಾಗಲಾರದು. ಅಲ್ಲದೆ ಭಾರತೀಯರ ಭಾವನೆಗಳನ್ನು ಕೆಣಕಿದಂತಾಗುತ್ತದೆ. ಈವರೆಗೂ ಯಾವ ಸರ್ಕಾರಗಳು ಜಗತ್ತಿನ ಈ ಮೇರು ಪುರುಷನ ಪ್ರತಿಮೆಯನ್ನು ಜಗತ್ತಿನಲ್ಲಿಯೇ ಅತ್ಯಂತ ಎತ್ತರಕ್ಕೆ ಸ್ಥಾಪಿಸಲು ಮನಸ್ಸೇ ಮಾಡಿಲ್ಲ. ಎಲ್ಲಾ ಪಕ್ಷಗಳು ಗಾಂಧೀಜಿಯವರ ಹೆಸರು ಹೇಳಿಕೊಂಡು ಲಾಭ ಪಡೆದಿವೆಯೇ ಹೊರತು ಗಾಂಧೀಜಿಯವರಿಗೆ ಸಲ್ಲಬೇಕಾದ ಗೌರವ ಸಲ್ಲಿಸಿಲ್ಲ. ಗಾಂಧೀಜಿಯವರ ತತ್ವ ಆದರ್ಶಗಳನ್ನು ಪಾಲಿಸಿಲ್ಲ. ಪಂಚಾಯ್ತಿ ಸದಸ್ಯರಿಂದ ಹಿಡಿದು ಕೇಂದ್ರ ಸರ್ಕಾರದ ಸಂಸದರವರಿಗೂ ಸ್ವಂತಕ್ಕೆ ಎಷ್ಟೆಲ್ಲಾ ಲೂಟಿ ಹೊಡೆಯಬಹುದು ಎಂಬುದನ್ನು ಯೋಚಿಸುತ್ತಾರೆ. ಎಲ್ಲೋ ಬೆರಳೆಣಿಕೆಯಷ್ಟು ರಾಜಕಾರಣಿಗಳು ಮಾತ್ರ ಗಾಂಧೀಜಿಯವರ ತತ್ವ–ಆದರ್ಶಗಳನ್ನು ಪಾಲಿಸಿರುವುದು ಮಹಾತ್ಮನಿಗೆ ಸಂದ ಗೌರವವೆಂದೇ ಭಾವಿಸಬೇಕಾಗಿದೆ.

–ಬಿ.ಜಿ.ರಂಗೇಗೌಡ, ಮೈಸೂರು.

ರಸ್ತೆ ದುರಸ್ಥಿಗೆ ಮೋದಿಯೇ ಬರಬೇಕೇ?

ಮಾನ್ಯರೆ

ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಜೂನ್ 21ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಮೈಸೂರಿಗೆ ಆಗಮಿಸುತ್ತಿರುವುದು ತಿಳಿದಿರುವ ಸಂಗತಿಯೇ. ಇದರ ಸಲುವಾಗಿಯೇ ಕೆಲವು ದಿನಗಳ ಹಿಂದೆಯಷ್ಟೇ ಹಾಳಾಗಿದ್ದ ಕೆಲವು ರಸ್ತೆಗಳ ದುರಸ್ಥಿ ಭಾಗ್ಯ ಕಂಡಿದೆ. ಇನ್ನು ಕೆಲವು ರಸ್ತೆಗಳ ಕಾಮಗಾರಿ ನಡೆಯುತ್ತಿದೆ. ಅದರಲ್ಲೂ ಮುಖ್ಯವಾಗಿ ಯೋಗ ನಡೆಯುವ ಸ್ಥಳಗಳಾದ ಅರಮನೆಯ ಹಿಂಭಾಗದ ರಸ್ತೆ ಮತ್ತು ಮಾಲ್ ಆಫ್ ಮೈಸೂರಿಗೆ ಹೋಗುವ ರಸ್ತೆಗಳ ದುರಸ್ಥಿ ಕಾರ್ಯದ ಜೊತೆಗೆ ಅಲ್ಲಿನ ಸುತ್ತ ಮುತ್ತಲು ಸುಣ್ಣ–ಬಣ್ಣಗಳಿಂದ ಕಂಗೊಳಿಸುವಂತೆ ಮಾಡುತ್ತಿದ್ದಾರೆ. ಕಾರಣ ಮೋದಿಯವರು ಬರುತ್ತಾರೆ ಎಂದು. ಏಕೆ ಮೈಸೂರಿನಲ್ಲಿ ಇನ್ನಾವ ರಸ್ತೆಯು ಹದಗೆಟ್ಟಿಲ್ಲವೇ? ಆ ರಸ್ತೆಗೆ ಮೋದಿಯವರು ಬರುವುದಿಲ್ಲ ಎಂಬ ಕಾರಣಕ್ಕೆ ದುರಸ್ಥಿ ಮಾಡಿಸುತ್ತಿಲ್ಲವೇ? ನಗರದ ಎಷ್ಟೋ ರಸ್ತೆಗಳು ಹಾಳಾಗಿ ಪ್ರತಿದಿನ ಸಾರ್ವಜನಿಕರ ಮೃತ್ಯುಗಳಾಗಿ ಕಾಡುತ್ತಿವೆ. ಅಂತಹ ಸ್ಥಳಗಳು ಯಾರಿಗೂ ಕಾಣುವುದೇ ಇಲ್ಲ. ಏಕೆಂದರೆ ಅಲ್ಲಿಗೆ ಮೋದಿ ಬರುವುದಿಲ್ಲ. ಜನರಿಗೆ ಏನಾದರೆ ಅವರಿಗೇನು? ಮೊದಲು ಅವರು ದೊಡ್ಡ ನಾಯಕರಿಂದ ಶಹಭಾಷ್ ಗಿರಿ ಪಡೆಯಬೇಕಷ್ಟೆ. ಇಂತಹ ಮನಸ್ಥಿತಿಯುಳ್ಳ ನಾಯಕರು ಅಥವಾ ಅಧಿಕಾರಿಗಳು ಇರುವವರೆಗೂ ನಮ್ಮ ನಗರದ ಅಭಿವೃದ್ಧಿಯ ಕನಸು ಕನಸಾಗಿಯೇ ಇರುತ್ತದೆ ಹೊರತು ನಿಜವಾಗಲೂ ಸಾಧ್ಯವೇ ಇಲ್ಲ. ದಯವಿಟ್ಟು ಮೊದಲು ನಿಮ್ಮ ರಾಜಕೀಯ ತಂತ್ರವನ್ನು ಬಿಟ್ಟು ಜನರ ಕಲ್ಯಾಣಕ್ಕಾಗಿ ಕೆಲಸ ಮಾಡಿ. ಹಾಗೂ ಮತವನ್ನು ನೀಡಿ ನಮ್ಮನ್ನು ಆಳಲು ನಿಮಗೆ ಅಧಿಕಾರವನ್ನು ನೀಡಿದ್ದೇವೆ. ಅದನ್ನು ಸದುಪಯೋಗ ಪಡಿಸಿಕೊಂಡು ಒಳ್ಳೆಯ ಕೆಲಸ ಮಾಡಿ ಜನರ ಜೀವನದೊಂದಿಗೆ ಆಟವಾಡದೆ ಅಧಿಕಾರಕ್ಕೆ ಆಸೆ ಪಡದೆ, ಅವಶ್ಯಕತೆ ಇದ್ದ ರಸ್ತೆಗೆ ದುರಸ್ಥಿಗೊಳಿಸಬೇಕಾಗಿ ವಿನಂತಿಸಿ.

–ಐಶ್ವರ್ಯ,ಚಟ್ನಹಳ್ಳಿ, ಮಾನಸ ಗಂಗೋತ್ರಿ, ಮೈಸೂರು.



ಕಾರ್ಕಳ ಆನಂದಭಟ್
ಮೊ. 7676554198

ದಿಕ್ಕುದೆಸೆ

ಭವಿಷ್ಯದ ಇಂಧನ 'ಸೌರ ವಿದ್ಯುತ್'

ಹೆಚ್ಚುತ್ತಿರುವ ಭೂಮಿಯ ತಾಪಮಾನ, ಭಾರೀ ಪ್ರಮಾಣದಲ್ಲಿ ವಾತಾವರಣಕ್ಕೆ ಬಿಡುಗಡೆಯಾಗುತ್ತಿರುವ ಹಸಿರು ಮನೆ ಅನಿಲ ಹಾಗೂ ಜಗತ್ತಿನ ಹವಾಮಾನದಲ್ಲಾಗುತ್ತಿರುವ ಹಠಾತ್ ಬದಲಾವಣೆಗಳಿಂದ ಜಗತ್ತು ಅಪಾಯದಲ್ಲಿದೆ. ತಾಪಮಾನ ಹೆಚ್ಚಳದಿಂದ ಮಹಾಸಾಗರಗಳ ನೀರಿನ ಮಟ್ಟ ನಿರಂತರವಾಗಿ ಏರುತ್ತಿದೆ. ಮುಂದಿನ ಕೆಲವೇ ವರ್ಷಗಳಲ್ಲಿ ಕೆಲವು ದೇಶಗಳು, ಮಹಾನಗರಗಳು ಜಲಸಮಾಧಿಯಾಗಿ ಜಗತ್ತಿನ ಭೂಪಟದಿಂದ ಕಣ್ಮರೆಯಾಗುವ ಅಪಾಯದಲ್ಲಿವೆ. ದಕ್ಷಿಣ ಪೆಸಿಫಿಕ್ ಮಹಾಸಾಗರದ ಹವಾಯಿ ಮತ್ತು ಆಸ್ಟ್ರೇಲಿಯಾದ ಮಧ್ಯೆ ಇರುವ ಪುಟ್ಟ ದ್ವೀಪ ರಾಷ್ಟ್ರ ಕಿರಿಬಾತಿ. ಈ ರಾಷ್ಟ್ರವನ್ನು ಸುತ್ತುವರಿದಿರುವ ಸಾಗರದ ನೀರಿನ ಮಟ್ಟ 1993 ರಿಂದ ಪ್ರತಿ ವರ್ಷ 3.2 ಮಿ.ಮೀ.ನಷ್ಟು ಏರಿಕೆಯಾಗುತ್ತಿದ್ದು, ಮುಂದಿನ ನಾಲ್ಕೈದು ವರ್ಷಗಳಲ್ಲಿ ಸಂಪೂರ್ಣ ಸಾಗರದ ಗರ್ಭ ಸೇರಲಿದೆ. ಅಲ್ಲಿನ ಸರಕಾರವು ತನ್ನ ಪ್ರಜೆಗಳಿಗಾಗಿ ಸಮೀಪದ ಫಿಜಿ ದೇಶದ ಭೂಮಿಯನ್ನು ಖರೀದಿಸುತ್ತಿದೆ. ಹೆಚ್ಚುತ್ತಿರುವ ತಾಪಮಾನಕ್ಕೆ ಕಿರಿಬಾತಿಯು ಬಲಿಯಾಗುವ ಪ್ರಥಮ ದೇಶವಾಗಲಿದೆ. ಈ ಹಿನ್ನೆಲೆಯಲ್ಲಿ ಭೂಮಿಯ ವಾತಾವರಣ ರಕ್ಷಿಸಲು, ಹವಾಮಾನ ಬದಲಾವಣೆಗಳ ಪರಿಣಾಮಗಳನ್ನು ಕನಿಷ್ಠಕ್ಕೆ ತರಲು ಭಾರೀ ಪ್ರಯತ್ನಗಳು ನಡೆಯುತ್ತಿವೆ. ಪರ್ಯಾವರಣದ ಸಮಸ್ಯೆಗಳ ನಿವಾರಣೆ, ಜನಸಾಮಾನ್ಯರ ಸುಗಮ ದೈನಂದಿನ ಜೀವನಕ್ಕೆ ಸೌರಶಕ್ತಿಯು ಪರಿಹಾರ ನೀಡುವುದೆಂಬ ವಿಶ್ವಾಸ ಮೂಡಿದೆ.

ಸೂರ್ಯನು ಜಗತ್ತಿನ ಚೈತನ್ಯವಾಗಿದ್ದಾನೆ. ಸಮಸ್ತ ಜೀವರಾಶಿಗಳ ಚಟುವಟಿಕೆಗಳಿಗೆ ಕ್ರಿಯಾಶೀಲತೆಗೆ ಶಕ್ತಿಯನ್ನು ನೀಡುವ ಪ್ರಾಣವಾಯುವಾಗಿದ್ದಾನೆ. ಹಗಲಿನಲ್ಲಿ ತನ್ನ ಪ್ರಖರ ಕಿರಣಗಳಿಂದ ಬೆಳಕನ್ನು ನೀಡುತ್ತಿರುವ ಈತನು ಭವಿಷ್ಯದಲ್ಲಿ ತನ್ನ ಶಾಖದಿಂದ ಸಂಜೆಯ ನಂತರವೂ ಬೆಳಕನ್ನು ನೀಡಲಿದ್ದಾನೆ. ಜಗತ್ತಿಗೆ ಪರಿಶುದ್ಧ ವಿದ್ಯುತ್ ಅನ್ನು ನೀಡಲಿದ್ದಾನೆ.

ಸೌರ ವಿದ್ಯುತ್ ಉತ್ಪಾದನೆಯ ವಿಚಾರದಲ್ಲಿ ಭಾರತವು ಜಗತ್ತಿನ ಅನೇಕ ದೇಶಗಳಿಗಿಂತ ಉತ್ತಮ ಸ್ಥಿತಿಯಲ್ಲಿದೆ. ಸೌರ ವಿದ್ಯುತ್ ಉತ್ಪಾದನೆಗೆ ಅವಶ್ಯಕವಾದ ಫ್ಲೆಟೊವೊಲ್ಟಿಕ್ ಫಲಕಗಳನ್ನು (ಸೌರ ಫಲಕ) ಅಳವಡಿಸಿದಲ್ಲಿ ಭಾರತದಲ್ಲಿ ಇತರ ದೇಶಗಳಿಗಿಂತ ಹೆಚ್ಚು ಅವಧಿಗೆ ಹೆಚ್ಚು ವಿದ್ಯುತ್ ಉತ್ಪಾದಿಸಬಹುದು. ಭಾರತದಲ್ಲಿ ವಾರ್ಷಿಕ ಮೂರು ಸಾವಿರ ಗಂಟೆ ವಿದ್ಯುತ್ ಉತ್ಪಾದಿಸುವಷ್ಟು ಸೂರ್ಯನ ತಾಪವಿದ್ದು, ತನಗೆ ಮತ್ತು ಜಗತ್ತಿನ ಅತೀ ದೊಡ್ಡ ಭೂಭಾಗಕ್ಕೆ ಅವಶ್ಯಕತೆ ಇದ್ದಷ್ಟು ಸೌರ ವಿದ್ಯುತ್ ಅನ್ನು ಪೂರೈಸಬಹುದು. ಭಾರತದ ಭೌಗೋಳಿಕ ಸ್ಥಿತಿಯಿಂದ ದಿನದಲ್ಲಿ ಎಂಟು ಗಂಟೆಗಿಂತ ಅಧಿಕ ಅವಧಿಗೆ ಸೂರ್ಯನ ಬೆಳಕು ದೊರೆಯುತ್ತಿರುವುದರಿಂದ ಸೌರ ವಿದ್ಯುತ್ ಉತ್ಪಾದನೆಗೆ ಅತ್ಯಂತ ಪ್ರಶಸ್ತ ದೇಶವಾಗಿದೆ. ಭಾರತದಲ್ಲಿ ಸಾಂಪ್ರದಾಯಿಕ ಮೂಲಗಳಿಂದ (ಶಾಖೋತ್ಪನ್ನ, ಅಣು, ಜಲ ವಿದ್ಯುತ್ ಇತ್ಯಾದಿ) ಉತ್ಪಾದನೆಯಾಗುವಷ್ಟೇ ವಿದ್ಯುತ್ ಅನ್ನು ಸೌರ ಶಕ್ತಿಯಿಂದಲೂ ಪಡೆಯಬಹುದು.

ಸೌರ ವಿದ್ಯುತ್ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಭಾರತದ ಬೇಡಿಕೆ–ಸಾಮರ್ಥ್ಯ: 2013ರವರೆಗೆ ಭಾರತದ ಸೌರ ವಿದ್ಯುತ್ ಉತ್ಪಾದನಾ ಕ್ಷಮತೆ ಕೇವಲ 2300 ಮೆಗಾವ್ಯಾಟ್ ಆಗಿತ್ತು. ದೇಶದಲ್ಲಿ ವಿದ್ಯುತ್ ಬೇಡಿಕೆ ಪ್ರತಿ ವರ್ಷ ಶೇ.6ರಿಂದ 10ರ ದರದಲ್ಲಿ ಏರಿಕೆಯಾಗುತ್ತಿದೆ. 2019–20ರಲ್ಲಿ ಶೇ.10 ರಿಂದ 15ರಷ್ಟು ದಾಖಲಿಸಿತು. 2035ರ ವೇಳೆಗೆ ಭಾರತದ ಸೌರ ವಿದ್ಯುತ್ ಬೇಡಿಕೆಯಲ್ಲಿ ಏಳು ಪಟ್ಟು ವೃದ್ಧಿಯನ್ನು ನಿರೀಕ್ಷಿಸಲಾಗಿದೆ. ಭಾರತವು 2030ರೊಳಗೆ ತನ್ನ ಒಟ್ಟು ವಿದ್ಯುತ್ ಅವಶ್ಯಕತೆಯ ಶೇ. 40ರಷ್ಟು ಹಸಿರು ಶಕ್ತಿಯಿಂದ ಉತ್ಪಾದಿಸುವ ಲಕ್ಷ್ಯ ಹೊಂದಿದೆ. ಈ ಗುರಿ ಸಾಧಿಸಲು 2022ರ ಅಂತ್ಯಕ್ಕೆ ಸೌರ ಶಕ್ತಿಯಿಂದ 100 ಗಿ–ವ್ಯಾಟ್, ಪವನ (ಗಾಳಿ) ಶಕ್ತಿಯಿಂದ 60 ಗಿ–ವ್ಯಾಟ್ ಬಯೋಮಾಸ್‌ನಿಂದ 10 ಗಿ–ವ್ಯಾಟ್ ಹಾಗೂ ಮಿನಿ ಜಲವಿದ್ಯುತ್ ಯೋಜನೆಗಳಿಂದ 5 ಗಿ–ವ್ಯಾಟ್ ಒಟ್ಟು ಸಾಧಿಸಲು ಕಠಿಣ ಎನ್ನಬಹುದಾದ 175 ಗಿ–ವ್ಯಾಟ್‌ನ ಪೂರ್ವ ಗುರಿಯನ್ನು ಮೋದಿ ಸರಕಾರವು ನಿಗದಿಪಡಿಸಿದೆ. ಇಂದು ದೇಶದ ಸೌರ ವಿದ್ಯುತ್ ಉತ್ಪಾದನಾ ಕ್ಷಮತೆ 55 ಗಿ–ವ್ಯಾಟ್ ತಲುಪಿದೆ. ಭಾರತವಿಂದು ಸೌರ ವಿದ್ಯುತ್ ಉತ್ಪಾದನೆಯಲ್ಲಿ ಜಗತ್ತಿನ ನಾಲ್ಕನೇ ಅತೀ ದೊಡ್ಡ ದೇಶವಾಗಿದೆ. ಮಹತ್ವದ ವಿಚಾರವೆಂದರೆ ಕೇವಲ ಕಂಪನಿಗಳಲ್ಲದೇ ಜನಸಾಮಾನ್ಯರು ತಮ್ಮ ಮನೆಗಳ ಮೇಲ್ಛಾವಣಿಗಳಲ್ಲಿ ಸೌರ ವಿದ್ಯುತ್ ಉತ್ಪಾದಿಸಲು ಉತ್ಸಾಹ ತೋರುತ್ತಿದ್ದಾರೆ. ವಿದ್ಯುತ್ ಸಂಪರ್ಕ ಕಲ್ಪಿಸಲು ಕಠಿಣವಾಗಿರುವ ಪರ್ವತೀಯ ಪ್ರದೇಶಗಳಲ್ಲಿನ ಕುಗ್ರಾಮಗಳು ಸೌರ ವಿದ್ಯುತ್‌ನಿಂದ ಬೆಳಗುತ್ತಿವೆ.



> "ಭಾರತವನ್ನು ಆಮದಿನಿಂದ ರಫ್ತುಗಾರ ರಾಷ್ಟ್ರವನ್ನಾಗಿ ಪರಿವರ್ತಿಸಲು ಸ್ವದೇಶಿ ಸೋಲಾರ್ ಘಟಕಗಳು ಮತ್ತು ಮೊಡ್ಯೂಲ್ ಉತ್ಪಾದನಾ ಕ್ಷೇತ್ರಗಳಿಗೆ ಉತ್ಪಾದನಾ ಆಧಾರಿತ ಉತ್ತೇಜನ ನೀತಿಯಡಿ (PLI) 2021 ಏಪ್ರಿಲ್‌ನಲ್ಲಿ 4500 ಕೋಟಿ ರೂ.ಗೆ ಅನುಮೋದನೆ ನೀಡಿತ್ತು. ಈ ಕ್ಷೇತ್ರಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಿ ಆತ್ಮನಿರ್ಭರತೆ ಸಾಧಿಸಲು ಪಿಎಲ್‌ಐ ಯೋಜನೆಯಡಿ 24 ಸಾವಿರ ಕೋಟಿಗೆ ಏರಿಸುವ ಪ್ರಸ್ತಾಪ ಮಾಡಿದೆ. ಈ ಮೂಲಕ ಪಾಲಿಸಿಲ್ಕಾನ್ ಮತ್ತು ಸೋಲಾರ್ ಪಿ.ವಿ.ಮೊಡ್ಯೂಲ್‌ಗಳನ್ನು ಸಂಪೂರ್ಣ ದೇಶೀಯ ಉತ್ಪಾದನಾ ಘಟಕಗಳಲ್ಲಿ ತಯಾರಿಸಲು ಆದ್ಯತೆ ನೀಡಲಾಗುವುದು. 2030ರ ವೇಳೆಗೆ ಭಾರತವು ಸೌರ ವಿದ್ಯುತ್ ಉತ್ಪಾದನೆಯ ಪ್ರಮಾಣವನ್ನು 280 ಗಿ-ವ್ಯಾಟ್‌ಗೆ ತಲುಪುವ ಮಹತ್ವಾಕಾಂಕ್ಷೆ ಹೊಂದಿದೆ.

ಸ್ವದೇಶಿ ಉತ್ಪಾದನೆಗೆ ಉತ್ತೇಜನ: ದೇಶದಲ್ಲಿ ಸೌರ ವಿದ್ಯುತ್ ಘಟಕಗಳ ಸ್ಥಾಪನೆಯ ವೇಗ ಅತ್ಯಧಿಕವಾಗಿದೆ. ಆದರೆ ಇದಕ್ಕೆ ಪೂರಕ ವಾಗಿ ಎ.ವಿ.ಸೆಲ್‌ಗಳ ಉತ್ಪಾದನೆಯಾಗುತ್ತಿಲ್ಲ. ಪ್ರಸ್ತುತ ವಾರ್ಷಿಕವಾಗಿ ಕೇವಲ ಮೂರು ಸಾವಿರ ಮೆಗಾ ವ್ಯಾಟ್ ಮಾತ್ರ ಉತ್ಪಾದನೆಯಾಗುತ್ತಿದೆ. ಹೀಗಾಗಿ ಭಾರತವು ಸೋಲಾರ್ ಸೆಲ್‌ಗಳಿಗೆ ಚೀನಿ ಕಂಪನಿ ಗಳನ್ನು ಅವಲಂಭಿಸಿದೆ. ಆದರೆ ಚೀನಾದೊಂದಿಗಿನ ಸಂಬಂಧದಲ್ಲಿ ಉಂಟಾಗಿರುವ ಬಿಕ್ಕಟ್ಟಿನಿಂದ ಆಮದು ಕಠಿಣವಾಗಿದೆ. ಪರಿಣಾಮ ಸೌರ ವಿದ್ಯುತ್ ಕಾರ್ಯಕ್ರಮದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಈ ಕಾರಣದಿಂದ ಸರಕಾರವು ಪಿ.ವಿ.ಮೊಡ್ಯೂಲ್‌ಗಳ ಉತ್ಪಾದನಾ ಕ್ಷೇತ್ರವನ್ನು ಆತ್ಮನಿರ್ಭರಗೊಳಿಸಲು ಅಪೇಕ್ಷಿಸುತ್ತಿದೆ. ಭಾರತವನ್ನು ಆಮದಿನಿಂದ ರಫ್ತುಗಾರ ರಾಷ್ಟ್ರವನ್ನಾಗಿ ಪರಿವರ್ತಿಸಲು ಸ್ವದೇಶಿ ಸೋಲಾರ್ ಘಟಕಗಳು ಮತ್ತು ಮೊಡ್ಯೂಲ್ ಉತ್ಪಾದನಾ ಕ್ಷೇತ್ರಗಳಿಗೆ ಉತ್ಪಾದನಾ ಆಧಾರಿತ ಉತ್ತೇಜನ ನೀತಿಯಡಿ (PLI) 2021 ಏಪ್ರಿಲ್‌ನಲ್ಲಿ 4500 ಕೋಟಿ ರೂ.ಗೆ ಅನುಮೋದನೆ ನೀಡಿತ್ತು. ಈ ಕ್ಷೇತ್ರಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಿ ಆತ್ಮನಿರ್ಭರತೆ ಸಾಧಿಸಲು ಪಿಎಲ್‌ಐ ಯೋಜನೆಯಡಿ 24 ಸಾವಿರ ಕೋಟಿಗೆ ಏರಿಸುವ ಪ್ರಸ್ತಾಪ ಮಾಡಿದೆ. ಈ ಮೂಲಕ ಪಾಲಿಸಿಲ್ಕಾನ್ ಮತ್ತು ಸೋಲಾರ್ ಪಿ.ವಿ.ಮೊಡ್ಯೂಲ್‌ಗಳನ್ನು ಸಂಪೂರ್ಣ ದೇಶೀಯ ಉತ್ಪಾದನಾ ಘಟಕಗಳಲ್ಲಿ ತಯಾರಿಸಲು ಆದ್ಯತೆ ನೀಡಲಾಗುವುದು. 2030ರ ವೇಳೆಗೆ ಭಾರತವು ಸೌರ ವಿದ್ಯುತ್ ಉತ್ಪಾದನೆಯ ಪ್ರಮಾಣವನ್ನು 280 ಗಿ–ವ್ಯಾಟ್‌ಗೆ ತಲುಪುವ ಮಹತ್ವಾಕಾಂಕ್ಷೆ ಹೊಂದಿದೆ. ಜಾಗತಿಕ ತಾಪಮಾನ ನಿಯಂತ್ರಿಸಲು ವಾತಾವರಣಕ್ಕೆ ಬಿಡುಗಡೆಯಾಗುತ್ತಿರುವ ಕಾರ್ಬನ್ ಅನಿಲದ ಪ್ರಮಾಣವನ್ನು ಕಡಿಮೆ ಮಾಡುವ ಜಾಗತಿಕ ಪ್ರಯಾಸಕ್ಕೆ ಭಾರತ ಮಹತ್ವದ ಕೊಡುಗೆ ನೀಡುತ್ತಿದೆ. ಭಾರತವು 2030ರ ವೇಳೆಗೆ ಹಸಿರು ಮನೆ ಅನಿಲವನ್ನು ಶೂನ್ಯಕ್ಕೆ ತರುವ ದಿಕ್ಕಿನಲ್ಲಿ ಕ್ರಿಯಾಶೀಲವಾಗಿದೆ.

ಸೌರವಿದ್ಯುತ್ ನಾಯಕತ್ವ ವಹಿಸುವತ್ತ ಭಾರತ: ಸೌರ ವಿದ್ಯುತ್ ಕ್ಷೇತ್ರದಲ್ಲಿ ಭಾರತವು ವಿಶ್ವ ನಾಯಕತ್ವ ವಹಿಸಲು ಸಮರ್ಪಕ ಕ್ರಿಯಾ ಯೋಜನೆ ಮತ್ತು ಸಮಯಾಧಾರಿತ ಕ್ರಮದಲ್ಲಿ ಮುಂದುವರಿಯುತ್ತಿದೆ. ಪ್ರಧಾನಿ ಮೋದಿಯವರ ಸಲಹೆಯ ಮೇರೆಗೆ ಫ್ರಾನ್ಸ್ ಸಹಯೋಗದೊಂದಿಗೆ 2015ರಲ್ಲಿ ಅಂತರರಾಷ್ಟ್ರೀಯ ಸೌರ ಮೈತ್ರಿ ಕೂಟ (ISA) ರಚಿಸಲಾಯ್ತು. ಇದರಡಿ 121 ದೇಶಗಳು ಒಂದಾಗಿ ಅಸಂಪ್ರದಾಯಿಕ ಶಕ್ತಿಯ ಅನ್ವೇಷಿಸಲು ನಿಶ್ಚಯಿಸಿದ್ದು, 2030ರ ವೇಳೆಗೆ ಜಗತ್ತಿನಲ್ಲಿ 1000 ಗಿ–ವ್ಯಾಟ್ (1 ಟ್ರಿಲಿಯನ್ ವ್ಯಾಟ್) ಸೌರ ವಿದ್ಯುತ್‌ನ ಲಕ್ಷ್ಯ ವಿರಿಸಿದೆ. ಈ ಮೈತ್ರಿ ಕೂಟದ ದೇಶಗಳಲ್ಲಿ 2015ರಲ್ಲಿ ಉತ್ಪಾದನೆಯಾಗುತ್ತಿದ್ದ ಸೌರ ವಿದ್ಯುತ್‌ನ ಪ್ರಮಾಣವು 63.8 ಗಿ–ವ್ಯಾಟ್‌ನಿಂದ ಪ್ರಸ್ತುತ 196.7 ಗಿ–ವ್ಯಾಟ್‌ನಷ್ಟು ಏರಿಕೆಯಾಗಿದೆ. ಜಗತ್ತಿನ ಹೆಚ್ಚುತ್ತಿರುವ ತಾಪಮಾನ ನಿಯಂತ್ರಿಸುವಲ್ಲಿ ಹಾಗೂ ಹಸಿರು ಮನೆ ಅನಿಲ ಬಿಡುಗಡೆಯ ಪ್ರಮಾಣ ಕಡಿಮೆಗೊಳಿಸುವಲ್ಲಿ ಇದು ಸಕಾರಾತ್ಮಕ ಬೆಳವಣಿಗೆಯಾಗಿದೆ.

ಭಾರತದ ಸಾಧನೆಗಳು: ದಿ.31.3.2022ರ ಅಂಕಿ–ಅಂಶಗಳಂತೆ ಭಾರತದ ಒಟ್ಟು ರಾಷ್ಟ್ರೀಯ ವಿದ್ಯುತ್ ಉತ್ಪಾದನೆ 399.467 ಗಿ–ವ್ಯಾಟ್‌ಗಳಾಗಿದೆ. ಇದರಲ್ಲಿ 2022ರ ಕ್ಯಾಲೆಂಡರ್ ವರ್ಷದ ಮೊದಲ ತ್ರೈಮಾಸಿಕದಲ್ಲಿ 22 ಬಿಲಿಯನ್ ಯೂನಿಟ್‌ನಷ್ಟು ಸೌರ ವಿದ್ಯುತ್ ಉತ್ಪಾದನೆಯಾಗಿದೆ. ಮಧ್ಯಪ್ರದೇಶದ ರೇವಾದಲ್ಲಿ ಏಷ್ಯಾದಲ್ಲೇ ಅತೀ ದೊಡ್ಡದಾದ ಸೌರ ವಿದ್ಯುತ್‌ನ ಅಲ್ಟ್ರಾ ಮೇಘಾ ಪಾರ್ಕ್ ಅನ್ನು ಕೇವಲ ಎರಡು ವರ್ಷದಲ್ಲಿ ನಿರ್ಮಿಸಲಾಗಿದೆ. ಈ ಪಾರ್ಕ್‌ನಲ್ಲಿ 700 ಮೆಗಾ ವ್ಯಾಟ್‌ನಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದೆ. ಈ ಚಿಕ್ಕ ಪಾರ್ಕ್ ಆದರೂ ಪ್ರತಿ ವರ್ಷ 15.7 ಲಕ್ಷ ಟನ್‌ನಷ್ಟು ಕಾರ್ಬನ್ ಡೈ–ಆಕ್ಸೈಡ್ ಅನ್ನು ವಾತಾವರಣಕ್ಕೆ ಸೇರುವುದನ್ನು ತಡೆಯಲಿದೆ. ಇದು 2.60 ಕೋಟಿ ಸಸಿ ನೆಡುವಿಕೆಗೆ ಸಮನಾಗಿದೆ. ಪುನರ್ ಬಳಕೆ ಇಂಧನದಿಂದ ಸೌರವಿದ್ಯುತ್ ಪರ್ಯಾವರಣ ಸಂಕಷ್ಟಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಭಾರತವು ಭವಿಷ್ಯದಲ್ಲಿ ನಿರ್ಣಾಯಕ ಭೂಮಿಕೆ ನಿಭಾಯಿಸಲಿದೆ. ಇದು ಭಾರತೀಯರಿಗೆ ಹೆಮ್ಮೆ ತರುವ ವಿಷಯವಾಗಿದೆ.

ಅರಣ್ಯ ಇಲಾಖೆ ಸ್ತುತ್ಯಾರ್ಹ ಕಾರ್ಯ: ಮಲೆ ಮಹದೇಶ್ವರ ವನ್ಯಧಾಮದ ಕುಗ್ರಾಮಗಳ ಜನರಿಗೆ ಉಚಿತ ವಾಹನ ಸೇವೆ 'ಜನ–ವನ ಸೇತುವೆ–2022'


- ಆಂಬುಲೆನ್ಸ್, ಪಡಿತರ ಸಾಗಿಸಲು, ಶಿಕ್ಷಕರು, ವಿದ್ಯಾರ್ಥಿಗಳು, ಗರ್ಭಿಣಿಯರಿಗೆ ನೆರವು
- ಚಾಮರಾಜನಗರ ಜಿಲ್ಲಾಡಳಿತದ ಆರ್ಥಿಕ ನೆರವಿನೊಂದಿಗೆ ಜನೋಪಯೋಗಿ ಕಾರ್ಯ


ಎಂ.ಟಿ.ಯೋಗೇಶ್ ಕುಮಾರ್

ಮಲೆಮಹದೇಶ್ವರ ಬೆಟ್ಟ, ಜೂ.17 – ಇನ್ನೇನು, ರಾಜ್ಯದ ಮತ್ತೊಂದು ಹುಲಿ ಸಂರಕ್ಷಿತ ಪ್ರದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಗಲಿರುವ ಮಲೆ ಮಹದೇಶ್ವರ ಬೆಟ್ಟ ವನ್ಯಧಾಮ ವ್ಯಾಪ್ತಿಯಲ್ಲಿ ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಕುಗ್ರಾಮಗಳ ಜನರಿಗೆ ತುರ್ತುಸೇವೆಗಾಗಿ 'ಜನ–ವನ ಸೇತುವೆ–24X7' ವಿವಿಧೋದ್ದೇಶ ಉಚಿತ ವಾಹನ ಸೇವೆ ಆರಂಭಿಸಿದೆ.

ಸಂಪುಟದ ಅನುಮೋದನೆ ದೊರೆತರೆ ಸದ್ಯದಲ್ಲೇ ರಾಜ್ಯದ ಮತ್ತೊಂದು ಹುಲಿ ಸಂರಕ್ಷಿತ ಪ್ರದೇಶವೆಂಬ ಹೆಗ್ಗಳಿಕೆಗೆ ಮಲೆ ಮಹದೇಶ್ವರ ಬೆಟ್ಟ ವನ್ಯಧಾಮ ಪಾತ್ರವಾಗಲಿದ್ದು, ಇದು 920 ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. ಈ ದಟ್ಟಾರಣ್ಯದ ನಡುವೆ 25 ಗ್ರಾಮಗಳಿವೆ. ಅದರಲ್ಲೂ ಮಹದೇಶ್ವರ ಬೆಟ್ಟಕ್ಕೆ ಹೊಂದಿಕೊಂಡಂತಿರುವ ಬೆಟ್ಟಗಳ ಕುಗ್ರಾಮಗಳಲ್ಲಿ ವಾಸಿಸುವ ಜನ ಮೊದಲೇ ಮೂಲ ಸೌಲಭ್ಯವಿಲ್ಲದೆ ನರಳುತ್ತಿದ್ದಾರೆ. ಇವರಿಗೆ ನೆರವಾಗಲು ಅರಣ್ಯ ಇಲಾಖೆ, ಜಿಲ್ಲಾಡಳಿತದ ಸಹಕಾರದಿಂದ 'ಜನ–ವನ ಸೇತುವೆ' ಆರಂಭಿಸಿದೆ. ಈ ಸೇವೆ ದೇಶದಲ್ಲಿಯೇ ಅರಣ್ಯ ಇಲಾಖೆಯ ವಿಶೇಷ ಜನ ಸೇವೆಯಾಗಿದೆ.

ಏನಿದು 'ಜನ–ವನ ಸೇತುವೆ: ಕಾಡಿನ ಗ್ರಾಮಗಳಿಗೆ ವಾಹನ ವ್ಯವಸ್ಥೆ ಇಲ್ಲದ ಕಾರಣ ಅಗತ್ಯ ವಸ್ತುಗಳ ಖರೀದಿಗೆ, ಗರ್ಭಿಣಿಯರು, ಅನಾರೋಗ್ಯಕ್ಕೆ ತುತ್ತಾದವರನ್ನು ಆಸ್ಪತ್ರೆಗೆ ಸಾಗಿಸಲು ಪರದಾಟ, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳ ಪರದಾಟ, ನ್ಯಾಯಬೆಲೆ ಅಂಗಡಿಗಳಿಂದ ಪಡಿತರ ವಸ್ತುಗಳನ್ನು ಸಾಗಿಸಲು ಆಗುತ್ತಿದ್ದ ತೊಂದರೆ ಮನಗಂಡು ಅರಣ್ಯ ಇಲಾಖೆ ಆರಂಭದಲ್ಲಿ ಪ್ರಮುಖ ನಾಲ್ಕು ಮಾರ್ಗಗಳಲ್ಲಿ ದಿನದ 24 ಗಂಟೆಯೂ ವಿವಿಧೋದ್ದೇಶ ವಾಹನ ಸೇವೆ 'ಜನ–ವನ ಸೇತುವೆ' ಜನರಿಗೆ ಕಲ್ಪಿಸಲಾಗಿತ್ತು. ಕಡಿದಾದ ಹಾಗೂ ಕಣಿವೆ ರಸ್ತೆಯಲ್ಲಿ ಸರಾಗವಾಗಿ ಸಾಗಬಲ್ಲ ವಾಹನಗಳನ್ನೇ ಆಯ್ಕೆ ಮಾಡಿಕೊಂಡಿರುವುದು ಕಾಡೊಳಗಿನ ಜನರ ಸೇವೆಗೆ ಅರಣ್ಯ ಇಲಾಖೆಗೆ ಇರುವ ಅಂತಃಕರಣ ಹಾಗೂ ಕಳಕಳಿಯನ್ನು ತೋರ್ಪಡಿಸುತ್ತದೆ.





ಮಲೆಮಹದೇಶ್ವರ ಬೆಟ್ಟ ವನ್ಯಧಾಮದ ಕಾಡೊಳಗಿನ ಗ್ರಾಮಗಳ ಜನರಿಗಾಗಿ ಅರಣ್ಯ ಇಲಾಖೆ ಆರಂಭಿಸಿರುವ 'ಜನ–ವನ ಸೇತುವೆ' ವಾಹನಗಳು.

ಮಾರ್ಗ: ಮಲೆಮಹದೇಶ್ವರ ಬೆಟ್ಟ ವನ್ಯಧಾಮದಲ್ಲಿ ಆರಂಭಿಸಿರುವ 'ಜನ–ವನ ಸೇತುವೆ' ಕಾರ್ಯಕ್ರಮದಡಿ ನಾಲ್ಕು ವಾಹನಗಳನ್ನು ಖರೀದಿಸಲಾಗಿದೆ. ಅವುಗಳಲ್ಲಿ ಮೂರು ಮಲೆಮಹದೇಶ್ವರ ಬೆಟ್ಟವನ್ನು ಕೇಂದ್ರೀಕರಿಸಿಕೊಂಡು ವಿವಿಧ ಗ್ರಾಮಗಳಿಗೆ ಸಂಚರಿಸಲಿವೆ. ಮತ್ತೊಂದು ಅಜ್ಜಿಪುರದಲ್ಲಿ ಕಾರ್ಯಾಚರಿಸಲಿದೆ. ಒಂದು ವಾಹನ ಮೆದುಗಲಾನೆ–ಮಹದೇಶ್ವರ ಬೆಟ್ಟ– ತುಳಸಿಕೆರೆ–ಇಂಡಿಗನತ್ತ ಸಾಗಿದರೆ, ಮತ್ತೊಂದು ಪಡುಸಾಲನತ್ತ–ಪಾಲಾರ್–ಮಹದೇಶ್ವರ ಬೆಟ್ಟಕ್ಕೆ ಸಂಚಾರ ಮಾಡಲಿದೆ. ಮೂರನೇ ವಾಹನ ಮಹದೇಶ್ವರ ಬೆಟ್ಟ– ಕೊಕ್ಕಬಾರೆ–ತೋಕೆರೆ–ದೊಡ್ಡಾಣೆ–ಮರ್ಟಳ್ಳಿ ಮಾರ್ಗದಲ್ಲಿ ಸಂಚರಿಸಲಿದೆ. ನಾಲ್ಕನೇ ವಾಹನ ಪಚ್ಚೆದೊಡ್ಡಿ–ಕಾಂತಳ್ಳಿ–ಅಜ್ಜಿಪುರ ಮಾರ್ಗದಲ್ಲಿ ಸಂಚರಿಸಲಿದೆ.

56 ಲಕ್ಷ ವಿನಿಯೋಗ: ಹೊಸ ವಾಹನವನ್ನು ಖರೀದಿಸಲು 56 ಲಕ್ಷ ವಿನಿಯೋಗಿಸಲಾಗಿದೆ. ಜಿಲ್ಲಾ ಮಿನರಲ್ ಫಂಡ್‌ನಲ್ಲಿ ಚಾಮರಾಜನಗರದ ಜಿಲ್ಲಾಡಳಿತ, ಮಲೆಮಹದೇಶ್ವರ ಬೆಟ್ಟ ವನ್ಯಧಾಮಕ್ಕೆ 50 ಲಕ್ಷ ರೂ. ನೀಡಿತ್ತು. ಅದರಲ್ಲಿ ಒಂದು ವಾಹನಕ್ಕೆ 14 ಲಕ್ಷ ರೂ. ನಂತೆ ನಾಲ್ಕು ವಾಹನ ಖರೀದಿಸಲಾಗಿದೆ.

ವಾಟ್ಸಾಪ್ ಗ್ರೂಪ್: 'ಜನ–ವನ ಸೇತುವೆ' ವಾಹನ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಈ ವಾಹನಗಳು ಸಂಚರಿಸಲಿರುವ ಮಾರ್ಗದ ಗ್ರಾಮಗಳ ಗ್ರಾಮಸ್ಥರು, ಪ್ರಮುಖರ ಮೊಬೈಲ್ ನಂಬರ್ ಒಳಗೊಂಡಂತೆ ಪ್ರತ್ಯೇಕ ವಾಟ್ಸಾಪ್ ಗ್ರೂಪ್ ರಚಿಸಲಾಗುತ್ತದೆ. ಆ ಗ್ರೂಪ್‌ನಲ್ಲಿ ಡಿಸಿಎಫ್ ವಿ.ಏಡುಕೊಂಡಲು, ಆಯಾ ವ್ಯಾಪ್ತಿಯ ಎಸಿಎಫ್, ಆರ್‌ಎಫ್‌ಓ ಹಾಗೂ ವಾಹನ ಚಾಲಕರ ಮೊಬೈಲ್ ನಂಬರ್ ಆಡ್ ಮಾಡಲಾಗಿರುತ್ತದೆ. ದಿನದ 24 ಗಂಟೆಯೂ ತುರ್ತು ವಾಹನ ಸೇವೆ ಬೇಕಾದರೆ ವಾಟ್ಸಾಪ್‌ಗೆ ಸಂದೇಶ ಕಳುಹಿಸಬಹುದು. ಅಥವಾ ಕರೆ ಮಾಡಬಹುದಾಗಿದೆ. ಅಲ್ಲದೆ, 108 ಆಂಬುಲೆನ್ಸ್ ಚಾಲಕರಿಗೆ ಈ ವಾಹನಗಳ ಸಂಪರ್ಕದ ಮಾಹಿತಿ ನೀಡಲಾಗಿದ್ದು, ಜನರಿಗೆ ಅನುಕೂಲವಾಗಲಿದೆ.

ಡಿಸಿಯಿಂದ ಕೀ ಹಸ್ತಾಂತರ: 'ಜನ–ವನ ಸೇತುವೆ' ವಾಹನದ ಕೀಯನ್ನು ಶುಕ್ರವಾರ ಚಾಮರಾಜನಗರದ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಕೊಳ್ಳೇಗಾಲದ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಬಳಿ ಡಿಸಿಎಫ್ ವಿ.ಏಡುಕೊಂಡಲು ಅವರಿಗೆ ಹಸ್ತಾಂತರಿಸಿ, ಕಾಡೊಳಗಿನ ಜನರಿಗೆ ಉಪಯುಕ್ತ ಸೇವೆ ನೀಡುವಂತೆ ಸಲಹೆ ನೀಡಿದರು.

ಉಚಿತ ಸೇವೆಯೇ ನಮ್ಮ ಉದ್ದೇಶ: ಈ ಕುರಿತು ಮಲೆಮಹದೇಶ್ವರ ಬೆಟ್ಟ ವನ್ಯಧಾಮದ ಡಿಸಿಎಫ್ ವಿ.ಏಡುಕೊಂಡಲು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಕಾಡೊಳಗಿನ ಗ್ರಾಮಗಳ ಜನರಿಗೆ ವಾಹನ ಸೌಲಭ್ಯ ಇಲ್ಲದೆ ಪರಿತಪಿಸುತ್ತಿದ್ದಾರೆ. ಆ ಗ್ರಾಮಗಳ ಗರ್ಭಿಣಿಯರು, ಅನಾರೋಗ್ಯ ಪೀಡಿತರ ಆಸ್ಪತ್ರೆಗೆ ಕರೆದೊಯ್ಯಲು ವಾಹನ ಸೌಲಭ್ಯವಿಲ್ಲ. ಈ ಹಿನ್ನೆಲೆಯಲ್ಲಿ 'ಜನ–ವನ ಸೇತುವೆ' ವಾಹನ ಆಂಬುಲೆನ್ಸ್, ಪಡಿತರ ವಸ್ತು ಸಾಗಾಟಕ್ಕೆ, ಶಿಕ್ಷಕರು, ವಿದ್ಯಾರ್ಥಿಗಳಿಗೆ ತುರ್ತು ನೆರವಾಗಲು ಈ ಸೇವೆ ಆರಂಭಿಸಲಾಗಿದೆ. ಈ ವಾಹನದ ಮೂಲಕ ಉಚಿತ ಸೇವೆ ನೀಡಲಾಗುತ್ತದೆ ಎಂದರು.

ದೇಶದಲ್ಲೇ ಮೊದಲ ಬಾರಿಗೆ ಅರಣ್ಯ ಇಲಾಖೆ ವತಿಯಿಂದ ನಡೆಸುತ್ತಿರುವ ಸೇವಾ ವ್ಯವಸ್ಥೆಯಾಗಿದೆ. ಎಕೋ ಡೆವಲಪ್ ಕಮಿಟಿ(ಇಡಿಸಿ) ಮೂಲಕ ಇದನ್ನು ನಿರ್ವಹಣೆ ಮಾಡಲಾಗುತ್ತದೆ. ವಾಹನದಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಇರಲಿದೆ ಚಾಲಕರಿಗೆ ಪ್ರಥಮ ಚಿಕಿತ್ಸೆ ನೀಡುವ ಬಗ್ಗೆ ತರಬೇತಿ ನೀಡಲಾಗುತ್ತದೆ. ಒಂದು ರೂ ವೆಚ್ಚವಿಲ್ಲದೆ ಸಮೀಪದ ಆಸ್ಪತ್ರೆಗೆ ಸೇರಿಸುವುದು ಚಾಲಕರ ಕೆಲಸವಾಗಿರುತ್ತದೆ ಎಂದು ತಿಳಿಸಿದರು.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೆಣಸಿನಕಾಯಿ ಮೂಟೆ ತುಂಬಿದ್ದ ಲಾರಿ ಮಗುಚಿ ವ್ಯಕ್ತಿ ಸಾವು

ಬೆಟ್ಟದಪುರದಲ್ಲಿ ಧಾರುಣ ಘಟನೆ

ಬೆಟ್ಟದಪುರ, ಜೂ.17(ಶಿವದೇವ್)– ಮೆಣಸಿನಕಾಯಿ ಮೂಟೆ ತುಂಬಿದ್ದ ಲಾರಿ ಮಗುಚಿ ಬಿದ್ದ ಪರಿಣಾಮ ಮೊಬೈಲ್ ಅಂಗಡಿ ಮಾಲೀಕ ಸಾವನ್ನಪ್ಪಿರುವ ಘಟನೆ ಪಿರಿಯಾಪಟ್ಟಣ–ಹಾಸನ ರಾಜ್ಯ ಹೆದ್ದಾರಿಯಲ್ಲಿ ಬುಧವಾರ ರಾತ್ರಿ ಸಂಭವಿಸಿದೆ. ಬೆಟ್ಟದಪುರ ನಿವಾಸಿ ವಿನಯ್(32) ಎಂಬುವರೇ ಸಾವನ್ನಪ್ಪಿದವರು. ಪಿರಿಯಾಪಟ್ಟಣ–ಹಾಸನ ರಾಜ್ಯ ಹೆದ್ದಾರಿ ಹಾದು ಹೋಗುವ ಬೆಟ್ಟದಪುರ ಸರ್ಕಲ್‌ನಲ್ಲಿ ವಿನಯ್, ಮೊಬೈಲ್ ಅಂಗಡಿಯೊಂದನ್ನು ನಡೆಸುತ್ತಿದ್ದರು. ಬುಧವಾರ ರಾತ್ರಿ 8.30ರಲ್ಲಿ ವ್ಯಾಪಾರ ಮುಗಿಸಿ ಮೊಬೈಲ್ ಅಂಗಡಿಯನ್ನು ಮುಚ್ಚಿ ಮನೆಗೆ ಹೋಗಲು ಮುಂದಾಗಿದ್ದಾರೆ. ಈ ವೇಳೆ ವೇಗವಾಗಿ ಬರುತ್ತಿದ್ದ ಲಾರಿಯನ್ನು ಕಂಡು ಅಂಗಡಿ ಮುಂದೆ ಸ್ವಲ್ಪ ದೂರದಲ್ಲಿ ನಿಂತುಕೊಂಡಿದ್ದಾರೆ. ಇದ್ದಕ್ಕಿದ್ದಂತೆ ಮೆಣಸಿನಕಾಯಿ ತುಂಬಿದ್ದ ಚೀಲ ಗಳು ವಿನಯ್ ಮೇಲೆ ಬೀಳಲಾರಂಭಿಸಿದ್ದರಿಂದ ಅವರು ಕೆಳಗೆ ಬಿದ್ದರು.



ಈ ವೇಳೆ ಮತ್ತಷ್ಟು ಮೂಟೆಗಳು ಮತ್ತು ಲಾರಿ ವಿನಯ್ ಮೇಲೆ ಬಿದ್ದ ಪರಿಣಾಮ ಅವರು ತೀವ್ರವಾಗಿ ಗಾಯಗೊಂಡರು. ತಕ್ಷಣ ಸಾರ್ವಜನಿಕರು ವಿನಯ್‌ನನ್ನು ರಕ್ಷಿಸಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಅಸುನೀಗಿದರು.

ಮೆಣಸಿನಕಾಯಿ ತುಂಬಿದ್ದ ಮೂಟೆಗಳನ್ನು ಸರಿಯಾಗಿ ಕಟ್ಟದಿದ್ದ ಪರಿಣಾಮ ಮೂಟೆ ಗಳು ಕೆಳಕ್ಕೆ ಬೀಳಲಾರಂಭಿಸಿದಾಗ ಚಾಲಕನ ನಿಯಂತ್ರಣಕ್ಕೆ ಸಿಗದೆ ಲಾರಿಯೂ ಮಗುಚಿ ಬಿದ್ದಿರಬಹುದು ಎಂದು ಮೂಲಗಳು ತಿಳಿಸಿವೆ. ನಾಲ್ಕು ವರ್ಷದ ಹಿಂದೆ ವಿವಾಹವಾಗಿದ್ದ ವಿನಯ್‌ಗೆ ಎರಡೂವರೆ ವರ್ಷದ ಮಗಳಿದ್ದಾಳೆ. ವಿನಯ್ ವೀರಗಾಸೆ ಕುಣಿತದ ಪ್ರಖ್ಯಾತರಾಗಿದ್ದು, ರಾಷ್ಟ್ರ ಮಟ್ಟದ ಪ್ರಶಸ್ತಿ ಪಡೆದುಕೊಂಡಿದ್ದರಲ್ಲದೆ, ದೆಹಲಿ ಸೇರಿದಂತೆ ಹಲವಾರು ರಾಜ್ಯ ಮತ್ತು ಜಿಲ್ಲೆಗಳಲ್ಲಿ ವೀರಗಾಸೆ ಕುಣಿತದಲ್ಲಿ ಭಾಗವಹಿಸಿ ಹೆಸರು ಮಾಡಿದ್ದರು.

ಮರಣೋತ್ತರ ಪರೀಕ್ಷೆ ನಂತರ ಮೃತ ದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಯಿತು. ಶುಕ್ರವಾರ ಸಂಜೆ ಅವರ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಬೆಟ್ಟದಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸಂತಾಪ: ವಿನಯ್ ನಿಧನಕ್ಕೆ ಬೆಟ್ಟದ ಪುರದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಬಸವ ಜ್ಯೋತಿ ಮಠದ ದಿಂಡಗಾಡ ಶ್ರೀ ಅಪ್ಪಾಜಿ ಸ್ವಾಮಿಗಳು, ಶಾಸಕ ಕೆ.ಮಹದೇವ್, ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ, ಜೆಡಿಎಸ್ ಮುಖಂಡ ಗಗನ್, ಗ್ರಾಪಂ ಅಧ್ಯಕ್ಷರು, ಸದಸ್ಯರುಗಳು ಮತ್ತು ಗ್ರಾಮಸ್ಥರು ಸಂತಾಪ ಸೂಚಿಸಿದ್ದಾರೆ.



ಈಜಲು ಹೋದ ಇಬ್ಬರು ವಿದ್ಯಾರ್ಥಿಗಳು ಜಲಸಮಾಧಿ

ಹನಗೋಡು ಬಳಿ ಈಜಲು ಹೋದಾಗ ದುರಂತ

ಹನಗೋಡು, ಜೂ.17(ಮಹೇಶ್,ಕೆಕೆ)– ಈಜಲು ಹೋದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಬ್ಬರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಹುಣಸೂರು ತಾಲೂಕಿನ ಹನಗೋಡು ಬಳಿಯ ಹೆಗ್ಗಂದೂರು ಗ್ರಾಮದಲ್ಲಿ ಸಂಭವಿಸಿದೆ. ಹೆಗ್ಗಂದೂರು ಗ್ರಾಮದ ವಾಸಿ ರಮೇಶ್‌ರಾವ್ ಅವರ ಪುತ್ರ ಶರತ್ (17) ಮತ್ತು ಪುಟ್ಟೇಗೌಡರ ಮಗ ಶಿವಕುಮಾರ್ (17) ಜಲಸಮಾಧಿಯಾದವರು. ದ್ವಿತೀಯ ಪಿಯುಸಿ ಫಲಿತಾಂಶಕ್ಕಾಗಿ ಕಾಯುತ್ತಿದ್ದ ಈ ಯುವಕರಿಬ್ಬರು ಶುಕ್ರವಾರ ಮಧ್ಯಾಹ್ನ ಗ್ರಾಮದಲ್ಲಿ ಹರಿಯುತ್ತಿರುವ ಲಕ್ಷ್ಮಣತೀರ್ಥ ನದಿಯಲ್ಲಿ ಈಜಲು ತೆರಳಿದ್ದಾರೆ. ನೀರಿನಲ್ಲಿ



ಈಜುತ್ತಿದ್ದಾಗ ನೀರಿನ ಸೆಳೆತ ಹೆಚ್ಚಾಗಿ ಅದರಿಂದ ಹೊರಬರಲಾಗದೆ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಶರತ್ ಮತ್ತು ಶಿವಕುಮಾರ್ ಹನಗೋಡು ಪದವಿಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದು, ನಾಳೆ (ಶನಿವಾರ) ಪ್ರಕಟವಾಗುವ ಫಲಿತಾಂಶಕ್ಕಾಗಿ ಕಾಯುತ್ತಿದ್ದರು. ರಿಸಲ್ಟ್ ಬರುವ ಮುಂಚೆಯೇ ಹೋಗಿ ಬಿಟ್ರಲ್ಲೋ ಎಂದು ಕುಟುಂಬಸ್ಥರು ಗೋಳಾಡುತ್ತಿದ್ದರು.

ವಿಷಯ ತಿಳಿದ ಹುಣಸೂರು ಗ್ರಾಮಾಂತರ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ, ಸತತ ಕಾರ್ಯಾಚರಣೆ ನಡೆಸಿ ಶಿವಕುಮಾರ್‌ನ ಮೃತದೇಹವನ್ನು ಹೊರತೆಗೆದರು. ಅಷ್ಟರಲ್ಲಿ ಕತ್ತಲಾಗಿದ್ದರಿಂದ ಕಾರ್ಯಾಚರಣೆ ಸ್ಥಗಿತಗೊಳಿಸಲಾಯಿತು. ನಾಳೆ (ಜೂ.18) ಮತ್ತೆ ಕಾರ್ಯಾಚರಣೆ ನಡೆಸಿ ಮತ್ತೊಂದು ಮೃತ ದೇಹವನ್ನು ಹೊರತೆಗೆಯಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ

ಮನೆ ಬೀಗ ಮುರಿದು 2.25 ಲಕ್ಷದ ಚಿನ್ನಾಭರಣ ಕಳವು

ಬೆಟ್ಟದಪುರ, ಜೂ.17–ಮನೆ ಬೀಗ ಮುರಿದು ಚಿನ್ನಾಭರಣ ಕಳವು ಮಾಡಿರುವ ಘಟನೆ ಪಿರಿಯಾಪಟ್ಟಣ ತಾಲೂಕು ಚಿಕ್ಕನೇರಳೆ ಸಂತೇಮಾಳ ಗ್ರಾಮದಿಂದ ವರದಿಯಾಗಿದೆ. ಗ್ರಾಮದ ಮುಜೀಬ್ ಖಾನ್ ಅವರ ತಾಯಿ ಅನಾರೋಗ್ಯದಿಂದ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರಿಂದ ಅವರ ಆರೈಕೆಗಾಗಿ ಪತ್ನಿ ಸೆಮೀನ ಜೊತೆ ಜೂ.10ರಂದು ಮೈಸೂರಿಗೆ ತೆರಳಿದ್ದಾರೆ. ಜೂ.15ರಂದು ಮುಜೀಬ್ ಖಾನ್ ಅವರ ಸಹೋದರ ಮುಜಾಮಿಲ್ ಅವರು ನೀಡಿದ ಮಾಹಿತಿ ಮೇರೆಗೆ ಮನೆಗೆ ಬಂದು ನೋಡಿದಾಗ ಮನೆಯ ಹಿಂಬಾಗಿಲು ಮುರಿದಿರುವ ಖದೀಮರು 19 ಗ್ರಾಂನ ಚಿನ್ನದ ನೆಕ್ಲೇಸ್, 9 ಗ್ರಾಂನ ನೆಕ್ಲೇಸ್, 8 ಗ್ರಾಂನ ಉಂಗುರ ಸಹಿತ ಕೈ–ಚೈನು, 12 ಗ್ರಾಂನ ಓಲೆ ಮತ್ತು ಮಾಟಿ, 8 ಗ್ರಾಂನ ಚಿನ್ನದ ಬಳೆ, ಬೆಳ್ಳಿ ಕಾಲ್ ಚೈನು, 15 ಸಾವಿರ ರೂ. ನಗದು ಸೇರಿ 2.25 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಮುಜೀಬ್ ಖಾನ್ ಪತ್ನಿ ಶ್ರೀಮತಿ ಸೆಮೀನ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಬೆಟ್ಟದಪುರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಆನ್‌ಲೈನ್ ಶಾಪಿಂಗ್ ಆ್ಯಪ್ ಮೂಲಕವೂ ವಂಚನೆ

ಮಾಹಿತಿ ನೀಡುವ ನೆಪದಲ್ಲಿ ಸುಲಿಗೆ

ಮೈಸೂರು, ಜೂ.17–ಎಟಿಎಂ ಕಾರ್ಡ್ ವಿವರ ಪಡೆದು ಬ್ಯಾಂಕ್ ಅಕೌಂಟ್‌ನಿಂದ ಹಣ ದೋಚುತ್ತಿದ್ದ ಆನ್‌ಲೈನ್ ಖದೀಮರು ಇದೀಗ ಆನ್‌ಲೈನ್ ಶಾಪಿಂಗ್ ಆ್ಯಪ್‌ಗಳ ಮೂಲಕ ಹಣ ದೋಚುವ ಹೊಸ ದಾರಿ ಅನುಸರಿಸುತ್ತಿದ್ದಾರೆ. ಮೈಸೂರಿನ ಸಿದ್ಧಾರ್ಥನಗರ ನಿವಾಸಿ ಎಂ.ಕೆ.ಮಂಜುನಾಥ್(40) ಎಂಬುವರು ಫ್ಯಾಬ್–ಸೀ ಎಂಬ ಶಾಪಿಂಗ್ ಆ್ಯಪ್‌ನಲ್ಲಿ ಚೇರ್ ಖರೀದಿಸಿದ್ದಾರೆ.



ನಾಲ್ಕೈದು ದಿನಗಳಾದರೂ, ಚೇರ್ ಡೆಲಿವರಿ ಆಗದ ಕಾರಣ ಅವರು ಗೂಗಲ್‌ನಲ್ಲಿ ಸದರಿ ಆ್ಯಪ್‌ನ ಮೊಬೈಲ್ ಸಂಖ್ಯೆಗಳನ್ನು ಪಡೆದು ಸಂಪರ್ಕಿಸಿದ್ದಾರೆ. ಚೇರ್‌ಗಾಗಿ ಆನ್‌ಲೈನ್ ಮೂಲಕ ಪಾವತಿಸಿದ್ದ ಹಣವನ್ನು ಅವರಿಗೆ ಹಿಂತಿರುಗಿಸುವುದಾಗಿ ತಿಳಿಸಿದ ವಂಚಕರು, ಲಿಂಕ್‌ವೊಂದನ್ನು ಕಳುಹಿಸಿದ್ದಾರೆ. ಅದರಂತೆ ಲಿಂಕ್‌ಗೆ ಕ್ಲಿಕ್ ಮಾಡಿ ಯುಪಿಐ ನಂಬರ್ ನಮೂದಿಸಿದಾಗ ಅವರ ಬ್ಯಾಂಕ್ ಖಾತೆಯಿಂದ 91,966 ರೂ. ಕಡಿತಗೊಂಡಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಸತ್ತ ರೈತನ ಹೆಸರಲ್ಲಿ ಸಾಲ ಮಂಜೂರು ಮಾಡಿ ಹಣ ದುರುಪಯೋಗ

ಕೃಷಿ ಪತ್ತಿನ ಸಹಕಾರ ಸಂಘದ ಪದಾಧಿಕಾರಿಗಳ ವಿರುದ್ಧ ಪ್ರಕರಣ ದಾಖಲು

ಬೀಚನಹಳ್ಳಿ, ಜೂ.17–ಮೃತಪಟ್ಟಿರುವ ರೈತನ ಹೆಸರಿನಲ್ಲಿ ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ ಸಾಲ ಮಂಜೂರು ಮಾಡಿ, ಹಣ ಡ್ರಾ ಮಾಡಿಕೊಂಡಿರುವ ಬಗ್ಗೆ ಬೀಚನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವರ: ಹೆಚ್.ಡಿ.ಕೋಟೆ ತಾಲೂಕು ಎನ್.ಬೇಗೂರು ಗ್ರಾಮದ ರೈತ ಕೃಷ್ಣಶೆಟ್ಟಿ ಎಂಬುವರು 2017ರ ಸೆ.8ರಂದು ನಿಧನ ಹೊಂದಿದ್ದಾರೆ. ಅವರ ಹೆಸರಿನಲ್ಲಿ ಎನ್.ಬೇಗೂರು ಸರ್ವೆ ನಂ.45ರಲ್ಲಿರುವ 3 ಎಕರೆ ಜಮೀನಿನ ಮೇಲೆ ಎನ್.ಬೇಗೂರು ಕೃಷಿ ಪತ್ತಿನ ಸಹಕಾರ ಸಂಘದ ಹಿಂದಿನ ಅಧ್ಯಕ್ಷ ಈಶ್ವರ, ಕಾರ್ಯದರ್ಶಿ ಪ್ರೇಂಕುಮಾರ್, ಹೆಚ್.ಡಿ.ಕೋಟೆ ಎಂಸಿಡಿಸಿಸಿ ಬ್ಯಾಂಕ್ ಸೂಪರ್‌ವೈಸರ್ ಸೋಮಶೇಖರ್, ಕ್ಯಾಷಿಯರ್, ವ್ಯವಸ್ಥಾಪಕರು ಸೇರಿ ಹೆಚ್.ಡಿ.ಕೋಟೆ ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ ಮೃತ ಕೃಷ್ಣಶೆಟ್ಟಿ ಹೆಸರಿನಲ್ಲಿ 2020ರ ಸೆ.1ರಂದು 90 ಸಾವಿರ ರೂ. ಸಾಲ ಮಂಜೂರು ಮಾಡಿಕೊಂಡು ಅದನ್ನು ಡ್ರಾ ಮಾಡಿಕೊಂಡಿದ್ದಾರೆ ಎಂದು ಮೃತ ಕೃಷ್ಣಶೆಟ್ಟಿ ಪತ್ನಿ ಶಾಂತಮ್ಮ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಬೀಚನಹಳ್ಳಿ ಪೊಲೀಸರು 5 ಮಂದಿ ವಿರುದ್ಧ ಭಾರತೀಯ ದಂಡ ಸಂಹಿತೆ 406, 408, 468, 471, 420, 120–ಬಿ, 34ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಹೊಸ ಮನೆಯ ನಲ್ಲಿಗಳೇ ಕಳವು

ಮೈಸೂರು, ಜೂ.17–ಮನೆಯ ಬೀಗ ಮುರಿದು ನಲ್ಲಿಗಳನ್ನು ಕಳವು ಮಾಡಿರುವ ಬಗ್ಗೆ ವರದಿಯಾಗಿದೆ. ಕೊಳ್ಳೇಗಾಲದಲ್ಲಿ ಪ್ರಾಂಶುಪಾಲರಾಗಿರುವ ಆರ್.ನಂಜುಂಡಯ್ಯ ಅವರು, ಮೈಸೂರಿನ ಲಾಲ್‌ಬಹದ್ದೂರ್‌ಶಾಸ್ತ್ರಿ ನಗರದಲ್ಲಿ ಮನೆವೊಂದನ್ನು ಖರೀದಿಸಿ ಗೃಹ ಪ್ರವೇಶಕ್ಕೆ ತಯಾರಿ ಮಾಡಿಕೊಂಡಿದ್ದರು. ಕೊಳ್ಳೇಗಾಲದಲ್ಲಿ ವಾಸವಾಗಿರುವ ಅವರು ಮನೆ ನೋಡಿಕೊಳ್ಳಲು ರಂಗಸ್ವಾಮಿ ಎಂಬುವರನ್ನು ನೇಮಕ ಮಾಡಿದ್ದರು. ಜೂ.14ರಂದು ರಾತ್ರಿ ಮನೆ ಬೀಗ ಹಾಕಿಕೊಂಡು ಹೋಗಿದ್ದ ರಂಗಸ್ವಾಮಿ, ಮರುದಿನ ಬೆಳಗ್ಗೆ ಬಂದು ನೋಡಿದಾಗ ಮನೆಯ ಬೀಗ ಮುರಿದು, ಹೊಸದಾಗಿ ಅಳವಡಿಸಿದ್ದ 11 ನಲ್ಲಿಗಳನ್ನು ಕಳವು ಮಾಡಿರುವುದು ಕಂಡು ಬಂದಿದೆ. ಈ ಸಂಬಂಧ ನಂಜುಂಡಯ್ಯ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಆಲನಹಳ್ಳಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಸೌದೆ ತರಲು ಹೋದ ವೃದ್ಧೆ ನಾಪತ್ತೆ

ಮೈಸೂರು, ಜೂ.17–ಮನೆಗೆ ಪುರಲೆ ಸೌದೆಯನ್ನು ತರಲು ಹೋದ 75 ವರ್ಷದ ವೃದ್ಧೆಯೊಬ್ಬರು ಕಾಣೆಯಾಗಿರುವ ಸಂಬಂಧ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿನಾಯಕ ನಗರದ ನಿವಾಸಿ ಶ್ರೀಮತಿ ಕೆಂಪಮ್ಮ (75) ಅವರು ಜೂ.10ರಿಂದ ನಾಪತ್ತೆಯಾಗಿದ್ದಾರೆ ಎಂದು ಅವರ ಸೊಸೆ ಶ್ರೀಮತಿ ಭಾಗ್ಯ ದೂರು ನೀಡಿದ್ದಾರೆ. ಕೆಂಪಮ್ಮನವರು ಪುರಲೆ ಸೌದೆಯನ್ನು ತರುವುದಾಗಿ ಹೇಳಿ ಶುಕ್ರವಾರ (ಜೂ.10) ಮನೆಯಿಂದ ಗಂಗೋತ್ರಿ ಕಡೆ ಹೋದವರು ಇದುವರೆವಿಗೂ ಮನೆಗೆ ಬಂದಿಲ್ಲ. ಅವರನ್ನು ಹುಡುಕಿಕೊಡಿ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಭಾಗ್ಯ ಕೋರಿದ್ದಾರೆ.

ಇವರ ಬಗ್ಗೆ ಮಾಹಿತಿ ಸಿಕ್ಕವರು ದೂ: 0821–2418316, 2418339 ಮೂಲಕ ಸಂಪರ್ಕಿಸಲು ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಆರ್.ಪ್ರಭುರಾಜ್ ಅವರು ಪತ್ರಿಕಾ ಹೇಳಿಕೆಯಲ್ಲಿ ಮನವಿ ಮಾಡಿದ್ದಾರೆ.

ಖಾಸಗಿ ಕಂಪನಿಯ ಇಪಿಎಫ್ ಅಕೌಂಟ್ ಹ್ಯಾಕ್

- ಕಾರ್ಮಿಕರಿಗೆ ಲಕ್ಷಾಂತರ ನಷ್ಟ
- ಸೆನ್ ಪೊಲೀಸ್ ಠಾಣೆಗೆ ದೂರು

ಮೈಸೂರು, ಜೂ.17–ಖಾಸಗಿ ಕಂಪನಿಯೊಂದರ ಇಪಿಎಫ್ ಅಕೌಂಟ್ ಹ್ಯಾಕ್ ಮಾಡಿ ಕಾರ್ಮಿಕರು ಕೆಲಸದಿಂದ ನಿರ್ಗಮನವಾದಂತೆ ದಾಖಲೆ ತಿರುಚಿರುವ ಬಗ್ಗೆ ವರದಿಯಾಗಿದೆ.

ಈ ಸಂಬಂಧ ಮೈಸೂರಿನ ಗೋಕುಲಂ ನಿವಾಸಿ, ಖಾಸಗಿ ಕಂಪನಿ ಉದ್ಯೋಗಿ ಸಿ.ಜಿ.ಹರ್ಷ ಎಂಬುವರು ಸೆನ್ ಠಾಣೆಗೆ ದೂರು ಸಲ್ಲಿಸಿದ್ದು, ಕಂಪನಿಯ ಇಪಿಎಫ್ ಅಕೌಂಟ್ ಅನ್ನು ಹ್ಯಾಕ್ ಮಾಡಿರುವ ದುಷ್ಕರ್ಮಿಗಳು, 151 ಕಾರ್ಮಿಕರು ಕೆಲಸದಿಂದ ನಿರ್ಗಮನವಾದಂತೆ ನಮೂದಿಸಿದ್ದಾರೆ. ಇದರಿಂದ ಎಲ್ಲಾ ಕಾರ್ಮಿಕರಿಗೂ ಸೇರಿ ಆತ್ಮನಿರ್ಭರ್ ಭಾರತ್ ರೋಜ್ಗಾರ್ ಯೋಜನೆಯ ಸೌಲಭ್ಯ ಪ್ರತೀ ತಿಂಗಳು 3.50 ಲಕ್ಷ ರೂ. ನಷ್ಟವಾಗುತ್ತಿದ್ದು, ಅಕೌಂಟ್ ಹ್ಯಾಕ್ ಮಾಡಿದವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಕೋರಿದ್ದಾರೆ.

ಉಸಿರಾಟ ಸಂಬಂಧಿ ಸೋಂಕು

ಸೋನಿಯಾ ಗಾಂಧಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ

ನವದೆಹಲಿ, ಜೂ.17– ಕೋವಿಡ್–19 ಸೋಂಕಿನಿಂದ ದೆಹಲಿಯ ಗಂಗಾರಾವ್ ಆಸ್ಪತ್ರೆಗೆ ದಾಖಲಾಗಿರುವ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಲ್ಲಿ ಉಸಿರಾಟ ಸಂಬಂಧಿ ಸೋಂಕು ಕಾಣಿಸಿಕೊಂಡಿದ್ದು,ವೈದ್ಯರು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿಸಿದ್ದಾರೆ.



ಕೋವಿಡ್ ಸೋಂಕಿನ ನಂತರ ಮೂಗಿನಲ್ಲಿ ರಕ್ತಸ್ರಾವವಾದ ಹಿನ್ನೆಲೆಯಲ್ಲಿ ಸೋನಿಯಾ ಗಾಂಧಿಯವರು ಜೂನ್ 12ರಂದು ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾದರು ಎಂದು ಕಾಂಗ್ರೆಸ್‌ನ ಮುಖ್ಯ ವಕ್ತಾರ ಜೈರಾಂ ರಮೇಶ್ ತಿಳಿಸಿದ್ದಾರೆ.


ಕೂಡಲೇ ಅವರನ್ನು ಚಿಕಿತ್ಸೆಗೆ ಒಳಪಡಿಸಲಾಯಿತು. ನಿನ್ನೆ ಬೆಳಿಗ್ಗೆ ಸೋಂಕು ಸಂಬಂಧಿತ ಫಾಲೋ ಅಪ್ ತಪಾಸಣೆಯನ್ನು ವೈದ್ಯರು ನಡೆಸಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದಾಖಲಾತಿ ಸಂದರ್ಭದಲ್ಲಿ ಅವರಲ್ಲಿ ಲೋವರ್ ರೆಸ್ಪಿರೇಟರಿ ಟ್ರ್ಯಾಕ್ಟ್‌ನಲ್ಲಿ ಶಿಲೀಂದ್ರ ಸೋಂಕು (ಶ್ವಾಸಕೋಶ ಸೋಂಕು) ಕೂಡ ಪತ್ತೆಯಾಗಿದೆ. ಅವರಿಗೆ ಪ್ರಸ್ತುತ ಇತರೆ ಕೋವಿಡ್ ನಂತರದ ಲಕ್ಷಣಗಳ ಜತೆಗೆ ಈ ಸಮಸ್ಯೆಗೂ ಕೂಡ ಚಿಕಿತ್ಸೆ ನೀಡಲಾಗುತ್ತಿದೆ. ತೀವ್ರ ನಿಗಾದಲ್ಲಿದ್ದು, ಚಿಕಿತ್ಸೆ ಮುಂದುವರಿದಿದೆ ಎಂದು ಪಕ್ಷದ ಹೇಳಿಕೆ ತಿಳಿಸಿದೆ.

ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜೂನ್ 23ರಂದು ಜಾರಿ ನಿರ್ದೇಶನಾಲಯವು ಸೋನಿಯಾ ಗಾಂಧಿ ಅವರಿಗೆ ವಿಚಾರಣೆಗೆ ಹಾಜರಾಗಲು ಸಮನ್ಸ್ ನೀಡಿದೆ. ಅವರ ಪುತ್ರ ರಾಹುಲ್ ಗಾಂಧಿ ಅವರನ್ನು ಈಗಾಗಲೇ ತನಿಖಾ ಸಂಸ್ಥೆ ವಿಚಾರಣೆ ನಡೆಸುತ್ತಿದೆ.

ಪ್ರಧಾನಿ ಆಗಮನ: ವಾಹನ ನಿಲುಗಡೆ ನಿಷೇಧ

ಮೈಸೂರು, ಜೂ.17(ಆರ್‌ಕೆ)–ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೈಸೂರಿಗೆ ಭೇಟಿ ನೀಡುತ್ತಿರುವುದರಿಂದ ಅವರು ಸಂಚರಿಸುವ ಮಾರ್ಗಗಳಲ್ಲಿ ಜೂನ್ 20 ಮತ್ತು 21ರಂದು ವಾಹನ ನಿಲುಗಡೆಯನ್ನು ನಿಷೇಧಿಸಲಾಗಿದೆ.



ಈ ಬಗ್ಗೆ ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರು ಆದೇಶ ಹೊರಡಿಸಿದ್ದು, ಎಂ.ಎನ್.ಜೋಯಿಸ್ ವೃತ್ತದಿಂದ ರಾಮಸ್ವಾಮಿ ಸರ್ಕಲ್, ತಾತಯ್ಯ ಸರ್ಕಲ್, ಬಸವೇಶ್ವರ ವೃತ್ತ, ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ನಂಜನಗೂಡು ರಸ್ತೆ, ರಾಜಹಂಸ ವೃತ್ತದವರೆಗಿನ ಮಾರ್ಗದ ಎರಡೂ ಬದಿಗಳಲ್ಲಿ ವಾಹನ ನಿಲುಗಡೆಯನ್ನು ನಿಷೇಧಿಸಲಾಗಿದೆ ಎಂದು ತಿಳಿಸಿದ್ದಾರೆ.



ಒಂದನೇ ಪುಟದಿಂದ

ಅಧಿಕಾರಿಗಳ 80 ಸ್ಥಳಗಳಲ್ಲಿ ಎಸಿಬಿ ದಾಳಿ

ಬೀದರ್‌ನ ಜಿಲ್ಲಾ ಯೋಜನಾಕಾರಿ ತಿಪ್ಪಣ್ಣ ಪಿ.ಸಿರಸಂಗಿ, ಬೀದರ್ ಪಶು ವಿಶ್ವವಿದ್ಯಾಲಯದ ಸಹಾಯಕ ನಿಯಂತ್ರಕ ಮೃತ್ಯುಂಜಯ ಚನ್ನಬಸಯ್ಯ ತಿರಣಿ, ಚಿಕ್ಕಬಳ್ಳಾಪುರ ನೀರಾವರಿ ಇಲಾಖೆಯ ಇಇ ಮೋಹನ್‌ಕುಮಾರ್, ಕಾರವಾರದ ಜಿಲ್ಲಾ ರಿಜಿಸ್ಟ್ರಾರ್ ಶ್ರೀಧರ್, ಲೋಕೋಪಯೋಗಿ ಇಲಾಖೆಯ ನಿವೃತ್ತ ಕಾರ್ಯಪಾಲಕ ಅಭಿಯಂತರ ಮಂಜುನಾಥ್ ಜಿ., ಬಿಡಿಎನಲ್ಲಿ ಗ್ರೂಪ್ 'ಸಿ' ಸಿಬ್ಬಂದಿ ಶಿವಲಿಂಗಯ್ಯ, ಕೊಪ್ಪಳ ಪೊಲೀಸ್ ಇನ್ಸ್‌ಪೆಕ್ಟರ್ ಉದಯರವಿ, ಕಡೂರು ಪುರಸಭೆಯ ಕೇಸ್ ವರ್ಕರ್ ಬಿ.ಜಿ.ತಿಮ್ಮಯ್ಯ, ರಾಣೆಬೆನ್ನೂರು ಯುಟಿಪಿ ಕಚೇರಿಯ ಚಂದ್ರಪ್ಪ ಸಿ.ಓಲೇಕಾರ್ ಹಾಗೂ ಬೆಂಗಳೂರಿನ ನಿವೃತ್ತ ಭೂಸ್ವಾಧೀನಾಧಿಕಾರಿ ಜನಾರ್ದನ್ ಎಸಿಬಿ ಬಲೆಗೆ ಬಿದ್ದವರು.

ರಾಜಧಾನಿಯ ಬಿಟಿಎಂ ಬಡಾವಣೆಯ ಎಲ್‌ಬಿಎಸ್ ನಗರ ನಿವಾಸಿ ಉಪಮುಖ್ಯ ವಿದ್ಯುತ್ ಇನ್ಸ್‌ಪೆಕ್ಟರ್ ಸಿದ್ದಪ್ಪ ನಿವಾಸದ ಮೇಲೆ ದಾಳಿ ನಡೆಸಿದಾಗ ಕಂತೆ ಕಂತೆ ನೋಟುಗಳು, ಕೆ.ಜಿ.ಗಟ್ಟಲೆ ಚಿನ್ನಾಭರಣ ಮತ್ತಿತರ ಆಸ್ತಿ ದಾಖಲೆ ಪತ್ರಗಳು ಪತ್ತೆಯಾಗಿವೆ.

ಶಿವಮೊಗ್ಗದಲ್ಲಿ 4 ಹಾಗೂ ಹೊನ್ನಾಳಿಯಲ್ಲಿ 3 ನಿವೇಶನಗಳನ್ನು ಹೊಂದಿರುವ ಪತ್ರಗಳು, 2 ಮನೆ, ಹುಟ್ಟೂರಿನಲ್ಲಿ 8 ಎಕರೆ ತೋಟ, ತಾವರೆ ಚಕ್ಕನಹಳ್ಳಿಯಲ್ಲಿ 1.7 ಎಕರೆ ಭೂಮಿ, 7 ಲಕ್ಷ ನಗದು, 1 ಕೆ.ಜಿ.ಗೂ ಹೆಚ್ಚು ಚಿನ್ನಾಭರಣ ಹಾಗೂ ಐಷಾರಾಮಿ ಕಾರು ಹೊಂದಿರುವುದು ಬೆಳಕಿಗೆ ಬಂದಿದೆ. ಬಿಡಿಎನಲ್ಲಿ ಮಾಲಿ ಕೆಲಸ ಮಾಡುವ ಶಿವಲಿಂಗಯ್ಯ ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಮೂರು ಭವ್ಯ ಬಂಗಲೆಗಳನ್ನು ಹೊಂದಿರುವುದು ಹಲವರ ಅಚ್ಚರಿಗೆ ಕಾರಣವಾಗಿದೆ. ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯಪಾಲಕ ಅಭಿಯಂತರರಾಗಿ ಸೇವೆಯಿಂದ ನಿವೃತ್ತರಾಗಿರುವ ಮಂಜುನಾಥ್, ಭೂಮಾಪನ ಇಲಾಖೆಯ ನಿವೃತ್ತ ಅಧಿಕಾರಿ ಜನಾರ್ಧನ್ ನಿವಾಸಗಳ ಮೇಲೂ ಎಸಿಬಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಮಂಜುನಾಥ್ ಅವರ ಬಸವೇಶ್ವರನಗರದಲ್ಲಿರುವ ಶಾರದಾ ಕಾಲೋನಿಯಲ್ಲಿರುವ ನಿವಾಸದ ಮೇಲೆ ದಾಳಿ ನಡೆಸಿ ಜಯನಗರ 9ನೆ ಬ್ಲಾಕ್‌ನ ಚೈತನ್ಯ ಗೋಲ್ಡ್ ಕಾಂಪ್ಲೆಕ್ಸ್ ಹಾಗೂ ಮಗಳ ಹೆಸರಿನಲ್ಲಿರುವ ಕೆ.ಆರ್.ಪುರಂನ ಅಪಾರ್ಟ್‌ಮೆಂಟ್, ತಾವರೆಕೆರೆಯಲ್ಲಿ ತಾಯಿ ಹೆಸರಿನಲ್ಲಿರುವ 4 ಎಕರೆ ಜಮೀನು ಮತ್ತಿತರ ಆಸ್ತಿ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಜನಾರ್ಧನ್ ಅಕ್ರಮವಾಗಿ ಸಂಪಾದಿಸಿದ್ದ ಭಾರೀ ಆಸ್ತಿಯನ್ನು ಎಸಿಬಿ ಅಧಿಕಾರಿಗಳು ಬಯಲಿಗೆಳೆದಿದ್ದಾರೆ. ಕಾರವಾರದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಉಪನೋಂದಣಾಕಾರಿಯಾಗಿರುವ ಶ್ರೀಧರ್ ಅವರ ಕನಕಪುರ ಸಮೀಪದ ಅಗರದಲ್ಲಿರುವ ತೋಟದ ಮನೆ ಹಾಗೂ ಮತ್ತಿತರ ಕಡೆಗಳಲ್ಲೂ ದಾಳಿ ನಡೆದಿದೆ.

ಕೋಲಾರ ಎಸಿಬಿಯ 8 ಅಧಿಕಾರಿಗಳ ತಂಡ ಏಕಕಾಲಕ್ಕೆ ದಾಳಿ ನಡೆಸಿ ಮಡಿಕೇರಿ, ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್, ಕೋಲಾರ, ಕನಕಪುರ ಸೇರಿದಂತೆ ವಿವಿಧ ಕಡೆಗಳಲ್ಲಿ ಅಕ್ರಮವಾಗಿ ಸಂಪಾದಿಸಿರುವ ಕೋಟಿ ಕೋಟಿ ಮೌಲ್ಯದ ಸಂಪತ್ತನ್ನು ಪತ್ತೆ ಹಚ್ಚಿದೆ.

ಹಾಸನದ ಸಣ್ಣ ನೀರಾವರಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿರುವ ರಾಮಕೃಷ್ಣ ಅವರ ಮನೆ ಮೇಲೆ ಎಸಿಬಿ ಡಿವೈಎಸ್‌ಪಿ ಸತೀಶ್ ನೇತೃತ್ವದ ತಂಡ ದಿಢೀರ್ ದಾಳಿ ನಡೆಸಿ ಭಾರೀ ಪ್ರಮಾಣದ ಅಕ್ರಮ ಸಂಪತ್ತು ಪತ್ತೆ ಹಚ್ಚಿದೆ. ಹಾಸನದ ವಿದ್ಯಾನಗರದಲ್ಲಿರುವ ರಾಮಕೃಷ್ಣ ಅವರ ನಿವಾಸ, ಹಿರಿಸಾವೆಯಲ್ಲಿರುವ ಮತ್ತೊಂದು ಮನೆ ಹಾಗೂ ಕುವೆಂಪು ನಗರದಲ್ಲಿರುವ ಕಚೇರಿಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಸಿ ದಾಖಲೆ ಪರಿಶೀಲನೆ ನಡೆಸಲಾಗಿದೆ. ಗುತ್ತಿದೆ. ಪರಿಶೀಲನೆ ಸಂದರ್ಭದಲ್ಲಿ ರಾಮಕೃಷ್ಣ ಅವರು ಆದಾಯ ಮೂಲಕ್ಕಿಂತ ಮೂರು ಪಟ್ಟು ಹೆಚ್ಚು ಅಕ್ರಮ ಆಸ್ತಿ ಸಂಪಾದಿಸಿರುವುದು ಕಂಡುಬಂದಿದೆ.

48 ಗಂಟೆಯೊಳಗೆ ಆರೋಪಿ ಬಂಧನ

ಎಂಬ ಕಾರಣಕ್ಕಾಗಿ ರವಿಕುಮಾರ್ ಹತ್ಯೆಗೆ ಸಂಚು ರೂಪಿಸಿದ್ದ. ಅದರಂತೆ ಜೂ.15ರಂದು ಬೆಳಗ್ಗೆ 10.30ರ ಸುಮಾರಿಗೆ ಮೆಡಿಕಲ್ ಶಾಪ್‌ನಲ್ಲಿದ್ದ ಪುಷ್ಪಲತಾ ಅವರಿಗೆ ಕರೆ ಮಾಡಿ, ಅವರ ಜಮೀನಿನ ಮಾವಿನ ಫಸಲು ಖರೀದಿಸಿದವರು ಹಣ ಕೊಡಲು ಬಂದಿದ್ದಾರೆ ಎಂದು ಕರೆದಿದ್ದಾನೆ. ಇದನ್ನು ನಂಬಿದ ಪುಷ್ಪಲತಾ ಯಶವಂತ್ ಅವರ ಕ್ಲಿನಿಕ್‌ನ ಟೆಕ್ನಿಷಿಯನ್‌ಗೆ ತಾನು ಮಾವಿನ ಫಸಲು ಖರೀದಿಸಿದವರಿಂದ ಹಣ ಪಡೆದು ಬರುತ್ತೇನೆ. ಅಲ್ಲಿಯವರೆಗೂ ಮೆಡಿಕಲ್ ಶಾಪ್ ನೋಡಿಕೊಳ್ಳಿ ಎಂದು ತಿಳಿಸಿ ಹೋಗಿದ್ದಾರೆ. ಮಧ್ಯಾಹ್ನ 2.45ರ ಸುಮಾರಿನಲ್ಲಿ ಅವರ ಸಂಬಂಧಿಕರೊಬ್ಬರು ಮೆಡಿಕಲ್ ಶಾಪ್‌ಗೆ ಬಂದಾಗ ಪುಷ್ಪಲತಾ ಮನೆಗೆ ಹೋಗಿದ್ದಾರೆ ಎಂಬ ವಿಚಾರ ತಿಳಿದು ಅಲ್ಲಿಗೆ ತೆರಳಿದ್ದಾರೆ. ಹೊರಗಿನಿಂದ ಮನೆಯ ಚಿಲಕ ಹಾಕಿದ್ದು, ಅದನ್ನು ತೆಗೆದು ಒಳಗೆ ಹೋಗಿ ನೋಡಿದರೇ ಹಾಲಿನಲ್ಲಿ ಕತ್ತು ಕುಯ್ದ ಸ್ಥಿತಿಯಲ್ಲಿ ರಕ್ತದ ಮಡುವಿನಲ್ಲಿ ಪುಷ್ಪಲತಾ ದೇಹ ಬಿದ್ದಿತ್ತು. ಈ ಸಂಬಂಧ ಕಿಕ್ಕೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಠಾಣೆಯ ಪ್ರಭಾರ ವಹಿಸಿಕೊಂಡಿರುವ ಕೆ.ಆರ್.ಪೇಟೆ ಟೌನ್ ಠಾಣೆಯ ಇನ್ಸ್‌ಪೆಕ್ಟರ್ ಎಂ.ಕೆ.ದೀಪಕ್ ನೇತೃತ್ವದ ತಂಡ ತನಿಖೆ ಕೈಗೊಂಡು ಪುಷ್ಪಲತಾ ಅವರ ಮೊಬೈಲ್ ಕರೆಗಳನ್ನು ಪರಿಶೀಲಿಸಿದಾಗ ಅಂದು ಬೆಳಗ್ಗೆ 10.30ರಲ್ಲಿ ರವಿಕುಮಾರ್ ಕೊನೆಯದಾಗಿ ಕರೆ ಮಾಡಿರುವುದು ಪತ್ತೆಯಾಗಿದೆ. ಪುಷ್ಪಲತಾ ಕರೆ ಸ್ವೀಕರಿಸಿದ ನಂತರ ಕ್ಲಿನಿಕ್‌ನ ಟೆಕ್ನಿಷಿಯನ್‌ಗೆ ತಿಳಿಸಿ, ಮನೆಗೆ ಹೋಗಿದ್ದು ಈತನ ಕರೆ ಮೇರೆಗೆ ಅವರು ಹೋಗಿದ್ದಾರೆ ಎಂಬುದನ್ನು ಪೊಲೀಸರು ಗ್ರಹಿಸಿದ್ದರು. ಆನಂತರ ಆತ ಮೆಡಿಕಲ್ ಶಾಪ್‌ನಲ್ಲಿ ಬಂದು ಕುಳಿತಿದ್ದ ಎಂಬುದನ್ನು ಗಮನಿಸಿದ ಪೊಲೀಸರು ರವಿ ಕುಮಾರ್‌ನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಪುಷ್ಪಲತಾ ಹತ್ಯೆ ಬಯಲಾಗಿದೆ.

ಮೈಸೂರಲ್ಲಿ ಕಾಂಗ್ರೆಸ್ ಆಕ್ರೋಶ

ಮಾಡಲು ನಮ್ಮ ಯಾವುದೇ ಅಭ್ಯಂತರ ಇಲ್ಲ. ಪಕ್ಷ ಇದುವರೆಗೆ ನ್ಯಾಯ ಯುತ ತನಿಖೆಗೆ ಎಂದೂ ಅಡ್ಡ ಬಂದಿಲ್ಲ. ಆದರೆ, ಇಂದು ತನಿಖಾ ಸಂಸ್ಥೆಗಳು ಬಿಜೆಪಿಯ ಕೈಗೊಂಬೆಯಾಗಿ ಕೆಲಸ ಮಾಡು ತ್ತಿವೆ ಎಂದು ಆಕ್ರೋಶ ಹೊರಹಾಕಿದರು.

ಯಂಗ್ ಇಂಡಿಯಾ 2000 ಕೋಟಿ ಬೆಲೆಬಾಳುವ ಆಸ್ತಿಯನ್ನು 50 ಲಕ್ಷಕ್ಕೆ ಕೊಂಡುಕೊಂಡಿದೆ. ಇದರಲ್ಲಿ ಹಣದ ಅವ್ಯವಹಾರ ಆಗಿದೆ ಎಂಬುದು ಬಿಜೆಪಿ ಆರೋಪ. ಆದರೆ, ಪತ್ರಿಕೆಯನ್ನು ಕೊಂಡು ಕೊಂಡಾಗ ಹಣಕಾಸು ಲೇವಾದೇವಿ ಕಾಯಿದೆ ಅಸ್ತಿತ್ವದಲ್ಲಿ ಇರಲೇ ಇಲ್ಲ. ಅಲ್ಲದೆ ಇದು ಲಾಭದಾಯಕ ಸಂಸ್ಥೆಯಲ್ಲ. ಯಾರಿಗೂ ವರ್ಗಾವಣೆ ಮಾಡುವಂತಿಲ್ಲ. ಇದು ಬಿಜೆಪಿಗೆ ಗೊತ್ತಿದ್ದರೂ ಪದೇ ಪದೆ ಕಿರುಕುಳ ನೀಡುತ್ತಿದೆ. ಸರ್ವಾಧಿಕಾರಿ ಧೋರಣೆಯ ಮೂಲಕ ಕಾಂಗ್ರೆಸ್ ಸರ್ವನಾಶ ಮಾಡಲು ಹುನ್ನಾರ ನಡೆಸಿದೆ ಎಂದು ದೂರಿದರು.

ಮುತ್ತಿಗೆಗೆ ಯತ್ನ: ರಾಹುಲ್‌ಗಾಂಧಿ ವಿಚಾರಣೆ ನೆಪದಲ್ಲಿ ಅವರಿಗೆ ಕಿರುಕುಳ ಖಂಡಿಸಿ ದೇಶಾದ್ಯಂತ ಕಾಂಗ್ರೆಸ್ ವತಿಯಿಂದ ನಡೆಯುತ್ತಿರುವ ಪ್ರತಿಭಟನೆಯ ಅಂಗವಾಗಿ ಮೈಸೂರಲ್ಲೂ ಪ್ರತಿಭಟನೆ ನಡೆಸಿದ ಬಳಿಕ ಮೆರವಣಿಗೆ ಮೂಲಕ ಪೀಪಲ್ಸ್ ಪಾರ್ಕ್ ಬಳಿಯ ಆದಾಯ ತೆರಿಗೆ ಕಚೇರಿಗೆ ಮುತ್ತಿಗೆ ಹಾಕಲು ಕಾಂಗ್ರೆಸ್ ಕಾರ್ಯಕರ್ತರು ನಿರ್ಧ ರಿಸಿದ್ದರು. ಆದರೆ ಮೆರವಣಿಗೆ ನಡೆಸದಂತೆ ಪೊಲೀಸರು ಮನವಿ ಮಾಡಿದರು. ಆದರೂ ಪೊಲೀಸರ ತಡೆಗೋಡೆಯನ್ನು ಭೇದಿಸಿ ದೊಡ್ಡಗಡಿಯಾರದ ಬಳಿ ಆಗಮಿಸಿದ ಕಾಂಗ್ರೆಸ್ ಕಾರ್ಯಕರ್ತರಿಗೆ ಪೊಲೀಸರು ಮತ್ತೊಮ್ಮೆ ತಡೆಯೊಡ್ಡಿದರು. ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದರು. ಆದರೆ ಪ್ರತಿಭಟನಾನಿರತರು ದೊಡ್ಡಗಡಿಯಾರ ವೃತ್ತದಲ್ಲಿ ಪೊಲೀಸರ ನಡೆ ಖಂಡಿಸಿ ರಸ್ತೆಯಲ್ಲಿ ಧರಣಿ ಕುಳಿತರು. ಅಂತಿಮವಾಗಿ ಪೊಲೀಸರು 100ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿ, ಸಿಎಆರ್ ಮೈದಾನಕ್ಕೆ ಕರೆದೊಯ್ದು ಮಧ್ಯಾಹ್ನದ ನಂತರ ಬಿಡುಗಡೆ ಮಾಡಿದರು.

ಭದ್ರತಾ ವ್ಯವಸ್ಥೆ ಪರಿಶೀಲನೆ

ವಿಸ್ತೀರ್ಣ, ಮೆಟ್ಟಿಲುಗಳು, ಶೆಲ್ಟರ್, ಧ್ವನಿವರ್ಧಕಗಳ ವಿನ್ಯಾಸ, ಅರಮನೆ ಕೋಟೆಯ ಎತ್ತರ, ದ್ವಾರಗಳ ಸುಭದ್ರತೆ, ವಾಹನ ನಿಲುಗಡೆ ಸ್ಥಳಗಳ ಬಗ್ಗೆಯೂ ಸ್ಥಳೀಯ ಅಧಿಕಾರಿಗಳಿಂದ ಮಾಹಿತಿ ಕಲೆ ಹಾಕಿದರು. ನಂತರ ದೊಡ್ಡಕೆರೆ ಮೈದಾನದ ದಸರಾ ವಸ್ತುಪ್ರದರ್ಶನ ಮೈದಾನಕ್ಕೆ ಭೇಟಿ ನೀಡಿದ ಅವರು, ಯೋಗ ವಸ್ತುಪ್ರದರ್ಶನವನ್ನು ನರೇಂದ್ರ ಮೋದಿ ಅವರು ವೀಕ್ಷಿಸಲು ನಿಗದಿಯಾಗಿರುವ ಕಾರ್ಯಕ್ರಮಕ್ಕೆ ಮಾಡಿರುವ ವ್ಯವಸ್ಥೆಯನ್ನು ವೀಕ್ಷಿಸಿದರು.

ಪ್ರಧಾನಿಗಳ ಭೇಟಿ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಭದ್ರತೆ, ಮುಂಜಾಗ್ರತಾ ಕ್ರಮ, ಸಂಚರಿಸುವ ಮಾರ್ಗಗಳಲ್ಲಿ ಸುರಕ್ಷತೆ, ವಾಹನ ಸಂಚಾರ ಸ್ಥಗಿತಗೊಳಿಸಿ ಜೀರೋ ಟ್ರಾಫಿಕ್ ಮಾಡುವುದು, ವಾಸ್ತವ್ಯ ಹೂಡುವ ಹೋಟೆಲ್‌ನಲ್ಲಿ ಎರಡು ದಿನ ಮುಂಚಿತವಾಗಿ ಗ್ರಾಹಕರನ್ನು ತೆರವುಗೊಳಿಸಿ ಸ್ವಚ್ಛ ಮಾಡಿ ಪೊಲೀಸ್ ಭದ್ರತೆ ಒದಗಿಸುವುದು, ವಿಶೇಷ ವಿಮಾನದಲ್ಲಿ ಆಗಮಿಸುವ ಮಂಡಕಳ್ಳಿ ವಿಮಾನ ನಿಲ್ದಾಣ, ಕಾರಿನಲ್ಲಿ ತೆರಳುವ ನಂಜನಗೂಡು ರಸ್ತೆಯಲ್ಲಿ ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳುವ ಕುರಿತಂತೆಯೂ ಎಸ್‌ಪಿಜಿ ತಂಡದ ಅಧಿಕಾರಿಗಳು ಇಂದು ಜಿಲ್ಲಾಡಳಿತ ಮತ್ತು ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಲಹೆ-ಸೂಚನೆಗಳನ್ನು ನೀಡಿದರು. ನಾಳೆ (ಜೂ.18) 20 ಮಂದಿ ಎಸ್‌ಪಿಜಿ ಅಧಿಕಾರಿಗಳು, ಜೂ.19ರಂದು 20 ಮಂದಿ ಎಸ್‌ಪಿಜಿ ಹಿರಿಯ ಅಧಿಕಾರಿಗಳ ತಂಡವು ಮೈಸೂರಿಗೆ ಆಗಮಿಸಲಿದ್ದು, ಪ್ರಧಾನಿಗಳು ಬಂದು, ಹಿಂದಿರುಗುವವರೆಗೂ ಈ 47 ಅಧಿಕಾರಿಗಳು ಮೈಸೂರಿನಲ್ಲೇ ಬೀಡು ಬಿಟ್ಟು, ಭದ್ರತಾ ವ್ಯವಸ್ಥೆಯ ಮೇಲೆ ನಿರಂತರ ನಿಗಾ ವಹಿಸಿ ಸ್ಥಳೀಯ ಅಧಿಕಾರಿಗಳಿಗೆ ಕ್ಷಣ ಕ್ಷಣವೂ ಸಲಹೆ-ಸೂಚನೆಗಳನ್ನು ನೀಡಲಿದ್ದಾರೆ. ಚೆಸ್ಕಾಂ, ಲೋಕೋಪಯೋಗಿ, ಆಯುಷ್ ಇಲಾಖೆ, ಮುಡಾ, ಪಾಲಿಕೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಎಸ್‌ಪಿಜಿ ಅಧಿಕಾರಿಗಳ ಪರಿಶೀಲನೆ ವೇಳೆ ಹಾಜರಿದ್ದರು. ನಾಳೆ (ಜೂ.18) ಅವರು ಚಾಮುಂಡಿಬೆಟ್ಟ, ಸುತ್ತೂರು ಮಠ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಂಡಕಳ್ಳಿ ವಿಮಾನ ನಿಲ್ದಾಣ, ಪ್ರಧಾನಮಂತ್ರಿಗಳು ಸಂಚರಿಸುವ ಮಾರ್ಗಗಳಲ್ಲೂ ಭದ್ರತಾ ವ್ಯವಸ್ಥೆಯ ಪರಿಶೀಲನೆ ನಡೆಸುವರು ಎಂದು ಮೂಲಗಳು ತಿಳಿಸಿವೆ.

ಇಂದು ದ್ವಿತೀಯ ಪಿಯು ಫಲಿತಾಂಶ

ರಾಜ್ಯಾದ್ಯಂತ ಒಟ್ಟು 6,84,255 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇದರಲ್ಲಿ 3,46,936 ಬಾಲಕರು, 3,37,319 ಬಾಲಕಿಯರು ಸೇರಿದಂತೆ 6,00,519 ಮಂದಿ ರೆಗ್ಯೂಲರ್ ವಿದ್ಯಾರ್ಥಿಗಳಾಗಿದ್ದರೆ, 61,808 ಪುನರಾವರ್ತಿತ, 28,928 ಮಂದಿ ಖಾಸಗಿ ಅಭ್ಯರ್ಥಿಗಳಾಗಿದ್ದರು. ಕಲಾ ವಿಭಾಗದಿಂದ 2,28,167, ವಾಣಿಜ್ಯ ವಿಭಾಗದಿಂದ 2,45,591 ಹಾಗೂ 2,10,569 ವಿದ್ಯಾರ್ಥಿಗಳು ವಿಜ್ಞಾನ ವಿಭಾಗದವರಾಗಿದ್ದಾರೆ. ಈ ಬಾರಿ ಹಿಜಾಬ್ ಸಂಘರ್ಷದ ನಡುವೆಯೂ ದ್ವಿತೀಯ ಪಿಯುಸಿ ಪರೀಕ್ಷೆ ಸುಗಮವಾಗಿ ನಡೆದಿತ್ತು. ರಾಜ್ಯಾದ್ಯಂತ ಒಟ್ಟು 5,241 ಕಾಲೇಜುಗಳಿಂದ ಪರೀಕ್ಷಾ ನೋಂದಣಿ ಮಾಡಿಕೊಳ್ಳ ಲಾಗಿತ್ತು. ಒಟ್ಟು 1076 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು. ಸರ್ಕಾರದ ಅಧಿಕೃತ ವೆಬ್‌ಸೈಟ್ ಹೊರತುಪಡಿಸಿ ಖಾಸಗಿ ವೆಬ್‌ಸೈಟ್‌ನಲ್ಲಿ ಪ್ರಕಟವಾಗುವ ಫಲಿತಾಂಶವನ್ನು ವಿದ್ಯಾರ್ಥಿ ಗಳು, ಪೋಷಕರು ಪರಿಗಣಿಸಬಾರದು ಎಂದು ಪದವಿ ಪೂರ್ವ ಶಿಕ್ಷಣ ಮಂಡಳಿ ತಿಳಿಸಿದೆ.

ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ಆಸ್ತಿಗಳ ದಾಖಲಾತಿ ಡಿಜಿಟಲೀಕರಣ

ಮೊದಲ ಹಂತದಲ್ಲಿ ಮೈಸೂರಿನ ದಕ್ಷಿಣ, ಉತ್ತರ ಕಚೇರಿಗಳಲ್ಲಿ ಪ್ರಕ್ರಿಯೆ ಆರಂಭ



ಮೈಸೂರು, ಜೂ. 17 (ಆರ್‌ಕೆ)- ಭೂಮಿ, ನಿವೇಶನ, ಕಟ್ಟಡ ಹೀಗೆ ಸ್ಥಿರಾಸ್ತಿ ವಿಷಯದಲ್ಲಿ ವಂಚನೆ, ಮೋಸ, ವಿವಾದಗಳಿಗೆ ಕಡಿವಾಣ ಹಾಕಲು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿಯಾಗುವ ಡೀಡ್‌ಗಳು, ದಾಖಲೆ ಪತ್ರಗಳನ್ನು ಡಿಜಿಟಲೀಕರಣಗೊಳಿಸಲು ಸರ್ಕಾರ ಮುಂದಾಗಿದೆ.

ಮೊದಲ ಹಂತದಲ್ಲಿ ರಾಜ್ಯದ ಆಯ್ದ ನಗರಗಳ ಉಪ ನೋಂದಣಾಧಿಕಾರಿ ಕಚೇರಿಗಳನ್ನು ಉನ್ನತೀಕರಣಗೊಳಿಸಿ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಸಾಫ್ಟ್‌ವೇರ್‌ನಲ್ಲಿ ಸ್ಟೋರ್ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತಿದ್ದು, ಮೈಸೂರು ರಾಮಕೃಷ್ಣನಗರದ ದಕ್ಷಿಣ ಉಪನೋಂದಣಾಧಿಕಾರಿ ಕಚೇರಿ ಮತ್ತು ನಜರ್‌ಬಾದ್‌ನ ಮಿನಿ ವಿಧಾನ ಸೌಧದಲ್ಲಿರುವ ಉತ್ತರ ಉಪನೋಂದಣಾಧಿಕಾರಿ ಕಚೇರಿಗಳನ್ನು ಡೀಡ್ ಮತ್ತು ದಾಖಲಾತಿಗಳ ಡಿಜಿಟಲೀಕರಣಗೊಳಿಸಲು ಆಯ್ಕೆ ಮಾಡಲಾಗಿದೆ.

ನೋಂದಣಿಯಾಗುವ ಪ್ರತಿಯೊಂದು ಆಸ್ತಿಗಳ ದಾಖಲಾತಿಗಳನ್ನು ಕಂಪ್ಯೂಟರೀಕರಣಗೊಳಿಸಿ ಮಾಲೀಕತ್ವ ವರ್ಗಾವಣೆ ಕಾಗದ ಪತ್ರಗಳನ್ನು ತ್ವರಿತಗತಿಯಲ್ಲಿ ವಾರಸುದಾರರಿಗೆ ನೀಡುವ ವ್ಯವಸ್ಥೆ ಜಾರಿಗೆ ತರಲು ಸರ್ಕಾರ ಈ ಹೊಸ ವಿಧಾನವನ್ನು ಜಾರಿಗೆ ತರುತ್ತಿದೆ.

ಇದರಿಂದ ನಕಲಿ ದಾಖಲೆ ಸೃಷ್ಟಿಸಿ, ಆಸ್ತಿ ಕಬಳಿಸುವುದು, ವಂಚನೆ ಮಾಡುವುದನ್ನು ತಪ್ಪಿಸಬಹುದಲ್ಲದೆ, ನೈಜ ದಾಖಲಾತಿಗಳಿಲ್ಲದೆ ಆಸ್ತಿಗಳ ನೋಂದಣಿ ವಹಿವಾಟು ನಡೆಯುವುದನ್ನು ತಪ್ಪಿಸಬಹುದಾಗಿದೆ.

ರಾಜ್ಯದ 29 ಕಚೇರಿಗಳ ಪೈಕಿ ಮೈಸೂರಿನ ಎರಡು ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಡಿಜಿಟಲೀಕರಣ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ.

ಕಳೆದ ರಾಜ್ಯ ಬಜೆಟ್‌ನಲ್ಲಿ ಈ ಯೋಜನೆ ಜಾರಿಗೆ ತರಲು ಪ್ರಸ್ತಾಪಿಸಿದಂತೆ ಸರ್ಕಾರವು ಪ್ರಕ್ರಿಯೆ ಆರಂಭಿಸಿದ್ದು, 2004ನೇ ಸಾಲಿನ ವರೆಗೆ ವ್ಯವಹಾರವಾಗಿರುವ ಎಲ್ಲಾ ಆಸ್ತಿಗಳ ದಾಖಲೆ ಪತ್ರಗಳನ್ನು ಸ್ಕ್ಯಾನ್ ಮಾಡಲು ಸಿದ್ಧತೆ ನಡೆಸಲಾಗಿದೆ. ಈ ಪ್ರಕ್ರಿಯೆಗೆ ಬಜೆಟ್‌ನಲ್ಲಿ 10 ಕೋಟಿ ರೂ. ಅನುದಾನ ಮೀಸಲಿರಿಸಲಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಕರ್ನಾಟಕ ರಾಜ್ಯಾದ್ಯಂತ 2003 ರಿಂದೀಚೆಗಿನ ಎನ್‌ಕಂಬರೆನ್ಸ್ ಸರ್ಟಿಫಿಕೇಟ್ (ಇಸಿ) ಪ್ರತಿಗಳನ್ನು ಡಿಜಿಟಲ್ ಮಾದರಿಯಲ್ಲೇ ನೀಡಲಾಗುತ್ತಿದೆ. ಅದಕ್ಕಿಂತ ಹಿಂದಿನ ದಾಖಲಾತಿಗಳು ಕೈಬರಹದಲ್ಲೇ ಇರುವುದರಿಂದ ಅವುಗಳನ್ನು ಹುಡುಕುವುದು ಕಷ್ಟ ಸಾಧ್ಯವಲ್ಲದೆ, ತಿದ್ದುಪಡಿ ಮಾಡಲು ಅವಕಾಶವಿರುವುದರಿಂದ ಮೋಸ-ವಂಚನೆ ಮಾಡಬಹುದಾಗಿದೆ.

ಈ ಹೊಸ ಯೋಜನೆ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಉಪನೋಂದಣಾಧಿಕಾರಿಗಳಾದ ಕಿರಣ್ ಕುಮಾರ್ (ಉತ್ತರ) ಮತ್ತು ಯಶಸ್ವಿನಿ ಜನಾರ್ಧನ್ (ದಕ್ಷಿಣ) ಅವರು, ಡೀಡ್‌ಗಳು ಮತ್ತು ದಾಖಲೆ ಪತ್ರಗಳನ್ನು ಡಿಜಿಟಲೀಕರಣಗೊಳಿಸುವ ಸಂಬಂಧ ಸರ್ಕಾರದಿಂದ ನಮಗೆ ಯಾವುದೇ ಸುತ್ತೋಲೆ, ಆದೇಶದ ಪ್ರತಿ ನಮ್ಮ ಕೈ ತಲುಪಿಲ್ಲ. ನಿರ್ದೇಶನ ಬಂದಲ್ಲಿ ಪ್ರಕ್ರಿಯೆ ಆರಂಭಿಸುತ್ತೇವೆ ಎಂದರು.

ಈ ಹಿಂದೆ ಈ ಸಂಬಂಧ ಸರ್ಕಾರ ಕೇಳಿದ್ದ ಮಾಹಿತಿ, ದಾಖಲಾತಿಗಳ ಅಂಕಿ ಅಂಶಗಳನ್ನು ಪೂರೈಸಿದ್ದೆವು. ಈಗ ಹೊಸದಾಗಿ ಡಿಜಿಟಲೀಕರಣ ಕುರಿತಂತೆ ಸ್ಪಷ್ಟ ಸೂಚನೆ ಬಂದಿಲ್ಲ. ಪತ್ರ ವ್ಯವಹಾರ ವೇನಾದರೂ ಆಗಿದ್ದಲ್ಲಿ ಪರಿಶೀಲಿಸಿ ಸರ್ಕಾರದ ನಿರ್ದೇಶನದಂತೆ ಪ್ರಕ್ರಿಯೆ ನಡೆಸುತ್ತೇವೆ ಎಂದು ಅವರು ನುಡಿದರು.

ದಾಖಲಾತಿ ಪತ್ರಗಳನ್ನು ಸ್ಕ್ಯಾನ್ ಮಾಡಿದ ನಂತರ ಕೈಬರಹದ ರೆಕಾರ್ಡ್‌ಗಳನ್ನು ಬಂಡಲ್ ಮಾಡಿ ಅದರ ಮೇಲೆ ಮಾಹಿತಿ ಬರೆದು ಕಾಪಾಡಿಕೊಳ್ಳಲಾಗುವುದು. ಸಾರ್ವಜನಿಕರು ಅರ್ಜಿ ಸಲ್ಲಿಸಿ ಕೇಳಿದ ದಾಖಲೆ ಪ್ರತಿಗಳನ್ನು ಸಾಫ್ಟ್‌ವೇರ್ ಲೆಡ್ಜರ್‌ನಿಂದ ತೆಗೆದು ನೀಡಲು ಡಿಜಿಟಲೀಕರಣ ಪ್ರಕ್ರಿಯೆಯಿಂದ ಸುಲಭವಾಗುತ್ತದೆ.

ಹೊಸ ವ್ಯವಸ್ಥೆ ಜಾರಿಗೊಳಿಸಲು ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದ್ದು, ಸರ್ಕಾರದ ಮಟ್ಟದಲ್ಲಿ ಪ್ರಾತಿಯಲ್ಲಿದೆ. ಯಶಸ್ವಿ ಬಿಡ್ಡುದಾರ ಸಂಸ್ಥೆಯು ಉಪನೋಂದಣಾಧಿಕಾರಿ ಕಚೇರಿಗಳಲ್ಲಿರುವ ಎಲ್ಲಾ ಹಳೇ ದಾಖಲೆಗಳ ಪ್ರತಿಯೊಂದು ಹಾಳೆಯ ಪುಟಗಳನ್ನು ಸ್ಕ್ಯಾನ್ ಮಾಡಿ, ಇಂಡೆಕ್ಸ್ ಮಾಡಿ ಸಾಫ್ಟ್‌ವೇರ್‌ನಲ್ಲಿ ಸ್ಟೋರ್ ಮಾಡಿಕೊಡುತ್ತೇವೆ ಎಂದು ಮೂಲಗಳು ತಿಳಿಸಿದೆ.

ಪಾರದರ್ಶಕ ವಹಿವಾಟು, ತ್ವರಿತ ಸೇವೆ, ನಕಲಿ ದಾಖಲೆ ಸೃಷ್ಟಿಸಿ ವಂಚಿಸುವುದನ್ನು, ಹೊಸ ಡಿಜಿಟಲೀಕರಣ ಯೋಜನೆಯಿಂದ ತಡೆಗಟ್ಟಬಹುದಾಗಿದೆ. ರೈತರು, ಸಾರ್ವಜನಿಕರ ಆಸ್ತಿ ದಾಖಲೆಗಳನ್ನು ಸುರಕ್ಷಿತವಾಗಿ ಸಂರಕ್ಷಿಸಿದ್ದು, ಕೇಳಿದಾಗ ನಿಗದಿತ ಶುಲ್ಕ ಪಡೆದು ಒದಗಿಸಲು ಇದರಿಂದ ಸಾಧ್ಯವಾಗುತ್ತದೆ.

ಪ್ರಧಾನಿ ಮೋದಿ ಮೈಸೂರು ವಾಕ್-ಶ್ರವಣ ಸಂಸ್ಥೆ ಭೇಟಿಗೂ ಕೋರಿದ್ದೇವೆ

ಕಟ್ಟಡ ಪರಿಶೀಲನೆ ಬಳಿಕ ಸಂಸದ ಪ್ರತಾಪ್‌ಸಿಂಹ ಹೇಳಿಕೆ



ಮೈಸೂರು, ಜೂ.17 (ಆರ್‌ಕೆಬಿ)- ಪ್ರಧಾನಿ ನರೇಂದ್ರ ಮೋದಿ ಅವರು ಜೂ.20 ಮತ್ತು 21 ರಂದು ಮೈಸೂರಿಗೆ ಭೇಟಿ ನೀಡುತ್ತಿದ್ದು, ಅದೇ ಸಂದರ್ಭದಲ್ಲಿ ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್)ಗೆ ಭೇಟಿ ನೀಡುವಂತೆ ಆಹ್ವಾನ ನೀಡಲಾಗಿದೆ. ಕನಿಷ್ಠ 5 ನಿಮಿಷವಾದರೂ ಇಲ್ಲಿಗೆ ಭೇಟಿ ನೀಡುವಂತೆ ಮೋದಿಯವರನ್ನು ಕೋರಲಾಗಿದೆ. ಅವರು ಬರುವ ವಿಶ್ವಾಸವೂ ಇದೆ ಎಂದು ಮೈಸೂರು-ಕೊಡಗು ಸಂಸದ ಪ್ರತಾಪ್‌ಸಿಂಹ ಶುಕ್ರವಾರ ತಿಳಿಸಿದರು.

ಮೈಸೂರಿನಲ್ಲಿ ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆಯಲ್ಲಿ 155.50 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಮೂರು ಅಂತಸ್ತಿನ ಹೊಸ ಕಟ್ಟಡವನ್ನು ಪರಿಶೀಲಿಸಿ, ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಮೈಸೂರಿಗೆ ಬರುವ ನರೇಂದ್ರ ಮೋದಿ ಅವರು ಆಯಿಷ್‌ಗೆ ಭೇಟಿ ನೀಡುವ ಕುರಿತು ಇನ್ನೂ ನಿರ್ಧಾರವಾಗಿಲ್ಲ. ಆಯಿಷ್ ನೂತನ ಕಟ್ಟಡ ಉದ್ಘಾಟನೆಗೆ ಕನಿಷ್ಠ ಐದು ನಿಮಿಷವಾದರೂ ಬರುವಂತೆ ಕೋರಿದ್ದು, ಈ ಸಂಬಂಧ ಪ್ರಧಾನ ಮಂತ್ರಿಗಳ ಕಚೇರಿಯಿಂದ ಮಾಹಿತಿ ನಿರೀಕ್ಷೆಯಲ್ಲಿದ್ದೇವೆ ಎಂದು ಹೇಳಿದರು.

ಮೈಸೂರಿಗೆ ಮೋದಿ ಮೂರನೇ ಭೇಟಿ: ಮೈಸೂರಿಗೆ ನರೇಂದ್ರ ಮೋದಿ ಮೂರನೇ ಬಾರಿ ಭೇಟಿ ನೀಡುತ್ತಿದ್ದು, ಮೂರು ಬಾರಿಯೂ ಮೈಸೂರಿನಲ್ಲಿ ವಾಸ್ತವ್ಯ ಹೂಡುತ್ತಿರುವುದು ವಿಶೇಷ. ವಾಕ್ ಮತ್ತು ಶ್ರವಣಕ್ಕೆ ಸಂಬಂಧಿಸಿದಂತೆ ಎಲ್ಲಾ ಚಿಕಿತ್ಸೆಗಳನ್ನು ಒಳಗೊಂಡಿರುವ ಏಕೈಕ ಸಂಸ್ಥೆ ಇದಾಗಿದ್ದು, ಹೀಗಾಗಿ ಇಲ್ಲಿಗೆ ಭೇಟಿ ನೀಡುವಂತೆ ಮನವಿ ಮಾಡಲಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಯುವಕನ ಕಿರುಕುಳ: ಅಪ್ರಾಪ್ತೆ ಆತ್ಮಹತ್ಯೆ

ಮೈಸೂರು, ಜೂ.17-ಯುವಕನೋರ್ವ ರೇಗಿಸುತ್ತಿದ್ದರಿಂದ ಮನ ನೊಂದು ಕಾಲೇಜು ವಿದ್ಯಾರ್ಥಿನಿ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾದ ಘಟನೆ ಮೈಸೂರು ತಾಲೂಕು ಸಾಹುಕಾರ ಹುಂಡಿ ಗ್ರಾಮದಿಂದ ವರದಿಯಾಗಿದೆ. ಮೈಸೂರಿನ ಖಾಸಗಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿನಿ ಸ್ಫೂರ್ತಿ(16) ಆತ್ಮಹತ್ಯೆಗೆ ಶರಣಾದವಳಾಗಿದ್ದು, ಈಕೆ ಪ್ರತಿ ದಿನ ಕಾಲೇಜಿನಿಂದ ಗಣಗರಹುಂಡಿಯಲ್ಲಿ ಬಸ್ ಇಳಿದು ಸಾಹುಕಾರ ಹುಂಡಿಗೆ ಬರುತ್ತಿರುವಾಗ ಅದೇ ಗ್ರಾಮದ ನಂದನ್ ಎಂಬ ಯುವಕ ರೇಗಿಸುವ ಮೂಲಕ ಕಿರುಕುಳ ನೀಡುತ್ತಿದ್ದ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

ತನ್ನ ಪುತ್ರಿಗೆ ನಂದನ್‌ನ ಕಿರುಕುಳ ಹೆಚ್ಚಾದಾಗ 2-3 ಬಾರಿ ಆತನ ತಂದೆ ಶಿವಣ್ಣ ಅವರನ್ನು ನಮ್ಮ ಮನೆಗೆ ಕರೆಸಿ ಗ್ರಾಮದ ಮುಖಂಡರ ಸಮ್ಮುಖದಲ್ಲಿ ವಿಷಯ ತಿಳಿಸಿ, ನಂದನ್‌ಗೆ ಬುದ್ಧಿವಾದ ಹೇಳುವಂತೆ ಕೇಳಿಕೊಳ್ಳಲಾಗಿತ್ತು. ಆದರೂ ಕೂಡ ಆತನ ಕಿರುಕುಳ ತಪ್ಪಿರಲಿಲ್ಲ. ಆತನ ಕಿರುಕುಳದ ಕಾರಣದಿಂದ ಕಾಲೇಜಿಗೆ ಹೋಗುವುದಿಲ್ಲ ಎಂದು ಪುತ್ರಿ ಹೇಳುತ್ತಿದ್ದಳು. ಈ ಬಗ್ಗೆ ತಾನು ಪೊಲೀಸರಿಗೆ ಕಂಪ್ಲೇಂಟ್ ನೀಡಿ ನಿನ್ನ ತಂಟೆಗೆ ಅವನು ಬಾರದಂತೆ ಬುದ್ಧಿ ಕಲಿಸುತ್ತೇನೆ ಎಂದು ಧೈರ್ಯ ತುಂಬಿದ್ದೆ. ಜೂ.15ರಂದು ಸಂಜೆ ಕಾಲೇಜಿನಿಂದ ಹಿಂತಿರುಗಿದ ಮಗಳು ಮತ್ತೆ ತನ್ನನ್ನು ನಂದನ್ ರೇಗಿಸಿ ಚುಡಾಯಿಸುತ್ತಿದ್ದಾನೆ, ತುಂಬಾ ಹಿಂಸೆಯಾಗುತ್ತಿದೆ ಎಂದು ಹೇಳಿದ್ದಳು. ಅದೇ ಕೊರಗಿನಲ್ಲಿದ್ದ ಆಕೆ, ಅಂದು ರಾತ್ರಿ ವಿಷ ಸೇವಿಸಿ ಅಸ್ವಸ್ಥಳಾಗಿದ್ದು, ಆಕೆಯನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದರೂ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾಳೆ ಎಂದು ವಿದ್ಯಾರ್ಥಿನಿಯ ತಂದೆ ಆರ್.ಶಿವಣ್ಣ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಇಲವಾಲ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.



ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ವತಿಯಿಂದ ಮೈಸೂರು ಸಂಸದ ಪ್ರತಾಪ್ ಸಿಂಹ ಅವರೊಂದಿಗೆ ಸಂವಾದ ಏರ್ಪಡಿಸಲಾಗಿತ್ತು. ಈ ವೇಳೆ ಅವರನ್ನು ಎಫ್‌ಕೆಸಿಸಿಐನ ಮಾಜಿ ಅಧ್ಯಕ್ಷ ಸುಧಾಕರ ಶೆಟ್ಟಿ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಉಪಾಧ್ಯಕ್ಷ ಆರ್. ಆನಂದ್, ಕಾರ್ಯದರ್ಶಿ ಶಿವಾಜಿರಾವ್, ಜಂಟಿ ಕಾರ್ಯದರ್ಶಿ ವಿನೋದ್ ಜೈನ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮೈಸೂರು ಚೇಂಬರ್ಸ್ ಆಫ್ ಕಾಮರ್ಸ್‌ನ ಮಾಜಿ ಅಧ್ಯಕ್ಷ ಸತೀಶ್ ಇತರರು ಅಭಿನಂದಿಸಿದರು.

ದಕ್ಷಿಣ ಪದವೀಧರ ಕ್ಷೇತ್ರದ ಸೋಲಿನ ಹೊಣೆ ನಾನೇ ಹೊರುವೆ

ಜೆಡಿಎಸ್ ಪರಾಜಿತ ಅಭ್ಯರ್ಥಿ ಹೆಚ್.ಕೆ.ರಾಮು



ಮೈಸೂರು, ಜೂ.17(ಎಸ್‌ಪಿಎನ್)- ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಸೋಲಿನ ಹೊಣೆ ನಾನೆ ಹೊರುವೆ ಎಂದು ಜೆಡಿಎಸ್ ಪರಾಜಿತ ಅಭ್ಯರ್ಥಿ ಹೆಚ್.ಕೆ.ರಾಮು ತಿಳಿಸಿದರು.

ನಗರದ ಶಿವರಾಮಪೇಟೆಯಲ್ಲಿರುವ ಆಲಮ್ಮ ಛತ್ರದಲ್ಲಿ ಜೆಡಿಎಸ್ ವತಿಯಿಂದ ಆಯೋಜಿಸಿದ್ದ ಕೃತಜ್ಞತಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ದಕ್ಷಿಣ ಪದವೀಧರರ ಕ್ಷೇತ್ರದ ಮತದಾರರು, ಜೆಡಿಎಸ್ ಕಾರ್ಯಕರ್ತರು ಮುಖಂಡರಿಗೂ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ನನ್ನ ಮೇಲೆ ನಂಬಿಕೆಯಿಟ್ಟು ದಕ್ಷಿಣ ಪದವೀಧರ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಹಾಗೂ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಹಾಗೂ ನನಗೆ ಮತ ಹಾಕಿಸಲು ಕಾರ್ಯಕರ್ತರು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಆದರೂ ಪದವೀಧರ ಕ್ಷೇತ್ರಕ್ಕೆ ಜೆಡಿಎಸ್ ನೀಡಿರುವ ಕೊಡುಗೆಯನ್ನು ಮುಟ್ಟಿಸುವಲ್ಲಿ ಪ್ರಚಾರ ಕೊರತೆಯಿಂದ ನಾವು ಸೋಲಬೇಕಾಯಿತು ಎಂದು ತಿಳಿಸಿದರು.

ಜೆಡಿಎಸ್ ಕಾರ್ಯಕರ್ತರು ಮತ್ತು ಮುಖಂಡರು ನನ್ನೊಂದಿಗೆ ಸತತ ಆರು ತಿಂಗಳಿಂದ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳಲ್ಲಿ ಪ್ರಚಾರ ಕೈಗೊಂಡಿದ್ದರಿಂದ 19 ಸಾವಿರಕ್ಕೂ ಹೆಚ್ಚು ಮತಗಳು ಬಂದಿವೆ. ಈ ಚುನಾವಣೆ ಸೋಲಿನ ಕಾರಣ ಹುಡುಕುವ ಬದಲು ಬರುವ ದಿನಗಳಲ್ಲಿ ಪಕ್ಷವನ್ನು ತಳಮಟ್ಟದಲ್ಲಿ ಸಂಘಟಿಸಲು ನಿಮ್ಮೆಲ್ಲರ ಸಹಕಾರದಿಂದ ಶ್ರಮಿಸುತ್ತೇನೆ ಎಂದು ತಿಳಿಸಿದರು.

ಈ ವೇಳೆ ಜೆಡಿಎಸ್ ನಗರ ಘಟಕದ ಅಧ್ಯಕ್ಷ ಕೆ.ಟಿ.ಚೆಲುವೇಗೌಡ, ಮಹಿಳಾ ಘಟಕದ ಅಧ್ಯಕ್ಷೆ ಪ್ರೇಮಾ ಶಂಕರೇಗೌಡ, ನಗರ ಪಾಲಿಕೆ ಸದಸ್ಯರಾದ ಎಸ್‌ಬಿಎಂ ಮಂಜು, ರಮೇಶ್, ನಗರ ಪಾಲಿಕೆ ಮಾಜಿ ಸದಸ್ಯ ಶಿವಣ್ಣ, ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ಮಾಜಿ ಉಪಮೇಯರ್ ಶೈಲೇಂದ್ರ, ಜೆಡಿಎಸ್ ಮುಖಂಡರಾದ ಗಂಗಾಧರ್ ಗೌಡ, ಎನ್.ಆರ್.ಕ್ಷೇತ್ರದ ಅಧ್ಯಕ್ಷ ರಾಮು, ಯುವ ಘಟಕದ ಉಪಾಧ್ಯಕ್ಷ ರಾಮು, ಕುಮಾರಸ್ವಾಮಿ, ಉಮೇಶ್, ಹೇಮಾವತಿ, ನಿವೃತ್ತ ಬಿಇಓ ಶಿವರಾಮೇಗೌಡ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಎಂ.ಎಸ್.ಪ್ರಕಾಶ್, ಕರ್ನಾಟಕ ಸೇನಾಪಡೆಯ ಜಿಲ್ಲಾಧ್ಯಕ್ಷ ತೇಜಸ್ ಲೋಕೇಶ್ ಗೌಡ ಹಾಜರಿದ್ದರು.

ಮೂಳೆಯ ಲವಣ ಸಾಂದ್ರತೆ ಚಿಕಿತ್ಸಾ ಶಿಬಿರ

ಮೈಸೂರು, ಜೂ.17- ಹಿರಿಯ ನಾಗರಿಕರಿಗೆ ಉಚಿತ ಮೂಳೆಯ ಲವಣ ಸಾಂದ್ರತೆ (BMD) ಚಿಕಿತ್ಸಾ ಮತ್ತು ಸಲಹಾ ಶಿಬಿರವನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಹಿರಿಯ ಚಿಕಿತ್ಸಾ ವಿಭಾಗದಲ್ಲಿ ಜೂ.22ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಆಯೋಜಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ದೂ.ಸಂ:1090 ಅಥವಾ 0821-2448138, 2548253 ಯೋಜನಾ ಸಂಯೋಜನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಆಯುಷ್ ವಸ್ತು ಪ್ರದರ್ಶನಕ್ಕೆ ತಯಾರಿ

ಮೈಸೂರು,ಜೂ 17(ಜಿಎ)- ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಯೋಗ ಸಂಬಂಧಿತ ವಸ್ತು ಪ್ರದರ್ಶನ ಮಳಿಗೆಗಳ ಉದ್ಘಾಟನೆಯನ್ನು ಪ್ರಧಾನಿ ಮೋದಿ ಅವರು ನೆರವೇರಿಸಲಿರುವ ಹಿನ್ನೆಲೆಯಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.



ವಸ್ತು ಪ್ರದರ್ಶನ ಆವರಣದಲ್ಲಿ ಆಯುಷ್ ಇಲಾಖೆ ವತಿಯಿಂದ ಯೋಗಕ್ಕೆ ಸಂಬಂಧಪಟ್ಟ ಮಾಹಿತಿ, ಪ್ರಾತ್ಯಕ್ಷಿಕೆಗಳನ್ನು ಒಳಗೊಂಡ 143 ಮಳಿಗೆ ಮತ್ತು ಡಿಜಿಟಲ್ ಮಳಿಗೆಯನ್ನು ಸಜ್ಜುಗೊಳಿಸಲಾಗುತ್ತಿದೆ. ಅಂತಾರಾಷ್ಟ್ರೀಯ ಯೋಗ ದಿನಾಚರಣೆ (ಜೂ.21)ಯಂದು ಸಾಮೂಹಿಕ ಯೋಗ ಪ್ರದರ್ಶನದ ಬಳಿಕ ಪ್ರಧಾನಿ ಮೋದಿ ಈ ವಸ್ತು ಪ್ರದರ್ಶನ ಉದ್ಘಾಟಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಇಂದು ಎಸ್‌ಪಿಜಿ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್ ಗೌಡ ಮಾಧ್ಯಮಗಳಿಗೆ ತಿಳಿಸಿದರು. ಎಸ್‌ಪಿಜಿ ತಂಡ ಭದ್ರತಾ ದೃಷ್ಟಿಯಿಂದ ಕೈಗೊಳ್ಳುವ ಕ್ರಮಗಳಿಗೆ ನಮ್ಮ ವಸ್ತು ಪ್ರದರ್ಶನ ಪ್ರಾಧಿಕಾರ ಸಹಕಾರ ನೀಡಲಿದೆ. ಆವರಣದಲ್ಲಿ ಒಂದಷ್ಟು ಸೌಕರ್ಯ ಕಾರ್ಯಗಳನ್ನು ತ್ವರಿತವಾಗಿ ನಡೆಸಲಾಗುತ್ತಿದೆ. ವ್ಯವಸ್ಥಿತವಾಗಿ ಮಳಿಗೆಗಳ ನಿರ್ಮಿಸಲಾಗುತ್ತಿದೆ. ಕೇಂದ್ರ ಆಯುಷ್ ಇಲಾಖೆ ವತಿಯಿಂದ ಈ ಪ್ರದರ್ಶನ ನಡೆಯುತ್ತಿದ್ದು, ಯೋಗ ಮತ್ತು ಆಯುರ್ವೇದ ಸಂಬಂಧ ಮಾಹಿತಿ, ಪ್ರಾತ್ಯಕ್ಷಿಕೆ ಹಾಗೂ ಉತ್ಪನ್ನಗಳು ಇರಲಿವೆ ಎಂದು ವಿವರಣೆ ನೀಡಿದರು.

ಮೈಸೂರು ಮೃಗಾಲಯಕ್ಕೆ ವಿದೇಶಿ ಅತಿಥಿಗಳು



ವಾಲಬಿ



ಬಬೂನ್



ರಿಂಗ್ ಟೈಲ್ ಲೆಮೂರ್

ಮೈಸೂರು, ಜೂ.17(ಜಿಎ)- ಮೈಸೂರು ಮೃಗಾಲಯಕ್ಕೆ ವಿದೇಶಗಳಿಂದ ಹೊಸ ಅತಿಥಿಗಳು ಆಗಮಿಸಿದ್ದು, ಸದ್ಯದಲ್ಲೇ ಪ್ರವಾಸಿಗರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗುವುದು.

ಪ್ರಾಣಿ ವಿನಿಮಯ ಯೋಜನೆಯಡಿ ಯಲ್ಲಿ ಸಿಂಗಾಪೂರ್ ಮತ್ತು ಜೆಕ್ ರಿಪಬ್ಲಿಕ್ ದೇಶಗಳಿಂದ ವಾಲಬಿ, ರಿಂಗ್ ಟೈಲ್ ಲೆಮೂರ್ ಮತ್ತು ಬಬೂನ್‌ಗಳನ್ನು ತರಿಸಿಕೊಳ್ಳಲಾಗಿದ್ದು, ಕತ್ತೆ ಕಿರುಬಗಳನ್ನು ಸಿಂಗಾಪೂರ್ ಮೃಗಾಲಯಕ್ಕೆ ಕಳುಹಿಸಿಕೊಡಲಾಗುತ್ತಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕರ್ನಾಟಕ ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಪ್ರಾಣಿ ವಿನಿಮಯಕ್ಕೆ ಈ ಹಿಂದೆಯೇ ಮನವಿ ಮಾಡಲಾಗಿತ್ತಾದರೂ ಕೊರೊನಾ ಕಾರಣದಿಂದ ವಿಳಂಬವಾಯಿತು. ಸದ್ಯ ಸಿಂಗಾಪೂರ್ ಮೃಗಾಲಯದಿಂದ 15 ಬಬೂನ್(8 ಹೆಣ್ಣು, 7 ಗಂಡು)ಗಳನ್ನು ಕರೆತಂದಿದ್ದು, ಅಲ್ಲಿಗೆ 3 ಕತ್ತೆ ಕಿರುಬಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ಇನ್ನು ಜೆಕ್ ರಿಪಬ್ಲಿಕ್ ದೇಶದಿಂದ 1 ಗಂಡು ಹಾಗೂ 2 ಹೆಣ್ಣು ಸೇರಿ ಒಟ್ಟು 3 ವಾಲಬಿಗಳು ಬಂದಿವೆ. ಅಲ್ಲಿಂದ ಕೆಲ ದಿನಗಳ ಹಿಂದೆಯೇ 5 ರಿಂಗ್ ಟೈಲ್ ಲೆಮೂರ್(2 ಗಂಡು, 3 ಹೆಣ್ಣು)ಗಳು ಮೃಗಾಲಯಕ್ಕೆ ಕರೆತಂದಿದ್ದು, ಅಗತ್ಯ ವ್ಯವಸ್ಥೆ ಮಾಡಲಾಗಿದೆ. ಸದ್ಯದಲ್ಲೇ ಪ್ರವಾಸಿಗರ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗುವುದು ಎಂದರು.

ಬಬೂನ್: ಕೋತಿಗಳ 23 ಜಾತಿಗಳಲ್ಲಿ ಇದು ಒಂದಾಗಿದ್ದು ಇದರಲ್ಲೂ ಆರು ರೀತಿಯನ್ನು ಕಾಣಬಹುದು. ಬಬೂನ್‌ಗಳು ಉದ್ದವಾಗಿದ್ದು ನಾಯಿಯಂತಹ ಮುಖ ಹೊಂದಿವೆ. ಚೂಪಾದ ಕೋರೆ ಹಲ್ಲುಗಳು, ಶಕ್ತಿಯುತವಾದ ದವಡೆಗಳು, ಸಣ್ಣ ಬಾಲವಿದೆ.

ವಾಲಬಿ: ವಾಲಬಿಯಲ್ಲೂ ಒಂಬತ್ತು ಜಾತಿಗಳಿದ್ದು, 45 ರಿಂದ 105 ಸೆಂ.ಮೀ. ಉದ್ದದ ದೇಹ ಹೊಂದಿವೆ. ಬಾಲವೂ 33 ರಿಂದ 75 ಸೆಂ.ಮೀ. ಉದ್ದವಿರುತ್ತದೆ. ಇವು ಬಂಡೆಗಳ ನಡುವೆ ಅದರಲ್ಲೂ ನೀರಿನ ಸಮೀಪದಲ್ಲಿ ವಾಸಿಸುತ್ತವೆ. ಕಾಂಗರೂಗಳಂತೆ ಕಾಣುವ ವಾಲಬಿ ಸದ್ಯ ಅಳಿವಿನಂಚಿನಲ್ಲಿರುವ ಪ್ರಬೇಧ.

ರಿಂಗ್ ಟೈಲ್ ಲೆಮೂರ್: ಇವುಗಳು ಉದ್ದವಾದ, ಕಪ್ಪು ಮತ್ತು ಬಿಳಿ ಉಂಗುರ ಮಾದರಿ ಬಾಲದೊಂದಿಗೆ ಆಕರ್ಷಕವಾಗಿವೆ. ರಿಂಗ್ ಟೈಲ್ ಲೆಮೂರ್ ಹೆಚ್ಚು ಗುಂಪಾಗಿ ವಾಸಿಸುತ್ತವೆ



ಕಳೆದ 9 ದಿನಗಳ ಹಿಂದೆಯಷ್ಟೇ ರಿಂಗ್ ಟೈಲ್ ಲೆಮೂರ್, ವಾಲಬಿ ಮತ್ತು ಬಾಬೂನ್‌ಗಳು ಮೈಸೂರು ಮೃಗಾಲಯಕ್ಕೆ ಆಗಮಿಸಿವೆ. ಅವುಗಳನ್ನು ಕ್ವಾರಂಟೈನ್‌ನಲ್ಲಿ ಇರಿಸಲಾಗಿದ್ದು 21 ದಿನಗಳ ಬಳಿಕ ಸಾರ್ವಜನಿಕ ವೀಕ್ಷಣೆಗೆ ಮುಕ್ತಗೊಳಿಸಲಾಗುತ್ತದೆ.

-ಎಲ್.ಆರ್. ಮಹದೇವಸ್ವಾಮಿ, ಅಧ್ಯಕ್ಷ, ಕರ್ನಾಟಕ ಮೃಗಾಲಯ ಪ್ರಾಧಿಕಾರ

ನಾಗಮಂಗಲ ಬಳಿ ದುಷ್ಕರ್ಮಿಗಳಿಂದ ಗೋಕಟ್ಟೆಗೆ ವಿಷ

ನಾಗಮಂಗಲ,ಜೂ.17– ಮಾನವೀಯತೆ ಮರೆತ ದುಷ್ಕರ್ಮಿಗಳು ಗೋಕಟ್ಟೆಯಲ್ಲಿದ್ದ ಮೀನುಗಳಿಗೆ ವಿಷ ಹಾಕಿರುವ ಘಟನೆ ತಾಲೂಕಿನ ಬೆಳ್ಳೂರು ಹೋಬಳಿ ಮಾರದೇವನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಕೆಲವು ತಿಂಗಳಿಂದ ಬೀಳುತ್ತಿರುವ ಮಳೆಯಿಂದಾಗಿ ಮಾರದೇವನ ಹಳ್ಳಿ ಗ್ರಾಮದ ಗೋಕಟ್ಟೆ ತುಂಬಿದ್ದು, ಗ್ರಾಮಸ್ಥರೆಲ್ಲರೂ ಸಭೆ ಸೇರಿ ಒಮ್ಮತಕ್ಕೆ ಬಂದು ಸುಮಾರು ಏಳೆಂಟು ತಿಂಗಳ ಹಿಂದೆ ಮೀನು ಮರಿಗಳನ್ನು ಬಿಟ್ಟು ಅದರಿಂದ ಬರುವ ಲಾಭವನ್ನು ಗ್ರಾಮದೇವತೆ ಹಬ್ಬಕ್ಕೆ ಉಪಯೋಗಿಸುವುದೆಂದು ತೀರ್ಮಾನ ಕೈಗೊಂಡಿದ್ದರು. ಅಂದಿನಿಂದ ಇಂದಿನವರೆಗೆ ಗ್ರಾಮಸ್ಥರೇ ಆ ಮೀನುಗಳ ಸಾಕಾಣಿಕೆ ಹೊಣೆ ಹೊತ್ತಿದ್ದರು ಎನ್ನಲಾಗಿದೆ.

ಇಂದು ಬೆಳಗ್ಗೆ ಗೋಕಟ್ಟೆ ಬಳಿ ಹೋದ ಕೆಲವರು ಕಟ್ಟೆಯಲ್ಲಿನ ಮೀನುಗಳು ನೀರಿನಲ್ಲಿ ತೇಲುತ್ತಿರುವುದನ್ನು ಕಂಡು ಗಾಬರಿಯಿಂದ ಗ್ರಾಮಸ್ಥರಿಗೆ ವಿಷಯ ತಿಳಿಸಿದ್ದು ದುಷ್ಕರ್ಮಿಗಳು ವಿಷ ಹಾಕಿರುವುದು ಪತ್ತೆಯಾಗಿದೆ. ಕಟ್ಟೆಯಲ್ಲಿನ ಮೀನುಗಳು ಸುಮಾರು 5 ರಿಂದ

ಮೀನುಗಳ ಮಾರಣಹೋಮ: 6 ಲಕ್ಷ ರೂ. ನಷ್ಟ



6 ಕೆ.ಜಿ ತೂಕವುಳ್ಳವಾಗಿದ್ದು, ಅಂದಾಜು 5 ರಿಂದ 6 ಲಕ್ಷ ರೂ. ನಷ್ಟ ಸಂಭವಿಸಿದೆ ಎಂದು ತಿಳಿದು ಬಂದಿದೆ. ವಿಷಯ ತಿಳಿದು ಸ್ಥಳ ಕ್ಕಾಗಮಿಸಿದ ಬೆಳ್ಳೂರು ಠಾಣೆ ಎಸ್ಐ ರಾಮಚಂದ್ರ ಪಾಟೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ದುಷ್ಕರ್ಮಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ನೂತನ ಎಂಎಲ್‌ಸಿ ಮಧುಗೆ ಅದ್ದೂರಿ ಸ್ವಾಗತ



ಭಾರತೀನಗರ, ಜೂ.17(ಅ.ಸತೀಶ್)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿ ಇತಿಹಾಸ ನಿರ್ಮಿಸಿದ ನೂತನ ಎಂಎಲ್‌ಸಿ ಮಧು ಜಿ.ಮಾದೇಗೌಡರಿಗೆ ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿದರು.

ಭಾರತೀನಗರದ ಕಬ್ಬಾಳಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಕಾರ್ಯಕರ್ತರು, ನಂತರ ತೆರೆದ ವಾಹನದಲ್ಲಿ ಜಿ.ಮಾದೇಗೌಡರ ಭಾವಚಿತ್ರವನ್ನಿಟ್ಟು ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ಮಧು ಜಿ.ಮಾದೇಗೌಡರ ಮೆರವಣಿಗೆ ನಡೆಸಿ ಸಂಭ್ರಮಿಸಿದರು. ಅಲ್ಲದೇ ರಸ್ತೆಯುದ್ದಕ್ಕೂ ಅಭಿಮಾನಿಗಳು, ಕಾರ್ಯಕರ್ತರು ಹಾರ ಹಾಕಿ ಅಭಿನಂದಿಸಿದರೆ, ಮಹಿಳೆಯರು ಬೆಲ್ಲದ ಆರತಿ ಎತ್ತಿ ಪಟಾಕಿ ಸಿಡಿಸಿದರು. ಭಾರತೀನಗರ–ಹಲಗೂರು ವೃತ್ತದ ಬಳಿ ಕ್ರೇನ್ ಮೂಲಕ ಭಾರಿ ಗಾತ್ರದ ಕೇಸರಿ, ಬಿಳಿ, ಹಸಿರು ಬಣ್ಣದ ಹೂವಿನ ಹಾರ ಹಾಕಿ ಮಧು ಜಿ.ಮಾದೇಗೌಡರಿಗೆ ಜೈಕಾರ ಹಾಕಿದರು.

ನಂತರ ಮಧು ಮೆಳ್ಳಹಳ್ಳಿ ಶನೇಶ್ವರ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ ಬಳಿಕ ಭಾರತೀ ಕಾಲೇಜಿನ ಮುಖ್ಯದ್ವಾರಕ್ಕೆ ಆಗಮಿಸುತ್ತಿದ್ದಂತೆಯೇ ಕಾಲೇಜಿನ ಶಿಕ್ಷಕರು, ಉಪನ್ಯಾಸಕರು, ಪ್ರಾಧ್ಯಾಪಕರು ಚಪ್ಪಾಳೆ ಹೊಡೆಯುವ ಮೂಲಕ ಬರಮಾಡಿಕೊಂಡರೆ, ಉಪನ್ಯಾಸಕಿಯರು ಬೆಲ್ಲದ ಆರತಿ ಎತ್ತಿ ಸಿಹಿ ತಿನಿಸುವ ಮೂಲಕ ಶುಭ ಹಾರೈಸಿದರು.

ಮಧು ಜಿ.ಮಾದೇಗೌಡ ಮಾತನಾಡಿ, ಈ ಭಾಗದ ಕಾರ್ಯಕರ್ತರು, ಅಭಿಮಾನಿಗಳು ಅದ್ದೂರಿಯಾಗಿ ಮೆರವಣಿಗೆ ನಡೆಸಿ ಬರಮಾಡಿಕೊಂಡಿರುವುದು ನನಗೆ ಸಂತಸ ತಂದಿದೆ. ಎಲ್ಲರಿಗೂ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ನಿಮ್ಮೆಲ್ಲರ ಆಶೀರ್ವಾದ ಸದಾ ಹೀಗೆ ಮುಂದುವರೆಯಲಿ. ನಾನು ಪ್ರಾಮಾಣಿಕ ಸೇವೆ ಸಲ್ಲಿಸುವ ಮೂಲಕ ನಿಮ್ಮ ಋಣ ತೀರಿಸುತ್ತೇನೆ ಎಂದರು. ಈ ವೇಳೆ ಮುಖಂಡರಾದ ಭಾರತೀನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಲಿಂಗೇಗೌಡ, ಬಿ.ಎಂ.ನಂಜೇಗೌಡ, ಅವಿನಾಶ್, ಆರ್.ಸಿದ್ದಪ್ಪ, ಗಿರೀಶ್, ಬಸವೇಗೌಡ, ಸಿದ್ದೇಗೌಡ, ಗ್ರಾಪಂ ಅಧ್ಯಕ್ಷ ವಕ್ರತುಂಡ, ಮಾಜಿ ಅಧ್ಯಕ್ಷ ರವಿಚಂದ್ರ, ಕೆ.ವಿ.ಶ್ರೀನಿವಾಸ್, ಕೆ.ಟಿ.ಶ್ರೀನಿವಾಸ್, ಮಿಥುನ್, ರಾಮಲಿಂಗೇಗೌಡ, ಶಂಕರೇಗೌಡ, ದೊಡ್ಡೇಗೌಡ, ಬಸವರಾಜು, ಪುಟ್ಟಸ್ವಾಮಿ, ಭಾರತೀ ಎಜುಕೇಷನ್ ಟ್ರಸ್ಟ್ ಉಪನ್ಯಾಸಕರು ಸೇರಿದಂತೆ ಹಲವು ಕಾರ್ಯಕರ್ತರಿದ್ದರು.

ಚುನಾವಣೆ ಹತ್ತಿರ ಬಂದಾಗಲೇ ಗಾಂಧಿ ಕುಟುಂಬಕ್ಕೆ ಇಡಿ ತನಿಖೆ: ಎನ್.ಚಲುವರಾಯಸ್ವಾಮಿ ಆರೋಪ

ಮಂಡ್ಯ, ಜೂ.17(ಮೋಹನ್‌ರಾಜ್)– ಚುನಾವಣೆ ಹತ್ತಿರ ಬಂದಾಗಲೇ ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನಮ್ಮ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರ ಮೇಲೆ ಇಡಿ ತನಿಖೆ ನಡೆಸಿ ಜನರಲ್ಲಿ ಗೊಂದಲ ಉಂಟು ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ಉಪಾಧ್ಯಕ್ಷ ಎನ್.ಚಲುವರಾಯಸ್ವಾಮಿ ಆರೋಪಿಸಿದರು.

2010ರಲ್ಲಿ ಈ ಪ್ರಕರಣ ಮುಗಿದಿದೆ ಆದರೂ ಇದರಲ್ಲಿ ಸತ್ಯಾಂಶ ಇಲ್ಲದಿದ್ದರೂ, ವಿನಾಕಾರಣ ಜಾರಿ ನಿರ್ದೇಶನಾಲಯವನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಅಮಿತ್ ಶಾ ಗೃಹಮಂತ್ರಿಯಾಗಿ ಕೆಲಸ ಮಾಡುತ್ತಿರುವುದು ದೌರ್ಭಾಗ್ಯವೇ ಸರಿ. ಗುಜರಾತ್ ನರಮೇಧದಲ್ಲಿ ಬಂಧಿತರಾಗಿದ್ದವರಿಗೆ ರಾಷ್ಟ್ರದ ಪ್ರತಿಯೊಬ್ಬ ಪ್ರಜೆ ಸೆಲ್ಯೂಟ್ ಹೊಡೆಯುವ ಸ್ಥಿತಿಯಲ್ಲಿ ಇದ್ದೇವೆ. ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಹುಟ್ಟು ಹಾಕಲಾಗಿತ್ತು. ಆದರೆ ಪತ್ರಿಕೆಗೆ ಆರ್ಥಿಕ ನಷ್ಟ ಉಂಟಾದಾಗ ಕಾಂಗ್ರೆಸ್ ಪಕ್ಷ ಆರ್ಥಿಕ ನೆರವು ನೀಡಿದೆ. ಸರ್ಕಾರ, ಖಾಸಗಿ ವ್ಯಕ್ತಿ ಹಣ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು.

ಈ ಪ್ರಕರಣದಲ್ಲಿ ಸೋನಿಯಾ ಮತ್ತು ರಾಹುಲ್ ಪಾತ್ರವಿಲ್ಲ ಪ್ರಸ್ತುತ ಮತ್ತೆ ಪ್ರಜಾಪ್ರಭುತ್ವಕ್ಕಾಗಿ ಹೋರಾಟ ಮಾಡುವ ಅನಿವಾರ್ಯತೆ ಎದುರಾಗಿದೆ. ಈಗಾಗಲೇ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಹೋರಾಟ ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಗಿದೆ. ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಇದನ್ನು ಸರಿಪಡಿಸಿಕೊಳ್ಳದಿದ್ದರೆ ಪ್ರತಿಭಟನೆ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಮಧು ಜಿ.ಮಾದೇಗೌಡರ ಗೆಲುವಿಗೆ ಸಂತಸ ವ್ಯಕ್ತಪಡಿಸಿದ ಅವರು, ಮತದಾರರ ಭರವಸೆ ಉಳಿಸಿಕೊಳ್ಳಲಾಗುವುದು. ವರ್ಷದ ಹಿಂದೆಯೇ ವಿಪಕ್ಷ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಸೋನಿಯಾ ಗಾಂಧಿ ಒಪ್ಪಿಗೆ ಪಡೆದು ಮಧು ಅವರ ಮೇಲೆ ನಂಬಿಕೆ ಇಟ್ಟು ಟಿಕೆಟ್ ನೀಡಿದರು ಎಂದರು.

ಬಳಿಕ ಚುನಾವಣೆ ಸಂಬಂಧ ಮಾಜಿ ಸಚಿವರು, ಶಾಸಕರು, ಹಿರಿಯ ಮುಖಂಡರು, ಕಾರ್ಯಕರ್ತರು ವ್ಯಾಪಕ ಪ್ರಚಾರ ಮಾಡಿದ್ದು ಕಾಂಗ್ರೆಸ್ ಗೆಲುವಿಗೆ ಕಾರಣವಾಯಿತು ಎಂದರು.

ನಮ್ಮ ಅಭ್ಯರ್ಥಿ 12,500ಕ್ಕೂ ಹೆಚ್ಚು ಮತಗಳಿಸಿ ಗೆಲುವು ಸಾಧಿಸಿದ್ದಾರೆ. ಜೆಡಿಎಸ್‌ಗೂ ನಮಗೂ 26 ಸಾವಿರ ಮತಗಳ ಅಂತರವಿದೆ. ಇದು ವಿಶೇಷವಾದ ಗೆಲುವು. ಮತದಾರರಿಗೆ ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗೂ ಮತ್ತು ಎಲ್ಲಾ ಮುಖಂಡರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಜೆಡಿಎಸ್‌ನ ಮರಿತಿಬ್ಬೇಗೌಡ, ಕೀಲಾರ ಜಯರಾಂ ಅವರಿಗೆ ಅನ್ಯಾಯವಾಗಿ ಹೊರಗಡೆ ಬಂದು ನಮ್ಮ ಅಭ್ಯರ್ಥಿ ಪರ ನಿಂತರು. ಎರಡನೇ ಪ್ರಾಶಸ್ತ್ಯದ ಮತ ನೀಡಿದ ರೈತಸಂಘ, ಡಿಎಸ್‌ಎಸ್, ಜೆಡಿಎಸ್, ಬಿಎಸ್‌ಪಿ ಅವರು ಸಹ ಬೆಂಬಲ ನೀಡಿದ್ದಾರೆ ಎಂದರು.

ಆಡಳಿತರೂಢ ಬಿಜೆಪಿ ಸರ್ಕಾರದ ವೈಫಲ್ಯದ ಬಗ್ಗೆ ಜನರು ಬೇಸತ್ತಿದ್ದಾರೆ. ಮೈಷುಗರ್ ಕಾರ್ಖಾನೆ ಕಡೆಗಣಿಸಲಾಗಿದೆ. ಇದೆಲ್ಲವನ್ನೂ ಮನಗಂಡ ಜಿಲ್ಲೆ ಜನರು ಕಾಂಗ್ರೆಸ್ ಪರ ನಿಂತಿದ್ದ ರಿಂದ ಗೆಲುವು ದಕ್ಕಿದೆ ಎಂದರು.

ಗೋಷ್ಠಿಯಲ್ಲಿ ಎಂಎಲ್‌ಸಿ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಮಾಜಿ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ನರೇಂದ್ರಸ್ವಾಮಿ, ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಮುಖಂಡರಾದ ಗಣಿಗ ರವಿಕುಮಾರ್, ಡಾ.ಕೃಷ್ಣ, ಮಹಿಳಾ ಘಟಕದ ಅಧ್ಯಕ್ಷೆ ಅಂಜನಾ ಇತರರಿದ್ದರು.

ರಾಹುಲ್ ವಿಚಾರಣೆ ಖಂಡಿಸಿ ಕಾಂಗ್ರೆಸ್ಸಿಗರ ಪ್ರತಿಭಟನೆ

ಮಂಡ್ಯ, ಜೂ.17(ಮೋಹನ್‌ರಾಜ್)– ಜಾರಿ ನಿರ್ದೇಶಾಲಯ ಎಐಸಿಸಿ ಮುಖಂಡ ರಾಹುಲ್ ಗಾಂಧಿಯನ್ನು ವಿಚಾರಣೆಗೆ ಒಳಪಡಿಸಿರುವ ಕ್ರಮ ಖಂಡಿಸಿ ಕಾಂಗ್ರೆಸ್ಸಿಗರು ನಗರದಲ್ಲಿಂದು ಪ್ರತಿಭಟನೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಶುಕ್ರವಾರ ಮಧ್ಯಾಹ್ನ ನಗರದ ಕಾವೇರಿ ವನದ ಬಳಿ ಮಾಜಿ ಸಚಿವರಾದ ಎನ್.ಚಲುವ ರಾಯಸ್ವಾಮಿ, ನರೇಂದ್ರಸ್ವಾಮಿ ನೇತೃತ್ವದಲ್ಲಿ ಜಮಾಯಿಸಿದ ಕಾರ್ಯಕರ್ತರು, ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಪ್ರತಿಭಟನೆ ನಡೆಸಿದರು.

ರಾಹುಲ್ ಗಾಂಧಿ ಅವರಿಗೆ ವಿಚಾರಣೆ ನೆಪದಲ್ಲಿ ಜಾರಿ ನಿರ್ದೇಶನಾಲಯ ಕಿರುಕುಳ ನೀಡುತ್ತಿದೆ. ವಿಚಾರಣೆಗೆ ಒಳಪಡಿಸಿರುವುದು ರಾಜಕೀಯ ಪ್ರೇರಿತ. ಇದರ ಹಿಂದೆ ಕೇಂದ್ರ ಸರ್ಕಾರದ ಕೈವಾಡವಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ರಾಹುಲ್ ಗಾಂಧಿ ಅವರ ಶಕ್ತಿ ಕುಂದಿಸುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇಡಿ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಆದರೆ ಇಂತಹ ಬೆದರಿಕೆಗೆ ಕಾಂಗ್ರೆಸ್ ಯಾವುದೇ ರೀತಿ ಹೆದರಲ್ಲ. ಪಕ್ಷ ಎಂದಿಗೂ ರಾಹುಲ್ ಗಾಂಧಿ ಬೆಂಬಲಕ್ಕೆ ನಿಲ್ಲುತ್ತದೆ ಎಂದರು.



ಇಡಿ ವಿಚಾರಣೆ, ಕಾರ್ಯಕರ್ತರ ಮೇಲೆ ಲಾಠಿ ಚಾರ್ಜ್ ಖಂಡಿಸಿ

ಚಾ.ನಗರದಲ್ಲಿ ಕಾಂಗ್ರೆಸ್‌ನಿಂದ ಬೃಹತ್ ಪ್ರತಿಭಟನೆ

ಚಾಮರಾಜನಗರ, ಜೂ.17(ಎಸ್‌ಎಸ್)– ನ್ಯಾಷನಲ್ ಹೆರಾಲ್ಡ್ ಪ್ರಕರಣ ಸಂಬಂಧ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಹಾಗೂ ಮುಖಂಡ ರಾಹುಲ್ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯ ವಿಚಾರಣೆ ನಡೆಸುತ್ತಿರುವುದು ಹಾಗೂ ದೆಹಲಿಯಲ್ಲಿ ಪ್ರತಿಭಟಿಸಿದ ಪಕ್ಷದ ಸಂಸದರು ಹಾಗೂ ಕಾರ್ಯಕರ್ತರ ಮೇಲೆ ಲಾಠಿ ಚಾರ್ಜ್ ಮಾಡಿರುವುದನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ನಗರದಲ್ಲಿ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನ ಆವರಣದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಹಾಗೂ ಶಾಸಕ ಸಿ.ಪುಟ್ಟರಂಗಶೆಟ್ಟಿ ನೇತೃತ್ವದಲ್ಲಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು ಅಲ್ಲಿಂದ ಭುವನೇಶ್ವರಿ ವೃತ್ತದವರೆಗೆ ಮೆರವಣಿಗೆಯಲ್ಲಿ ತೆರಳಿ, ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿದರು. ಬಳಿಕ ಟೈರ್‌ಗೆ ಬೆಂಕಿ ಹಚ್ಚಿ ಬಿಜೆಪಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಕೇಂದ್ರ ಸರ್ಕಾರ, ಇಡಿ, ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ವಿರುದ್ಧ ಘೋಷಣೆ ಕೂಗಿದರು. ನಂತರ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ಮೆರವಣಿಗೆಯಲ್ಲಿ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಗಾಂಧಿ ಮತ್ತು ನೆಹರು ಮನೆತನವನ್ನು ಗುರಿಯಾಗಿಸಿಕೊಂಡು ಇಡಿ, ಐಟಿ ಮುಂತಾದ ಸಂಸ್ಥೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ. ಆ ಮೂಲಕ ದೇಶದ ವಿರೋಧ ಪಕ್ಷಗಳ ಸಾಮರ್ಥ್ಯ ಕುಗ್ಗಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ. ಇದೊಂದು ಭ್ರಷ್ಟ ಸರ್ಕಾರ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮೇಲೆ ಎಫ್ಐಆರ್ ದಾಖಲಿಸಿ ಸುಳ್ಳು ಪ್ರಕರಣ ದಾಖಲಿಸಲಾಗುತ್ತಿದೆ. ದೇಶದಲ್ಲಿ ರಾಹುಲ್ ಗಾಂಧಿ ಪ್ರಭಾವ ಹೆಚ್ಚಾಗುತ್ತಿರುವುದನ್ನು ಸಹಿಸಲಾರದೆ ಪ್ರಧಾನಿ ಅವರು ಈ ರೀತಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ರಾಷ್ಟ್ರೀಯ ನಾಯಕರ ತೇಜೋವಧೆ ಮಾಡುವ ಕೆಲಸವನ್ನು ಪ್ರಧಾನಿ ಮೋದಿ ಮಾಡುತ್ತಿದ್ದಾರೆ. ಇತ್ತೀಚಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಿರುವುದನ್ನು ಸಹಿಸದೇ ಬಿಜೆಪಿ ಈ ರೀತಿ ಗದಾ ಪ್ರಹಾರ ನಡೆಸುತ್ತಿದೆ. ಇಂತಹ ದೌರ್ಜನ್ಯ ನಿಲ್ಲಿಸದಿದ್ದರೇ ಪ್ರತಿಭಟನೆ ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಕೆಪಿಸಿಸಿ ಆದೇಶದ ಮೇರೆಗೆ ಪಕ್ಷದ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಪಕ್ಷದ ವರಿಷ್ಠರ ಮೇಲೆ ಇಡಿ, ಐಟಿ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ತನಿಖೆ ನಡೆಸುವುದು ಸರಿಯಲ್ಲ. ಬಿಜೆಪಿಯು ಪ್ರಜಾಪ್ರಭುತ್ವದ ಕೊಲೆ ಮಾಡುತ್ತಿದೆ ಎಂದರು.

ಮುಖಂಡರಾದ ಕಾಗಲವಾಡಿ ಶಿವಣ್ಣ, ಎಸ್.ಜಯಣ್ಣ, ಎ.ಆರ್.ಕೃಷ್ಣಮೂರ್ತಿ ಅವರು ಮಾತನಾಡಿ ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದರು.

ಪ್ರತಿಭಟನೆಯಲ್ಲಿ ಕೆಪಿಸಿಸಿ ಕಾರ್ಯದರ್ಶಿಗಳಾದ ಎಸ್.ಸಿ.ಬಸವರಾಜು, ಮಂಜುಳಾ ಮಾನಸ, ಮುಖಂಡರಾದ ಗಣೇಶ ಪ್ರಸಾದ್, ಜಿಪಂ ಮಾಜಿ ಸದಸ್ಯರಾದ ಕೆ.ಪಿ.ಸದಾಶಿವಮೂರ್ತಿ, ಎಸ್.ಸೋಮನಾಯಕ, ರಮೇಶ್, ಜಿಲ್ಲಾ ವಕ್ತಾರ ನವೀನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆರ್.ಮಹದೇವು, ಚಿಕ್ಕಮಹದೇವ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮೊಹಮ್ಮದ್ ಅಸ್ಗರ್, ಗುರುಸ್ವಾಮಿ, ಹೆಚ್.ವಿ.ಚಂದ್ರು, ತೋಟೇಶ್, ಎಸ್ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸ ನಾಯಕ, ಎಸ್ಟಿ ಘಟಕ ಜಿಲ್ಲಾಧ್ಯಕ್ಷ ನಾಗರಾಜು, ಜಿಲ್ಲಾ ಮಾಧ್ಯಮ ಕಾರ್ಯದರ್ಶಿ ವಕೀಲ ಅರುಣ್ ಕುಮಾರ್, ಜಿಪಂ ಮಾಜಿ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ, ಜಿಲ್ಲಾ ಮಹಿಳಾ ಅಧ್ಯಕ್ಷೆ ಲತಾಜತ್ತಿ, ಎಪಿಎಂಸಿ ನಿರ್ದೇಶಕರಾದ ಹೊಮ್ಮ ರವಿಶಂಕರ್, ಪ್ರದೀಪ್, ನಗರಸಭಾ ಸದಸ್ಯ ಚಿನ್ನಮ್ಮ, ಮುಖಂಡ ಡಿ.ಎನ್.ನಟರಾಜು, ಎನ್‌ಎಸ್‌ಯುಐ ಮೋಹನ್, ನಾಗೇಂದ್ರ, ಸೋಮುಶೇಖರ್, ಜಿಲ್ಲಾ ಮಹಿಳಾ ಪ್ರಧಾನ ಕಾರ್ಯದರ್ಶಿ ನಾಗರತ್ನ, ಶಕುತಲಾ, ಕೃಷ್ಣವೇಣಿ, ದೇವಿಕ ಇತರರಿದ್ದರು.



ಕಾಂಗ್ರೆಸ್ ಮುಖಂಡರ ವಿರುದ್ಧ ಪ್ರಕರಣ ದಾಖಲು

ಚಾಮರಾಜನಗರ: ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯ ವಿಚಾರಣೆ ನಡೆಸುತ್ತಿರುವುದು ಹಾಗೂ ದೆಹಲಿಯಲ್ಲಿ ಪ್ರತಿಭಟಿಸಿದ ಪಕ್ಷದ ಸಂಸದರು ಹಾಗೂ ಕಾರ್ಯಕರ್ತರ ಮೇಲೆ ಲಾಠಿ ಚಾರ್ಜ್ ಮಾಡಿರುವುದನ್ನು ಖಂಡಿಸಿ ಕೇಂದ್ರ ಸರ್ಕಾರ, ಇಡಿ ವಿರುದ್ಧ ಪ್ರತಿಭಟನೆ ನಡೆಸಿದ ಕಾಂಗ್ರೆಸ್‌ನ ಹಲವು ಮುಖಂಡರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಸಾರ್ವಜನಿಕರಿಗೆ ತೊಂದರೆ ನೀಡಿದ ಆರೋಪದ ಮೇರೆಗೆ ಕಾಂಗ್ರೆಸ್ ಜಿಲ್ಲಾ ವಕ್ತಾರ ಕೆರೆಹಳ್ಳಿ ನವೀನ್, ನಗರ ಬ್ಲಾಕ್ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ ಸೇರಿದಂತೆ ಹಲವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪಟ್ಟಣ ಪೊಲೀಸರು ತಿಳಿಸಿದ್ದಾರೆ.

ಬಿಳಿಗಿರಿರಂಗಬೆಟ್ಟ ಗ್ರಾಪಂಗೆ ಸಾಕಮ್ಮ ಅಧ್ಯಕ್ಷೆ



ಯಳಂದೂರು, ಜೂ.17(ವಿ.ನಾಗರಾಜು)– ತಾಲೂಕಿನ ಬಿಳಿಗಿರಿರಂಗನಬೆಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಸಾಕಮ್ಮ ಆಯ್ಕೆಯಾಗಿದ್ದಾರೆ.

